(SRI H. SIDDAVEERAPPA.)

(*c*) The President as the Executive Head of the Municipal Council is competent to issue licenses to hotels under the Town Municipalities Act. The Kanakapura Municipality have framed bye-laws governing hotels, etc, and Government have in their order No. L. 1503-4—Ml. 112-42-61, dated 5th July 1943, approved them and as long as the Food Restriction Order is in force the Local Bodies have to obtain prior approval of the Director of Food Supplies in respect of all new cases.

(*d*) Yes.

(*e*) Yes, with the prior approval of the Director of Food Supplies after the promulgation of the Mysore Food (Restriction of Service of Meals by Catering Establishments and Others) Order of 1946.

(*f*) A circular is already issued in 1948 that fresh licenses should not be issued without the concurrence of the Director of Food Supplies. Cases of violation will be examined.

(*g*) The following orders of Government were issued from time to time regulating the issue of licenses to hotels in the State :—

(1) Notification No. S.D. 6887—R. 18-45-61, dated 26th March 1946, regarding "the Mysore Food (Restoration of Service of Meals by Catering Establishments and Others) Order of 1946."

(2) G. O. No. S. D. 4654—R. 24-48-13, dated 11th December 1948, issuing instructions to the Heads of Departments and Local Bodies not to issue fresh licenses for opening Hotels and Catering Establishments except with the express approval of the Director of Food Supplies.

(3) Notification No. S.D. 8180—R. 24-50-273, dated 8th March 1951, *re.* the Mysore Food (Austerity Measures in Service of Meals) Order, 1951.

(4) Notification No. L. 14135—Ml. 82-51-20, dated 29th February 1952, issuing Model Rules under Section 46 (1) (*h*) of the Mysore Town Muncipalities Act, 1951, prescribing fees to be charged for licenses granted for the use of any place as a Hotel, Restaurant, Eating Houses, etc.

(5) Notification No. L. 14136—Ml. 82-51-21, dated 29th February 1952, issuing Model Bye-laws under Sections 48 (1) (*b*) (iv) of the Mysore Town Municipalities Act, 1951, for regulating licensing and inspection of places used as Hotels, Restaurants, Eating Houses, etc.

Sri T. SIDDALINGAIYA (Minister for Industries).—I want to submit this. Inreply to one of the supplementaries in Question No. 226 of Sri Hutche Gowda, I stated that interest is paid on the loan given by the Government of India to the Iron and Steel Works. I regret the error. The loan is paid by the Government of India free of interest. I submit this to rectify the error since it has gone into the record.

BUDGET FOR 1952-53—DEMANDS FOR GRANTS—(*contd.*)

SECOND STAGE—(*contd.*).

Demand No. 29—Civil Works.

50. CIVIL WORKS.

Mr. SPEAKER.—Motion moved.—

"That a sum not exceeding Rs. 1,64,06,000 be granted to the Government to complete the sum necessary to defray the charges which will come in course of payment during the year ending 31st March 1953 in respect of 'Civil Works'."

There are a number of cut motions in respect of all the Demands that will have to be taken up for discussion to-day. These are the cut motions agreed by understanding to be taken up for discussion: Under demand No. 29, cut motions Serial Nos. 1 to 5, 7 to 9, 13, 15, 18; under Demand No. 30. Serial Nos. 22, 25, 26, 30; then Serial Nos. 35; 38, 39, 44; 45 and 46. If the Hon'ble Members have no objection, I propose to adopt one thing. The mover of each cut motion will be allotted only five minutes and two other Members may be permitted to take part in the discussion of each cut motion and 3 minutes will be allowed for each of them. There are 21 cut motions to be taken up to-day. Multiplied by 11 minutes (the time taken for each cut motion) it comes to nearly 4 hours. But we have barely $3\frac{1}{2}$ hours at our disposal. I think this is the maximum we can think of. If any other suggestion is made, which is feasible, that may be considered.

Janab J. MOHAMED IMAM (Jagalur).—I made an offer to the Whip on the opposite side. There are important demands under Civil Works, Famine Relief and Stationery and Printing. I made a sporting offer to him that we are not moving any cut motions and they also need not move any cut motions so that we will be free to speak on the Demands in general. We on our side will oppose the Demands and we will have greater scope and we can give more suggestions. We can cover up all the Demands. If they agree, we are not going to move any of the cut motions, because we will be able to cover up both Civil Works and Famine Relief; otherwise, we will be lost in 'Civil Works'.

Sri A. BHEEMAPPA NAIK (Molakalmuru).—Every Member will go on speaking at random and it will never be in order and it will not be convenient.

ಶ್ರೀ ಎಚ್. ಹುಚ್ಚಮಾಸ್ತಿಗೌಡರು (ಹುಲಿಯೂರು ದುರ್ಗ) —ಎದುರು ಪಕ್ಷದ ನಾಯಕರು ಈ ಸೂಚನೆಯನ್ನು ಮೊದಲೇ ಕೊಟ್ಟಿದ್ದರೆ ಚೆನ್ನಾಗಿತ್ತು. ಈಗಾಗಲೆ ಖೋತಾ ಸೂಚನೆಗಳು ಮುಗಿಯುತ್ತಾ ಬಂದು ಇನ್ನು ಒಂದು ದಿವಸ ಮಾತ್ರ ಅದನ್ನು ತೆಗೆದುಕೊಳ್ಳಬೇಕಾಗಿದೆ, ಹೊಸ ರೀತಿಯನ್ನು ಅನುಸರಿಸುವುದಕ್ಕೆ ಮಧ್ಯಕಾಲದಲ್ಲಿ ಸಾಧ್ಯವಿಲ್ಲವೆಂದು ವಿನಯಪೂರ್ವಕವಾಗಿ ಹೇಳುತ್ತೇನೆ.

Janab J. MOHAMED IMAM.—All right, better luck next time.

Mr. SPEAKER.—Then, so far as the time-limit is concerned, the House is agreed, I suppose,

Sri N. HUCHAMASTHY GOWDA.—Time-limit for each demand may be considered, Sir.

Mr. SPEAKER.—Yes, for each demand if 20 minutes are allotted you will have to take them up tomorrow. There will be no time. As such my suggestion is that all the Members need not take part except the mover and the concerned Hon'ble Minister. It is left to the House for consideration.

Janab J. MOHAMED IMAM.—The Hon'ble Minister must take only 10 minutes provided there is only a mover; if some others are allowed to speak they will go on speaking on so many points.

Sri S. SRINIVASA IYENGAR (T.-Narsipur).—Unless it is opposed.

Mr. SPEAKER.—That is my difficulty.

ಶ್ರೀ ಎಸ್. ಆರ್. ನಾಗಪ್ಪಶೆಟ್ಟರು (ಶಿವಮೊಗ್ಗ).—ಡಿಮ್ಯಾಂಡಿಗೆ ಅರ್ಧಗಂಟೆ ಕಾಲ ಅವಕಾಶ ಕೊಟ್ಟು ಸಾಮಾನ್ಯ ಚರ್ಚೆಗೆ ಅವಕಾಶವಿರುವ ಹಾಗೆ ಮಾಡಬೇಕು.

ಅಧ್ಯಕ್ಷರು.—ಜನಾಬ್ ಇಮಾಂ ಸಾಹೇಬರು ಹೇಳುವುದು, 'ಖೋತಾ ಸೂಚನೆಯನ್ನು ಮಂಡಿಸುವುದು ಬೇಕಾಗಿಲ್ಲ, ಡಿಮ್ಯಾಂಡ್ ಮೇಲೆ ಚರ್ಚೆ ಮಾಡೋಣ' ಎಂದು.

ಶ್ರೀ ಎ. ಭೀಮಪ್ಪನಾಯಕರು.—ಏಕೆಂದರೆ ಈದಿವಸ ಅವರದು ಯಾವುದೂ ಇಲ್ಲ!

Mr. SPEAKER.—They have got a considerable number.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಒಂದು ಸೂಚನೆ ಮಾಡುತ್ತೇನೆ. ಎದುರು ಪಕ್ಷದಿಂದ ಬರುವ ಖೋತಾ ಸೂಚನೆಗಳ ವಿಚಾರದಲ್ಲಿ ನಮ್ಮ ಪಕ್ಷದವರು ಯಾರೂ ಅಭಿಪ್ರಾಯ ಕೊಡುವುದಿಲ್ಲ. ಮಂತ್ರಿಗಳು ಉತ್ತರ ಕೊಟ್ಟರೆ ಸಾಕು, ನಾವು ತೃಪ್ತಿಪಟ್ಟುಕೊಳ್ಳುತ್ತೇವೆ.

ಜನಾಬ್ ಜೆ. ಮಹಮದ್ ಇಮಾಂರವರು.—ಖೋತಾ ಸೂಚನೆ ತರುವುದು ನಮ್ಮ ಹಕ್ಕು ಬಾಧ್ಯತೆ, ಹಾಗೆ ಹೇಳಬಾರದು.

Mr. SPEAKER.—That I know; the House knows it. May I know the agreed solution now for the fixing of the time-limit?

Sri B. HUTCHE GOWDA (Turuvekere).—The number of cut motions may be reduced still further, Sir.

Mr. SPEAKER.—It is left to the House.

Sri B. HUTCHE GOWDA.—Where is the time for the Minister to reply? Even at that rate we cannot take up all the cut motions.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ತಮ್ಮ ಸೂಚನೆ ಪ್ರಕಾರ ಖೋತಾ ಸೂಚನೆ ಮಂಡಿಸಲು 5 ನಿಮಿಷ, ಆ ಮೇಲೆ ಇಬ್ಬರು ಮಾತನಾಡಲು 3 ನಿಮಿಷದಂತೆ ಅವಕಾಶ ಕೊಡುವುದನ್ನು ನಾವು ಒಪ್ಪಿಕೊಳ್ಳುತ್ತೇವೆ.

Preparation of Estimates and Compilation Works.

Sri B. N. BORANNA GOWDA (Belur).—Sir I move my cut motion which runs as follows.—

> "That the demand under the head '50 Civil works' for Rs. 1,64,06,000 be reduced by Rs. 100 (to raise a debate on the question of unsatisfactory work in preparing estimates and the compilation works)."

ಸ್ವಾಮಿ, ದೇಶದಲ್ಲಿ ಒಳ್ಳೆಯ ಕೆಲಸ ಮಾಡುವ ಉದ್ದೇಶವಿರತಕ್ಕಂಥ ಒಂದು ಇಲಾಖೆಯೆಂದರೆ ಪಬ್ಲಿಕ್ ವರ್ಕ್ಸ್ ಇಲಾಖೆ. ಆದರೆ ಈ ಇಲಾಖೆಯಲ್ಲಿ ನಡೆಯತಕ್ಕಂಥ ಕೆಲಸ ಕಾರ್ಯಗಳು ಬಹಳ ವಿಷಾದಕರವಾಗಿ ನಡೆಯುತ್ತಿವೆ. ಅಂದಾಜು ಮಾಡುವ ಕಾಲದಲ್ಲಿ ಯಾವ ಸ್ಥಳ ನೋಡಬೇಕು, ಎಲ್ಲಿ ಅಂದಾಜು ಮಾಡಬೇಕು, ಹೇಗೆ ಮಾಡಿದರೆ ಸರಿಯಾಗಿರುತ್ತದೆ ಎಂಬ ವಿವೇಚನೆಯನ್ನು ಉಪಯೋಗಿಸುವುದಿಲ್ಲ. ಪ್ರಾಜೆಕ್ಟ್ ಮಾಡುವಾಗ ಮತ್ತು ಅಣೆಕಟ್ಟನ್ನು ಕಟ್ಟುವಾಗ ಸರಿಯಾಗಿ ನೋಡಿ ಅಂದಾಜನ್ನು ತಯಾರಿಸುವುದಿಲ್ಲ. ಮೊದಲು ಅಂದಾಜು ಕಡಮೆಮಾಡಿ ಸರ್ಕಾರಕ್ಕೆ ಒಪ್ಪಿಸುವುದು, ಆ ಮೇಲೆ ಕೋಟಿಗಟ್ಟಲೆ ಅದನ್ನು ಹೆಚ್ಚಿಸುತ್ತಾ ಹೋಗುವುದು, ಹೀಗೆ ಅನೇಕ ಅಂದಾಜುಗಳು ಮಾಡಲ್ಪಟ್ಟಿವೆ. ಕೆಲವು ಕಡೆ ಮೊದಲು ತಯಾರಾಗಿ ಅನಂತರ ಅವುಗಳು ಸೇತುವೆ ಕಟ್ಟಲು ಮತ್ತು ರಸ್ತೆಗಳನ್ನು ಮಾಡಲು ಹತ್ತಾರು ಸಾವಿರ ರೂಪಾಯಿಗಳ ಅಂದಾಜುಗಳು ಲಕ್ಷಗಟ್ಟಳೆ ಏರಿಹೋಗಿರುವುದನ್ನು ನೋಡಿದ್ದೇವೆ. ಒಂದು ಕಡೆ ಹದಿನಾರು ಸಾವಿರ ರೂಪಾಯಿಗಳ ಅಂದಾಜು ನಲವತ್ತಾರು ಸಾವಿರ ರೂಪಾಯಿಗಳ ವರೆಗೂ, ಇನ್ನೊಂದು ಕಡೆ ಐದು ಲಕ್ಷ ರೂಪಾಯಿಗಳ ಅಂದಾಜು ಒಂದು ಲಕ್ಷ ಚಿಲ್ಲರೆ ರೂಪಾಯಿಗಳ ವರೆಗೂ ಇಳಿದು, ಆಮೇಲೆ ಕೆಲಸಗಳು ಮುಗಿದಿವೆ. ಇದನ್ನು ನೋಡಿದರೆ ಆ ಇಲಾಖೆ ಯಾವ ರೀತಿ ಅಂದಾಜನ್ನು ತಯಾರುಮಾಡುತ್ತಿದೆ ಎಂಬುದು ವ್ಯಕ್ತವಾಗುತ್ತದೆ. ಅಂದಾಜು ಮಾಡಬೇಕಾದರೆ ಸ್ಥಳ ಶೋಧನೆ ಮಾಡದೆ ಯಾರೂ ಯಾವ ಕೆಲಸ ಕಾರ್ಯವನ್ನೂ ನಡೆಸುವುದು ಉಚಿತವಲ್ಲ. ಒಂದು ಸೇತುವೆ ಕಟ್ಟಬೇಕಾದರೆ ಅದನ್ನು ಯಾವ ಜಾಗದಲ್ಲಿ ಹೇಗೆ ಕಟ್ಟಿದರೆ ನಿಲ್ಲುತ್ತದೆ ಎಂಬುದನ್ನು ಯೋಚನೆ ಮಾಡಿ ಕೆಲಸ ಕೈಕೊಳ್ಳುತ್ತಿಲ್ಲ.

ಇನ್ನೊಂದು ವಿಷಯವೇನೆಂದರೆ, ಸ್ಥಳದಲ್ಲಿರುವ ಎಕ್ಸಿಕ್ಯೂಟಿವ್ ಇಂಜಿನಿಯರು ಪ್ರಭಾವಶಾಲಿಗಳ ಜೊತೆಯಲ್ಲಿ ಸೇರಿ ಅವರಿಗೆ ಎಲ್ಲಿ ಸೇತುವೆ ಬೇಕೋ ಅಲ್ಲಿ ಕಟ್ಟುವ ಒಂದು ವಿಧವಾದ ಸಂಪ್ರದಾಯ ಬಂದಿರುವುದರಿಂದ ಸಾಮಾನ್ಯ ಜನರಿಗೆ ಪ್ರಯೋಜನವಾಗುತ್ತಿಲ್ಲ. ಸಾಧಾರಣವಾಗಿ ಜಿಲ್ಲಾ ಬೋರ್ಡು ಅಧ್ಯಕ್ಷರು ಮುಂತಾದ ಸ್ಥಳದಲ್ಲಿರುವ ಪ್ರಮುಖರ ಜೊತೆಯಲ್ಲಿ ಅಧಿಕಾರಿಗಳು ಸೇರಿಕೊಂಡು, ಅವರಿಂದ ಹೆಸರನ್ನು ಪಡೆಯಲು ಅವರಿಗೆ ಬೇಕಾದ ಕೆಲಸಗಳನ್ನು ಹೆಚ್ಚು ನಿಗಾಇಟ್ಟು ಮಾಡಿಕೊಡುತ್ತಿದ್ದಾರೆ. ಜನಸಾಮಾನ್ಯರಿಗೆ ಬೇಕಾದ ಅನುಕೂಲತೆಗಳನ್ನು ಕಲ್ಪಿಸುತ್ತಿಲ್ಲ ಎಂದು ರೈತರು ಹೇಳುತ್ತಿದ್ದಾರೆ.

ಶ್ರೀ ಡಿ. ದೇವರಾಜ ಅರಸ್ ಅವರು.—On a point of order, Sir. ಅವರು ಮಾತನಾಡುವಾಗ ಜಿಲ್ಲಾ ಬೋರ್ಡ್ ಅಧ್ಯಕ್ಷರ ಎಂದು ಜನರಲೈಸ್ ಮಾಡಿ ಹೇಳಿದರು. ಯಾರೋ ಅಧ್ಯಕ್ಷರು ಹಾಗೆ ಮಾಡಿದ್ದರೆ ಅದನ್ನು ಎಲ್ಲರಿಗೂ ಅನ್ವಯಿಸುವಂತೆ ಹೇಳುವುದು ಸರಿಯಲ್ಲ. He cannot generalise and say so.

ಶ್ರೀ ಬಿ. ಎನ್. ಬೋರಣ್ಣಗೌಡರು.—ಸಾಧಾರಣವಾಗಿ ಎಂದು ನಾನು ಹೇಳಿದೆ. ಎಲ್ಲರೂ ಕೆಟ್ಟವರೆಂದು ಆಪಾದನೆ ಮಾಡಲಿಲ್ಲ. ಸಾಧಾರಣವಾಗಿ ಎಂದು ಹೇಳಿದಾಗ, ಕೆಲವರು ಎಂದು ಭಾವಿಸಬೇಕು. ಯಾರನ್ನಾದರೂ ಉದ್ದೇಶಿಸಿ ಹೇಳುತ್ತಿಲ್ಲ. ಇಂಥ ಜಿಲ್ಲೆ ಎಂದು ಹೇಳಿಲ್ಲ. ಒಂದು ಕಡೆ ಆಗಲೆ 25 ಸಾವಿರ ರೂಪಾಯಿಗಳಲ್ಲಿ ಒಂದು ಸೇತುವೆ ಕಟ್ಟುತ್ತೇವೆಂದು ಹೇಳಿ, ಪಬ್ಲಿಕ್ ವರ್ಕ್ಸ್ ಇಲಾಖೆಯವರು 10 ಸಾವಿರ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಆ ಸೇತುವೆ ಪೂರೈಸುವುದಕ್ಕೆ 60—70 ಸಾವಿರ ರೂಪಾಯಿಗಳು ಖರ್ಚಾಗಬೇಕೆಂದು ನಾನು ಆಗಲೇ ಮಂತ್ರಿಗಳಿಗೆ ಹೇಳಿದ್ದೇನೆ. ಸೇತುವೆ ಕಟ್ಟುವಾಗ ಅದು ನಿಲ್ಲುತ್ತದೆಯೇ, ಜನರಿಗೆ ಅನುಕೂಲವಾಗುತ್ತದೆಯೇ, ಎಂದು ಯೋಚನೆಮಾಡದೆ, ಸರ್ಕಾರದ ಹಣವನ್ನು ಅನ್ಯಾಯವಾಗಿ ಖರ್ಚುಮಾಡುತ್ತಿದ್ದಾರೆಂದು ಬಹಳವಾಗಿ ವ್ಯಸನವುಂಟಾಗಿದೆ. ಆ ರೀತಿ ಮಾಡುವುದು ಸೂಕ್ತವಲ್ಲ. ಸರ್ಕಾರದ ಹಣವನ್ನು ಸದ್ವಿನಿಯೋಗ ಮಾಡಬೇಕು. ಇಲಾಖೆಯವರಿಗೆ ದೇಶಕ್ಕೆ ಸೇವೆ ಸಲ್ಲಿಸಬೇಕೆಂಬ ಮನೋಭಾವನೆಯಿದ್ದರೆ ಸರಿಯಾದ ಫಲ ದೊರೆಯುತ್ತದೆ. ಪರಿಶೀಲನೆ ಮಾಡಿ ಸೇತುವೆ ನಿಲ್ಲುತ್ತದೆಯೇ ಇಲ್ಲವೆ, ಅಣೆಕಟ್ಟು ಕಟ್ಟಿದರೆ ಎಷ್ಟು ಎಕರೆ ಜಮೀನು ಸಾಗುವಳಿಯಾಗುತ್ತದೆ ಎಂದು ನೋಡಿ ಆ ಕೆಲಸಗಳನ್ನು ಕೈಕೊಳ್ಳಬೇಕು. ಎಷ್ಟು ಎಕರೆ ಖುಷ್ಕಿ ಜಮೀನು ತರಿಯಾಗುತ್ತದೆ ಎಂಬ ಯೋಚನೆಯಿಲ್ಲದೆ ಒಬ್ಬರ ಉಪಯೋಗಕ್ಕಾಗಿ ಕೆಲವು ಅಣೆಕಟ್ಟುಗಳನ್ನು ಕಟ್ಟಿರುವ ನಿದರ್ಶನಗಳು ಎಷ್ಟೋ ಇವೆ. ಉದಾಹರಣೆಗಳನ್ನು ಇಲ್ಲಿ ಕೊಡಬಹುದು. ಆದರೆ ಜಿಜ್ಞಾಸೆ ಬರಬಹುದೆಂದು ಹೇಳುವುದಿಲ್ಲ. ಆದಾಯ ಬರದೇ ಇರುವ ಅನೇಕ ಕೆಲಸಗಳನ್ನು ಮಾಡಿ ಹಣ ಪೋಲಾಗಿದೆ. ದಕ್ಷತೆಯಿಂದ ಕೆಲಸಮಾಡದೆ ಹೋದದ್ದರಿಂದ ಕೆರೆಯೂ ಇಲ್ಲ, ನೀರೂ ಬರುವ ಹಾಗಿಲ್ಲ. ಈ ರೀತಿಯಾಗಿ ಲಕ್ಷಾಂತರ ರೂಪಾಯಿಗಳು ನಷ್ಟವಾಗಿರುವ ಸನ್ನಿವೇಶಗಳು ತಮಗೂ ಈ ಸಭೆಗೂ ಗೊತ್ತಿದೆ. ಹಣ ದುರುಪಯೋಗವಾಗಬಾರದು, ಸದ್ವಿನಿಯೋಗವಾಗಬೇಕು, ದೇಶಕ್ಕೆ ಒಳ್ಳೆಯದಾಗಬೇಕು, ಜನರಿಗೆ ಅನುಕೂಲವಾಗಬೇಕು ಎಂದು ಯೋಚನೆಮಾಡಿ ಸರಿಯಾಗಿ ಅಂದಾಜು ಮಾಡಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥನೆಮಾಡುತ್ತೇನೆ. ಸಾಮಾನ್ಯವಾಗಿ ಮಳೆ

ನಾಡು ಪ್ರಾಂತಗಳಲ್ಲಿ ಚಿಕ್ಕ ಚಿಕ್ಕ ಹಳ್ಳಗಳು ಹೆಚ್ಚಾಗಿದ್ದು ಮಳೆಗಾಲದಲ್ಲಿ ಓಡಾಡುವುದು ಕಷ್ಟವಾಗುತ್ತದೆ. ಆರು ತಿಂಗಳು ದ್ವೀಪದಲ್ಲಿದ್ದಂತೆ ಅಲ್ಲಿನ ಜನರು ಇದ್ದ ಕಡೆಯೇ ಇರಬೇಕಾದ ಸನ್ನಿವೇಶಗಳಿವೆ. ಇಂಥಾದ್ದನ್ನು ಅನೇಕ ಸಾರಿ ಮಂತ್ರಿಗಳಿಗೂ ಮತ್ತು ಸರ್ಕಾರದವರಿಗೂ ಹೇಳಿದ್ದೇನೆ. ಅಂದಾಜು ಮಾಡಲು ಅವಕಾಶವಿದ್ದರೂ ಕೂಡ ಒಂದು ವರ್ಷವಾದರೂ ಮಾಡುವುದಿಲ್ಲ. ಬೆಳಗ್ಗೆ ಸಾಯಂಕಾಲ ಹೋಗಿ ನೋಡಿದರೂ ಅಂದಾಜಾಗಿ ಮೇಲಕ್ಕೆ ಹೋಗುವುದಿಲ್ಲ. ಹೀಗಾಗಿ ಬಹಳ ಅನಾನುಕೂಲವಾಗಿದೆ. ಮಲೆನಾಡಿನಿಂದ ದೇಶಕ್ಕೆ ಬೇಕಾದ ಭತ್ತ, ಕಾಫಿ ಬೀಜ, ಏಲಕ್ಕಿ ಮುಂತಾದುವನ್ನು ಬೆಳೆದು ಒದಗಿಸುತ್ತಿರುವಾಗ, ದೇಶದ ಸಂಪತ್ತನ್ನು ಹೆಚ್ಚಿಸುತ್ತಿರುವಂತಹ ಆ ಮಲೆನಾಡಿಗೆ ತಕ್ಕ ಪ್ರತಿಫಲ ದೊರಕುತ್ತಿಲ್ಲ. ಈ ವಿಚಾರವನ್ನು ಅನೇಕ ಸಾರಿ ಹೇಳಿದ್ದೇನೆ. ನಾವು ನೋಡಿದಹಾಗೆ ಕಳೆದ ಇಪ್ಪತ್ತು ವರ್ಷಗಳಿಂದ ಇದೇ ರೀತಿಯಲ್ಲಿ ನಮ್ಮ ಜಿಲ್ಲೆಯಲ್ಲಿ ನಡೆಯುತ್ತಿದೆ. ಸಾರ್ವಜನಿಕರಿಗೆ ಅದರಲ್ಲೂ ಹಾಸನದ ಡಿಸ್ಟ್ರಿಕ್ಟ್‌ನಲ್ಲಿ ಏನೂ ಪ್ರಯೋಜನವಾಗಿಲ್ಲ ಎಂದು ಖಚಿತವಾಗಿ ಹೇಳುತ್ತೇನೆ. ಅಂಥ ಪ್ರಸಂಗ ಆಗಬಾರದು ಎಂಬ ಉದ್ದೇಶದಿಂದ ಈ ಖೋತಾನಿರ್ಣಯವನ್ನು ತಂದಿದ್ದೇನೆ. ಸಭೆಯ ಒಪ್ಪಿಗೆಗೆ ಇದನ್ನು ಇಟ್ಟಿದ್ದೇನೆ.

Mr. SPEAKER.—Cut motion moved:

"That the demand be reduced by Rs, 100."

The understanding is that the Hon'ble Minister will reply.

ಶ್ರೀ ಕಡಿದಾಳ್ ಮಂಜಪ್ಪನವರು (ರೆವೆನ್ಯೂ ಮತ್ತು ಮರಾಮತ್ ಶಾಖೆಗಳ ಮಂತ್ರಿಗಳು).—ಅಧ್ಯಕ್ಷರೇ, ಸ್ವಾಮಿ, ಶ್ರೀಮಾನ್ ಬೋರಣ್ಣಗೌಡರು ಹೇಳಿದಂತೆ ಹಾಸನ ಡಿಸ್ಟ್ರಿಕ್ಟಿನಲ್ಲಿ ಪ್ರಾರಂಭಿಸಿರತಕ್ಕ ಕೆಲವು ಸೇತುವೆಗಳ ಸಂಬಂಧದಲ್ಲಿ ಕೆಲವು ಅಚಾತುರ್ಯಗಳು ನಡೆದಿವೆ. ಸರಿಯಾದ ಸ್ಥಳದಲ್ಲಿ ಸೈಟ್ ಸೆಲೆಕ್ಟ್ ಮಾಡದೆ ಅದರಿಂದ ಸರ್ಕಾರಕ್ಕೆ ಬಹಳಮಟ್ಟಿಗೆ ನಷ್ಟ ಸಂಭವಿಸತಕ್ಕ ಪರಿಸ್ಥಿತಿಯಿತ್ತು. ಆದರೆ ದೈವ ವಶಾತ್ ಆ ನಷ್ಟ ಸಂಭವಿಸುವುದನ್ನು ಈಗ ತಪ್ಪಿಸಲಾಗಿದೆ. ಕೆರೋಡಿ ಸೇತುವೆ ಸಂಬಂಧದಲ್ಲಿ ಮೊದಲು ಅಧಿಕಾರಿಗಳು ನಿರ್ಧರಮಾಡಿದ ಸೈಟನ್ನು ಸರ್ಕಾರದವರು ಮಂಜೂರುಮಾಡಿದ್ದರು. ಶ್ರೀಮಾನ್ ಬೋರಣ್ಣಗೌಡರು ಹೇಳಿದಂತೆ, ಸರ್ಕಾರದವರಿಗೆ ಬಹಳ ಹಣ ನಷ್ಟವಾಗುತ್ತಾ ಇತ್ತು; ಅದು ತಪ್ಪಿದೆ. ಹಾರಬಾಳು ಊರಿನ ಹತ್ತಿರ ಇನ್ನೊಂದು ಸೇತುವೆ ಸೈಟನ್ನು ಅಲ್ಲಿದ್ದ ಸ್ಥಳೀಯ ಇಂಜನಿಯರುಗಳು ಸೆಲೆಕ್ಟ್ ಮಾಡಿದರು; ಈಚೆಗೆ ನೋಡಿದ್ದರಲ್ಲಿ ಅದೂ ಸರಿಯಾದ ಸೈಟ್ ಅಲ್ಲ, ಪ್ರಯೋಜನವಾಗುವುದಿಲ್ಲ ಎಂದು ಹೇಳಿ ತೀರ್ಮಾನ ಮಾಡಿದ ನಂತರ ಆ ಸೈಟನ್ನು ಈಗ ಬದಲಾಯಿಸುವುದಕ್ಕೆ ತಕ್ಕ ಕ್ರಮವನ್ನು ಕೈಕೊಂಡಿದ್ದೇವೆ. ಆದರೆ ಜನರಲ್ ಆಗಿ ಸ್ವೀಪಿಂಗ್ ರಿಮಾರ್ಕ್ ಮಾಡುವುದನ್ನು ಒಪ್ಪುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಅವರು ಹೇಳಿದ್ದನ್ನು ಒಪ್ಪಿಕೊಂಡಿದ್ದೇನೆ. ಆದರೆ ಅವರ ಭಾಷಣದ ಧೋರಣೆ ಜನರಲ್ ಆಗಿ, ಸ್ವೀಪಿಂಗ್ ರಿಮಾರ್ಕ್ ಮಾಡತಕ್ಕ ಸ್ವರೂಪದಲ್ಲಿತ್ತು. ಆದ್ದರಿಂದ ಸ್ವೀಪಿಂಗ್ ಆಗಿ ಹೇಳುವುದು ಸೂಕ್ತವಲ್ಲ. ನಮ್ಮ ಇಲಾಖೆಯಲ್ಲೂ ಕೂಡ ದಕ್ಷರಾದ ಮತ್ತು ಪ್ರಾಮಾಣಿಕರಾದ ಅಧಿಕಾರಿಗಳು ಇದ್ದಾರೆ ಎಂಬುದನ್ನು ಮಾನ್ಯ ಬೋರಣ್ಣಗೌಡರು ತಿಳಿಯಬೇಕು. 'ಕೆಲವು ಜಿಲ್ಲಾ ಬೋರ್ಡ್ ಅಧ್ಯಕ್ಷರು ಅವರ ಪ್ರಭಾವವನ್ನು ಉಪಯೋಗಿಸಿ ಅವರಿಗೆ ಬೇಕಾದ ಸ್ಥಳದಲ್ಲಿ ಸೇತುವೆಯನ್ನು ನಿರ್ಮಾಣಮಾಡುವುದಕ್ಕೆ ಪ್ರಯತ್ನಪಟ್ಟಿದ್ದಾರೆ, ಮಾಡಿಸಿಕೊಂಡಿದ್ದಾರೆ' ಎಂದು ಆಪಾದನೆ ಮಾಡಿದ್ದಾರೆ. ಆ ವಿಚಾರದಲ್ಲಿ ಸರ್ಕಾರದವರು ಏನೂ ಮಾಡುವುದಕ್ಕಾಗುವುದಿಲ್ಲ. ಯಾವುದಾದರೂ ಒಂದು ನಿರ್ದಿಷ್ಟವಾದ ಉದಾಹರಣೆಯನ್ನು ನನಗೆ ಕೊಡುವುದಾದರೆ, ಆ ವಿಚಾರದಲ್ಲಿ ಸರ್ಕಾರದವರು ಸೂಕ್ತ ಕ್ರಮ ಕೈಕೊಳ್ಳುತ್ತಾರೆ ಎಂದು ಭರವಸೆಕೊಡಲಿಚ್ಛಿಸುತ್ತೇನೆ.

ಮಲೆನಾಡಿನಲ್ಲಿ ಚಿಕ್ಕ ಚಿಕ್ಕ ಸೇತುವೆಗಳು ಆಗಬೇಕೆಂದು ಹೇಳಿದರು. ಅದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಸೇತುವೆ ಆಗದೇ ಕೆಲಸ ನಿಂತಿರುವುದಕ್ಕೆ ನ್ಯಾಯವಾದ ಕಾರಣ ಎಂದರೆ ದುಡ್ಡಿನ ಅಭಾವ. ಮಲೆನಾಡಿನಲ್ಲಿ ದುಡ್ಡು ಒದಗಿದ ಹಾಗೆಲ್ಲಾ ಸಣ್ಣ ಸಣ್ಣ ಸೇತುವೆಗಳನ್ನು ಕಟ್ಟುವುದಕ್ಕೆ ಕೈಲಾದಷ್ಟು ಪ್ರಯತ್ನ ಪಡುತ್ತೇವೆ ಎಂದು ಶ್ರೀಮಾನ್ ಬೋರಣ್ಣಗೌಡರಿಗೆ ಭರವಸೆ ಕೊಡುತ್ತೇನೆ.

ಎಸ್ಟಿಮೇಟು ತಯಾರು ಮಾಡುವುದರಲ್ಲಿ ನಿಧಾನವಾಗುತ್ತಿದೆ ಎಂದು ಹೇಳಿದರು. ನಿಧಾನವಾಗುವುದು ನಿಜ. ಇದಕ್ಕೆ ಕಾರಣಗಳು ಇವೆ. ಮೊದಲು ಎಸ್ಟಿಮೇಟು ಮಾಡುತ್ತಾರೆ. ಇದು ಷೆಡ್ಯೂಲ್ ಆಫ್ ರೇಟ್ಸ್‌ಗನುಸಾರವಾಗಿ ಆಗಬೇಕು. ಎಸ್ಟಿಮೇಟು ತಯಾರಾದ ನಂತರ ಅದು ಕೆಲವು ಸಂದರ್ಭಗಳಲ್ಲಿ ಬೇರೆ ಇಲಾಖೆಯವರ ಕೌಂಟರ್ ಸಿಗ್ನೇಚರ್‌ಗೆ ಹೋಗಬೇಕು. ಉದಾಹರಣೆಗೆ, ವಿದ್ಯಾಭ್ಯಾಸದ ಇಲಾಖೆ, ಯೂನಿವರ್ಸಿಟಿ, ವ್ಯವಸಾಯದ ಇಲಾಖೆ, ಇನ್ನು ಕೆಲವು ಸಂದರ್ಭಗಳಲ್ಲಿ ರೆವಿನ್ಯೂ ಇಲಾಖೆಗಳ ಕೌಂಟರ್ ಸಿಗ್ನೇಚರ್‌ಗೆ ಹೋಗಬೇಕಾಗುತ್ತದೆ. ಅದಕ್ಕೆ ಸ್ವಲ್ಪ ಕಾಲಬೇಕು. ಕೊನೆಯದಾಗಿ ಟೆಂಡರ್ ಕರೆದನಂತರ ಟೆಂಡರ್ ರೇಟಿಗೂ ಎಸ್ಟಿಮೇಟ್ ರೇಟಿಗೂ ಅರ್ಥಾರ್ಥ ಸಂಬಂಧವಿರುವುದಿಲ್ಲ. ಪುನಃ ಟೆಂಡರ್‌ಗನುಸಾರವಾಗಿ ಎಸ್ಟಿಮೇಟನ್ನು ನಾವು ತಿದ್ದುಪಡಿ ಅಥವಾ ಬದಲಾವಣೆ ಮಾಡಬೇಕಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಅನಿರೀಕ್ಷಿತವಾದ ಕೆಲಸ ಕಾರ್ಯಗಳನ್ನು ಯೋಜನೆಗೆ ಸಂಬಂಧಪಟ್ಟಂತೆ ತೆಗೆದುಕೊಳ್ಳಬೇಕಾಗುತ್ತದೆ. ಆಗಲೂ ಕೂಡ ಈ ಯೋಜನೆಯನ್ನು ಪುನರ್ವಿಮರ್ಶೆ ಮಾಡಬೇಕಾದ ಸಂದರ್ಭ ಬರುತ್ತದೆ. ಕೆಲವು ಸಂದರ್ಭಗಳಲ್ಲಿ ಅನಾವಶ್ಯಕವಾಗಿ ಕಾಲಹರಣಮಾಡಿ ನಿಧಾನವಾಗಿರುವುದೂ ಕೂಡ ನನ್ನ ಗಮನಕ್ಕೆ ಬಂದಿದೆ. ಎಲ್ಲೆಲ್ಲಿ ಅಧಿಕಾರಿಗಳ ಲೋಪದೋಷಗಳಿಂದ ವಿಳಂಬವಾಗಿ ಸರ್ಕಾರದವರಿಗೆ ನಷ್ಟ ಸಂಭವಿಸುತ್ತದೆಯೋ ಅಂಥ ಸಂದರ್ಭಗಳಲ್ಲೆಲ್ಲಾ ನಿರ್ದಾಕ್ಷಿಣ್ಯವಾದ ದೃಷ್ಟಿಯಿಂದ ಪರಿಶೀಲನೆ ಮಾಡಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಉಗ್ರವಾದ ಶಿಸ್ತಿನ ಕಾರ್ಯಕ್ರಮವನ್ನೂ ಕೂಡ ಕೈಕೊಳ್ಳುವುದಕ್ಕೆ ಸರ್ಕಾರದವರು ಸಿದ್ಧರಾಗಿದ್ದಾರೆ ಎಂಬುದನ್ನು ನಾನು ತಿಳಿಸಲಿಚ್ಛಿಸುತ್ತೇನೆ. ಇಷ್ಟು ವಿವರಗಳನ್ನು ಹೇಳಿದ ನಂತರ ಶ್ರೀಮಾನ್ ಬೋರಣ್ಣಗೌಡರು ತಮ್ಮ ಕತ್ತರಿ ನಿರ್ಣಯವನ್ನು ವಾಪಸು ತೆಗೆದುಕೊಳ್ಳುತ್ತಾರೆ ಎಂದು ನಂಬಿದ್ದೇನೆ.

Sri A. BHEEMAPPA NAIK.—I want to know whether the Cabinet has deserted the Revenue Minister since he is sitting alone? (Laughter).

Sri B. N. BORANNA GOWDA.—I beg leave to withdraw my cut motion.

The cut motion was, by leave, withdrawn.

Widening the Malavlli Tank bund.

Sri B. P. NAGARAJA MURTHY (Malavalli).—Sir, I move:

> "That the demand under the head '50. Civil Works' for Rs. 1,64,06,000 be reduced by Rs. 100 (to press for the widening of the Malavalli Tank bund immediately to avoid accidents that occur often)."

ಸ್ವಾಮಿ, ಮೈಸೂರು, ಬೆಂಗಳೂರು ರೈಲ್ವೆರಸ್ತೆ ಮಧ್ಯದಲ್ಲಿರತಕ್ಕ ಮದ್ದೂರು ರೈಲ್ವೆ ನಿಲ್ದಾಣದಿಂದ ಹೊರಡತಕ್ಕ ರಸ್ತೆ ಬಹಳ ಮುಖ್ಯವಾದ ಸ್ಥಳಗಳಿಗೆ ಎಂದರೆ ಮಳವಳ್ಳಿ, ಶಿಂಷಾ, ಶಿವನಸಮುದ್ರ ಮತ್ತು ಮದರಾಸು ಪ್ರಾಂತದ ಕೊಳ್ಳೇಗಾಲ ಈ ಮಾರ್ಗಗಳಿಗೆ ಹೋಗತಕ್ಕ ಬಹಳ ಪ್ರಮುಖ್ಯವಾದ ರಸ್ತೆ. ಈ ರಸ್ತೆ ಮಳವಳ್ಳಿ ಟೌನಿನಲ್ಲಿರತಕ್ಕ ಕೆರೆ ಏರಿಯ ಮೇಲೆ ಹೋಗತಕ್ಕದ್ದಾಗಿದೆ. ಒಂದು ಕಡೆ ಕೆರೆ ಮತ್ತೊಂದು ಕಡೆ ಅಚ್ಚುಕಟ್ಟು ಇರುವುದರಿಂದ ಏರಿಯನ್ನು ಬಿಟ್ಟು ರಸ್ತೆಯನ್ನು ಬೇರೆ ಮಾರ್ಗದಲ್ಲಿ ಓಡಲಾಯಿಸುವುದಕ್ಕೆ ಸಾಧ್ಯವಿಲ್ಲದೆ ಕೆರೆ ಏರಿಯ ಮೇಲೆಯೇ ಬಹಳ ವರ್ಷಗಳಿಂದಲೂ ಹೋಗಬೇಕಾಗಿದೆ. ಇದನ್ನು ಮಳವಳ್ಳಿ ತಾಲ್ಲೂಕಿನ ಪ್ರಜೆಗಳು ಬಹಳ ವರ್ಷಗಳಿಂಧಲೂ ಕೂಡ ಸರ್ಕಾರದವರ ಗಮನಕ್ಕೆ ತಂದು 'ಈ ರಸ್ತೆ ಪ್ರಯಾಣಕ್ಕೆ ಬಹಳ ಅಪಾಯಕರವಾಗಿದೆ, ಅಗಲಮಾಡಿ ಸಂಚಾರಕ್ಕೆ ಅನುಕೂಲ ಕಲ್ಪಿಸಿಕೊಡಬೇಕು' ಎಂದು ಆಗಿಂದಾಗ್ಗೆ ಒತ್ತಾಯಪಡಿಸಿದಾಗ್ಯೂ ಸಹ 'ಕೆರೆ ಏರಿ ಅಗಲವಾಗಿಲ್ಲ, ಜಲ್ಲಿ ಮತ್ತು ಮಣ್ಣು ಹಾಕುವ ಹಾಗಿಲ್ಲ, ಜಲ್ಲಿ ಮಣ್ಣು ಹಾಕಿ ಅಗಲ ಮಾಡುವುದರಿಂದ ಅದು ನಷ್ಟವಾಗುತ್ತದೆ' ಎಂದು ಮಾಡುತ್ತಾ ಇಲ್ಲ. ಹೀಗೆ ರಸ್ತೆ ಹಿಂದಿನಿಂದಲೂ ಯಾವರೀತಿಯಲ್ಲಿತ್ತೋ ಅದೇ ರೀತಿಯಲ್ಲಿದ್ದು ಪ್ರಯಾಣಕ್ಕೆ ಬಹಳ ತೊಂದರೆಯಾಗಿದೆ. ಕೆರೆ ಏರಿ ಇರುವ ಸ್ಥಿತಿಯಲ್ಲಿ ಒಂದು ಕಡೆಯಿಂದ ಬರುತ್ತಿರುವ ಗಾಡಿ ಅಥವಾ ಮೋಟಾರು ಪೂರ್ತಿಯಾಗಿ ಇನ್ನೊಂದು ಕಡೆಗೆ ಹೋಗುವವರೆಗೂ ಆ ಕಡೆಯಲ್ಲಿರುವ ಗಾಡಿ ಅಥವಾ ಮೋಟಾರು ಈ ಕಡೆಗೆ ಬರುವುದಕ್ಕೆ ಸಾಧ್ಯವಿಲ್ಲ. ಎತ್ತಿನಗಾಡಿ ಬರುವಾಗ ಕಾರು ಹೋಗುತ್ತಿದ್ದರೆ, ಒಂದುವೇಳೆ ಆ ಗಾಡಿಗೆ ಕಟ್ಟಿರತಕ್ಕ ಎತ್ತುಗಳು ಬೆದರತಕ್ಕ ಎತ್ತುಗಳಾಗಿದ್ದರೆ ನೀರಿಲ್ಲದೇ, ಇರತಕ್ಕ ಕೆರೆಯಲ್ಲಿ ಬಿದ್ದು ಸಾಯಬೇಕು, ಇಲ್ಲದೇ ಇದ್ದರೆ ಅಚ್ಚುಕಟ್ಟಿನ ಕೆಳಗೆ 20–30 ಅಡಿ ಆಳದಲ್ಲಿ ಉರುಳಿ ಅಪಾಯಕ್ಕೆ ಗುರಿಯಾಗಬೇಕು. ಈಗ ಎರಡು ವರ್ಷಗಳಲ್ಲಿ ಅಂದಾಜು ಸರ್ಕಾರದ ಮುಂದೆ ಬಂದು ಇನ್ನೂ ಕೂಡ ತೀರ್ಮಾನವಾಗದೇ ಹಾಗೆಯೇ ನಿಂತಿದೆ ಎಂಬ ವರ್ತಮಾನ ನನಗೆ ಬಂದಿದೆ. ಈಗಲಾದರೂ ಕೂಡ ಅಲ್ಲಿ ಆಗಾಗ್ಗೆ ನಡೆಯುತಕ್ಕ ಅಪಾಯಗಳನ್ನು ತಪ್ಪಿಸುವುದಕ್ಕೆ ಸರ್ಕಾರದವರು ಆದಷ್ಟು ಜಾಗ್ರತೆ ಈ ಕೆರೆಯ ಏರಿಯನ್ನು ಅಗಲಮಾಡಿಸಿ ಸಂಚಾರ ಸೌಕರ್ಯಕ್ಕೆ ಅನುಕೂಲಮಾಡಿ ಕೊಡಬೇಕೆಂದೂ, ಆ ಮೂಲಕ ಆಗಾಗ್ಗೆ ನಡೆಯುತಕ್ಕ ಅಪಾಯಗಳನ್ನು ತಪ್ಪಿಸಬೇಕೆಂದೂ ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ.

Mr. SPEAKER.—Cut motion moved:

> "That the demand be reduced by Rs. 100."

The Hon'ble Minister will reply.

Sri M. CHIKKALINGIAH (Malavalli–Scheduled Castes).—Only two minutes, Sir.

Mr. SPEAKER.—If I allow the Hon'ble Member, I will have to allow others also. The Hon'ble Minister will reply.

ಶ್ರೀ ಕಡಿದಾಳ್ ಮಂಜಪ್ಪನವರು.—ಈ ರಸ್ತೆಯನ್ನು ವಿಸ್ತರಿಸತಕ್ಕ ಆವಶ್ಯಕತೆ ಇದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ರಸ್ತೆ ಅಗಲ ಮಾಡುವುದಕ್ಕೆ 1950ರಲ್ಲಿ ಒಂದು ಅಂದಾಜನ್ನು ತಯಾರು ಮಾಡಿ ಅದನ್ನು ಸರ್ಕಾರಕ್ಕೆ ಕಳುಹಿಸಿದ್ದರು. ಆಗಿನ ಕಾಲದಲ್ಲಿ ದುಡ್ಡಿಲ್ಲದೇ ಇದ್ದುದರಿಂದ ಆ ಕೆಲಸ ಹಾಗೆಯೇ ನಿಂತುಹೋಗಿದೆ. ಸಾಧ್ಯವಾದಷ್ಟು ಜಾಗ್ರತೆ ಈ ಕೆಲಸವನ್ನು ಕೈಕೊಳ್ಳುವುದಕ್ಕೆ ಪ್ರಯತ್ನಪಡುತ್ತೇವೆ ಎಂದು ಹೇಳಿ, ಭರವಸೆ ಹೇಳಿದ ಮೇಲೆ, ಮಾನ್ಯ ಸದಸ್ಯರು ಈ ಕತ್ತರಿ ನಿರ್ಣಯವನ್ನು ವಾಪಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

Sri B. P. NAGARAJA MURTHY.—I beg leave of the House to withdraw my cut motion.

The cut motion was, by leave, withdrawn.

1-30 P.M.

Mr. SPEAKER.—The third cut motion stands in the names of Janab Mohamed Inam and Sri S. Srinivasa Iyengar. One of them will speak.

Bad Condition of Roads.

Sri S. SRINIVASA IYENGAR (T.-Narsipur)—Sir, I move:

> "That the demand under the head "50 Civil Works" for Rs. 1,64,06,000 be reduced by Rs. 100 (to raise a debate on the bad conditions of roads in the State)."

Sir, while moving this cut motion, I beg to place before this House a few points. Under this Head of Civil

Works, for Communications, a provision of Rs. 13·4 lakhs has been made, out of which a sum of Rs. 12 lakhs has been drawn from the Sugarcane Cess Fund and as such, the expenditure is entirely incurred to improve the roads in the sugarcane area only. Only Rs. 50,000 is allotted for minor repairs of roads throughout the State. As such, the State has not made any provision for original works under "Communications" in any other part of the State. Sugar cane is grown in other parts of the State too.

Sri D. DEVARAJ URS (Hunsur).—It may be corrected; it is not so. Under "Communications" 38 lakhs, 71 thousand and odd has been provided. Please refer to page 131 of the budget.

Sri S. SRINIVASA IYENGAR.—Original Works—Communications Rs. 13,40,000. The Hon'ble Member may kindly see page 131.

Sri D. DEVARAJ URS.—Again, under Development Schemes Rs. 64,000 have been provided.

Sri S. SRINIVASA IYENGAR—I will come to that. So, Sir, as the sugarcane bought by the Sugar Factory, Mandya, is grown in other areas than Mandya District, I submit, that while allotting that amount, such of the roads that are outside Mandya must also be taken into consideration.

Sri H. K. VEERANNA GOWDH (Mandya).—Sir, I would like to correct the Member. The cess is levied only on the cane grown on lands which are within a radius 12 or 15 miles from Mandya. So, the cess is meant for the use of the area from which cane growers supply the cane and cess is levied on that.

Sri B. HUTCHE GOWDA (Turuvekere).—Even that is not correct. Cess is collected only on the cane supplied to the factory.

Sri S. SRINIVASA IYENGAR.—I have made it very clear that cess is collected at the Sugar Factory on the cane crushed at the Factory. It does not make a distinction as to where it is grown. If the Hon'ble Member is in a position to tell me that cess is collected only on the cane grown in a particular area, I will correct myself.

Sri H. K. VEERANNA GOWDH.—The cess is collected on the cane supplied to the Factory. But the factory gives permission to raiyats of certain areas of Mandya District to grow cane and they are called 'oppige' cane. The others are 'non-oppige' and when the price of jaggery fell, others also applied to the Factory and it was only an obligation on the part of the Factory to take it. They do not take outside cane for crushing every year. Therefore, the money allotted by the Sugarcane Cess Committee cannot be spent outside the Visvesvaraya Canal Area.

Sri S. SRINIVASA IYENGAR.—Mr. Speaker, my object in placing this cut motion before this House is this. It is not a provision out of the General Revenues of the State. It is a provision out of a fund built up by levying cess.

Mr. SPEAKER.—Sri Veeranna Gowdh's point is, as the cess amount is collected from the Visveswaraya Canal area, that should be spent within that area and not for the whole State.

Sri S. SRINIVASA IYENGAR.—But my point is, the cane that is supplied from the other areas is not exempted from the levy of this cess. If Sri Veeranna Gowdh can convince me that cess is not collected on cane supplied from other Districts, then I certainly say that I do not want it.

Sri H. K. VEERANNA GOWDH.—Generally, no cane is supplied to the Factory except from Visvesvaraya Canal area.

Sri S. SRINIVASA IYENGAR.—But, I say that in T.-Narsiper Taluk, Bannur Hobli, supplied cane to the Sugar Factory.

Sri H. K. VEERANNA GOWDH.—I may be permitted to say that once the people of Bannur refused in spite of our request to supply cane to the factory. But, when the price of jaggery fell, they came with their petitions and it is only as an obligation the Company accepted their cane. It is an exceptional case.

Mr. SPEAKER.—These are facts known to both the Hon'ble Members. You may go on, Sri Srinivasa Iyengar.

Sri S. SRINIVASA IYENGAR.—As regards the other things, for repairs Rs. 47,24,500 is provided. In this provision, repairs for buildings and roads are included. For road repairs Rs. 38·71 lakhs is provided. After the reclassification of roads in the State, we have now four classes—class 1, class 2, class 3 and class 4—and the total mileage in the State is 10,853. Class 1 is entirely maintained by the Government. Classes 2, 3 and 4 are maintained by the Government and the District Boards contributing equally. I submit Sir, after deducting the amount that is necessary to maintain class 1 roads, we will have no more than Rs. 19·98 lakhs to maintain 8,475 miles in the State. It works out to 235 rupees a mile. It does not even work out to Rs. 30 a furlong. You will not have funds to pick mud from the sides and throw it on the road. The provision now made is absolutely insufficient for the maintenance of roads. Road is not a dead thing, it is a living thing. For re-coating one furlong of road of 12 ft. width, you want nearly Rs. 800. When you want Rs. 7,000 for re-coating one mile of road and if you do not make necessary provisions to maintain them.........

Mr. SPEAKER.—Some of these roads are re-classified from 1st April.

Sri S. SRINIVASA IYENGAR.—I have said it, Sir. I said that class 1 roads are entirely maintained by Government. It has cost the Government Rs. 18·73 lakhs to maintain class 1 roads, Classes 2, 3 and 4 are maintained by Government and the District Boards contributing equally. So, for this we have only Rs. 19·98 lakhs; when an average is struck, it does not work out to more than Rs. 235 a mile. That is what I said. With these roads...............

Sri A. BHEEMAPPA NAIK.—Out of Government portion.

Sri S. SRINIVASA IYENGAR.—It is on the receipts side, it is taken.

Mr. SPEAKER.—The Hon'ble member can go on.

Sri S. SRINIVASA IYENGAR.—Now Sir, just because the provision is so small and just because we have not thought of it seriously, roads have been rendered bad. The number of vehicles, lorries, buses that are using these roads have increased in large proportion. But the grant made for their repairs and maintenance can hardly be compared with the increase in the volume of traffic. I therefore submit, that greater amount is necessary.

In this connection I submit Sir, that the Government of India had appointed a committee for the classification of these roads in the whole of India and that report is generally known as the Nagpur Plan.

Mr. SPEAKER.—Does the Hon'ble Member know that he is given only 5 minutes?

Sri S. SRINIVASA IYENGAR.—But there were a lot of interruptions Sir. So, please pardon me Sir.

Mr. SPEAKER.—The Member may go on.

Sri S. SRINIVASA IYENGAR.—And according to this Nagpur Plan, the Government of India take the responsibility of maintaining these trunk roads. Class 4 and class 7 roads run through the State of Mysore and if these roads were handed over to the Central Government for maintenance, I am sure, they could have maintained these roads in a better condition and in the best manner so as to compare well with the standards of roads in the bordering States. Our Government has on more than one occasion made comparison with the bordering Provinces. I submit Sir, that our Government may well compare themselves with the bordering States as regards the maintenance of roads. Suppose we accept the Government of India's request and the Nagpur Plan is accepted by the Government of Mysore, it involves us in an expenditure of Rs. 2,000 per mile. So for these 300 miles of trunk roads which pass through the State of Mysore we would be giving about Rs. 6,00,000 and it is worth it, because they would certainly take care of our roads in a better way. Therefore Sir, I submit that the Nagpur Plan may be accepted by the Government and they may confine

themselves to other works with our revenues. Thank you Sir.

Mr. SPEAKER.—Cut motion moved.

"That the demand be reduced by Rs. 100."

ಶ್ರೀ ಕಡಿದಾಳ್ ಮಂಜಪ್ಪನವರು.—ಅಧ್ಯಕ್ಷರೆ, ಸ್ವಾಮಿ, ಸಂಸ್ಥಾನದ ಕೆಲವು ಕಡೆಗಳಲ್ಲಿ ರಸ್ತೆಗಳು ಕೆಟ್ಟು ಹೋಗಿರುವುದನ್ನು ನಾನು ಒಪ್ಪಿಕೊಳ್ಳಬೇಕಾಗಿದೆ. ಕೆಲವುಕಡೆ ರಸ್ತೆಗಳಿಲ್ಲದಿರುವುದೂ ನಿಜ. ರಸ್ತೆಗಳ ರಿಪೇರಿ ಬಗ್ಗೆ ಒದಗಿಸಿರುವ ಹಣ ಸಾಲದೆಂಬುದನ್ನೂ ಒಪ್ಪಿಕೊಳ್ಳುತ್ತೇನೆ. ಆದರೆ ನಮ್ಮ ಸಂಸ್ಥಾನದಲ್ಲಿ ಶ್ರೀಮಾನ್ ಶ್ರೀನಿವಾಸಯ್ಯಂಗಾರ್ಯರು ಕೊಟ್ಟ ಲೆಕ್ಕದ ಪ್ರಕಾರ 10,853 ಮೈಲಿ ರಸ್ತೆಗಳಿವೆ. ಈ ರಸ್ತೆಗಳನ್ನೆಲ್ಲಾ ಅಮೆರಿಕ ಇಂಗ್ಲೆಂಡ್ ದೇಶಗಳಲ್ಲಿರುವಂತೆ ಇಡುವುದಕ್ಕೆ ಎಷ್ಟು ಹಣ ಬೇಕೆಂಬುದು ಅವರು ಯೋಚನೆ ಮಾಡಬೇಕಾದ ವಿಷಯ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ಯರು.—ಇದಕ್ಕೆ ನಾನು ಹೇಳಿದ್ದೇನೆ.

ಶ್ರೀ ಕಡಿದಾಳ್ ಮಂಜಪ್ಪನವರು.—ನಮ್ಮ ಸಂಸ್ಥಾನದ ಹಣಕಾಸಿನ ಪರಿಸ್ಥಿತಿಯಲ್ಲಿ ಇದಕ್ಕಿಂತ ಹೆಚ್ಚು ಹಣವನ್ನೊದಗಿಸುವುದಕ್ಕೆ ಸಾಧ್ಯವಿಲ್ಲ. ಮುಂದಿನ ವರ್ಷ ಹೆಚ್ಚು ತೆರಿಗೆ ಹಾಕುವುದಕ್ಕೆ ಸಾಧ್ಯವಿದ್ದರೆ, ಹೆಚ್ಚು ಖರ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

Sri S. SREENIVASA IYENGAR.—On a point of information Sir. We receive Rs. 71·19 lakhs as revenue from the roads. And therefore the Minister's plea that there is no money cannot be accepted, Sir.

ಶ್ರೀ ಕಡಿದಾಳ್ ಮಂಜಪ್ಪನವರು.—ಬಸ್ಸುಗಳು, ಲಾರಿಗಳು ಮುಂತಾದ ವಾಹನಗಳಿಂದ ಸರ್ಕಾರಕ್ಕೆ ಎಷ್ಟು ವರಮಾನ ಬರುತ್ತಿದೆಯೋ ಅದೆಲ್ಲವನ್ನೂ ರಸ್ತೆಗಳಿಗೇ ಖರ್ಚು ಮಾಡುತ್ತಿದ್ದೇವೆ. ಬೇರೆ ಕೆಲಸಗಳಿಗೆ ಇದನ್ನು ಖರ್ಚು ಮಾಡುತ್ತಿಲ್ಲ.

ಆಮೇಲೆ, ಈಗಾಗಲೇ ಕೆಲವು ರಸ್ತೆಗಳನ್ನು ಸಿಮೆಂಟ್ ಕಾನ್‌ಕ್ರೀಟ್ ಮತ್ತೆ ಕೆಲವನ್ನು ಆಸ್‌ಫಾಲ್ಟ್ ಮಾಡುವುದಕ್ಕೆ ಸಿದ್ಧತೆಗಳನ್ನು ಮಾಡಿಕೊಂಡಿದ್ದೇವೆ.

Sri S. SRINIVASA IYENGAR.—On a point of order, Sir. I have another cut motion as regards the asphalting and cementing of roads and I did not want to mention about that in this cut motion because you might call me to order. I would therefore request that the Hon'ble Minister may not refer to that subject now so that I may move that cut motion and place my views before him and then expect an answer from him.

Mr. SPEAKER.—That comes under 'Improvement of Roads', is it not?

Sri S. SREENIVASA IYENGAR.—There is a specific cut motion, Sir.

Mr. SPEAKER.—This cut motion includes that.

Sri S. SRINIVASA IYENGAR.—Then I have no objection, Sir.

Mr. SPEAKER.—The Hon'ble Minister may go on.

ಶ್ರೀ ಕಡಿದಾಳ್ ಮಂಜಪ್ಪನವರು.—ನ್ಯಾಷನಲ್ ಹೈವೇಸ್ ಯೋಜನೆ ಇದೆ. ಅದಕ್ಕೆ ನಾವು ಇನ್ನೂ ಸೇರಿಲ್ಲ. ಅವರು ಹೇಳುವಷ್ಟು ಸುಲಭವಲ್ಲ. ನಮ್ಮ ರಸ್ತೆಗಳನ್ನು ಅವರಿಗೆ ಕೊಟ್ಟ ಕೂಡಲೇ ಅವರು ಅವುಗಳನ್ನು maintain ಮಾಡುತ್ತಾರೆಂಬ ಭಾವನೆಯಿಂದ ಮಾತನಾಡಿದರು. ಹಾಗಲ್ಲ, ರಸ್ತೆಗಳನ್ನು ಅವರಿಗೆ ಒಪ್ಪಿಸಿದರೂ ಕೂಡ ಅವುಗಳನ್ನು ರಿಪೇರಿ ಮಾಡುವುದಕ್ಕೆ ಬೇಕಾದ ಹಣವನ್ನು ಕೊಡುವ ಜವಾಬ್ದಾರಿ ನಮ್ಮದೇ. ಈ ವಿಚಾರದಲ್ಲಿ ಇನ್ನೂ ಆಖೈರು ತೀರ್ಮಾನಕ್ಕೆ ಬಂದಿಲ್ಲ.

ಈಗ ರಸ್ತೆ 'ರೀಕ್ಲಾಸಿಫಿಕೇಷನ್' ಸಮಿತಿಯ ವರದಿಯ ಕೆಲವು ಭಾಗಗಳನ್ನು ಸರ್ಕಾರದವರು ಅಂಗೀಕರಿಸಿದ್ದಾರೆ. ಆ ವರದಿಯ ಪ್ರಕಾರ maintenance ಗ್ರಾಂಟನ್ನು ಸರ್ಕಾರದವರು ಜಾಸ್ತಿ ಮಾಡಿದ್ದಾರೆ. ಇದರ ಪರಿಣಾಮವಾಗಿ ರಸ್ತೆಗಳ ಸ್ಥಿತಿ ಉತ್ತಮವಾಗಬಹುದೆಂಬ ನಿರೀಕ್ಷಣೆ ಸರ್ಕಾರಕ್ಕಿದೆ. ಆದುದರಿಂದ ನಾನು ಮೊದಲೇ ಅರಿಕೆ ಮಾಡಿಕೊಂಡ ಹಾಗೆ

....

Mr SPEAKER.—You mean from this year onwards?

Sri Kadidal MANJAPPA.—Yes, Sir, from this year onwards.

Sri S. SREENIVASA IYENGAR.—You have drawn from the Central Road Fund Rs. 23·54 lakhs. You must be able to provide more money.

ಶ್ರೀ ಕಡಿದಾಳ್ ಮಂಜಪ್ಪನವರು.—ನಮ್ಮ ಯೋಜನೆ ಇನ್ನೂ approve ಆಗಿಲ್ಲ.

Sri A. BHEEMAPPA NAIK.—What do you say about handing over these roads to the Central Government? Please answer that point.

Sri Kadidal MANJAPPA.—I have read the Nagpur Plan. I think, if we accept the scheme, we will have to spend at the rate of Rs. 2,500 or 3,000 per mile. There are both advantages and disadvantages. I do not want to commit the Government...........

Sri S. SRINIVASA IYENGAR.—Advantages will be greater. They provide more than Rs. 3,000 per mile.

Sri Kadidal MANJAPPA.—I am not prepared to say anything at this stage because the entire question is under correspondence, Sir.

Mr. SPEAKER.—There is one specific question answered in today's set of questions. Now, what does the

Hon'ble Member propose to do with his cut motion?

Sri S. SRINIVASA IYENGAR.—I press the cut motion Sir.

Mr. SPEAKER.—The question is:

"That the demand be reduced by Rs. 100."

The motion was negatived.

Mr. SPEAKER.—The next cut motion No. 4 stands in the name of Sri B. Hutche Gowda. I think this cut motion does not come under this demand.

Sri Kadidal MANJAPPA.—I admit Sir.

Mr. SPEAKER.—It comes under Local Self-Government.

Sri B. HUTCHE GOWDA.—It comes under 'Grants to District Boards'.

Sri Kadidal MANJAPPA.—Sir, it cannot however come under "Civil Works." If at all, it may come under "Grants to District Boards" or "Prohibition."

Mr. SPEAKER.—I think so. It actually comes under 'Prohibition' where contribution to local bodies is shown.

Sri B. HUTCHE GOWDA.—My point is that the grant provided is insufficient. That is the point I want to bring to the notice of Government.

Mr. SPEAKER.—That is all right. The Hon'ble Member should have given notice of a cut motion under that demand.

Sri B. HUTCHE GOWDA.—This grant is paid for the last two years.

Mr. SPEAKER.—But this does not come under this demand. That is all the point. It comes under 'Prohibition' and not 'Road funds'.

Desirability of reorganising the Public Works Department.

Sri D. DEVARAJ URS (Hunsur).—Sir, I move the following cut motion:

"That the demand under the head '50 Civil Works' for Rs. 1,64,06,000 be reduced by Rs. 100 (to raise a debate on the desirability of re-organising the Public Works Department."

ಸ್ವಾಮಿ, ಈ ಪಿ. ಡಬ್ಲ್ಯು. ಡಿ. ವಿಚಾರವಾಗಿ ಹೆಚ್ಚಾಗಿ ಟೀಕೆಮಾಡಿದರೆ ಸರ್ಕಾರದವರಿಗೆ ಸ್ವಲ್ಪ ಬೇಸರವಾಗಬಹುದು. ಆದರೆ ಅವರಿಗೆ ಬೇಸರವಾಗುತ್ತದೆಂದು ನಾವು ಮಾತನಾಡದೆ ಸುಮ್ಮನೆ ಇರೋಣವೆಂದರೆ ಹೊಟ್ಟೆ ಉರಿಯುತ್ತೆ. ಆದ್ದರಿಂದ ಏನಾದರೂ ಆಗಲಿ ಕೆಲವು ವಿಚಾರಗಳನ್ನಾದರೂ ನಾನು ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಆ ವಿಚಾರಗಳನ್ನು ಈ ಮಾನ್ಯ ಸಭೆಯ ಅವಗಾಹನೆಗೆ ತರತಕ್ಕದ್ದೂ ಕೂಡ ಬಹಳ ಆವಶ್ಯಕವೆಂದು ನಾನು ಭಾವಿಸಿದ್ದೇನೆ.

ಇನ್ನೂ ನಿನ್ನೆ ಮೊನ್ನೆತಾನೆ ಮದ್ರಾಸಿನ ಮುಖ್ಯಮಂತ್ರಿಗಳಾದ ಶ್ರೀಮಾನ್ ಸಿ. ರಾಜಗೋಪಾಲಾಚಾರಿಯವರು ಒಂದು ಮಾತನ್ನು ಹೇಳಿದ್ದಾರೆ. ಅದು ನಮ್ಮೆಲ್ಲರಿಗೂ ಸಹ ಗೊತ್ತಿರಬೇಕು. ಈ ಇಂಜನಿಯರಿಂಗ್ ಇಲಾಖೆಯನ್ನು ಅವರು "Public Enemy Number two" ಎಂದು ಹೇಳಿದ್ದಾರೆ. ಆ ಮಾತುಗಳನ್ನು ನಾನೀಗ ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ಇಲಾಖೆಗೆ ಖರ್ಚುಮಾಡುತ್ತಿರುವ ಹಣವೆಲ್ಲಾ ಲುಕ್ಸಾನಾದಂತೆಯೇ ಸರಿ ಎಂದು ಹೇಳಿದ್ದಾರೆ. ಈ ಬಡ್ಜೆಟ್ಟಿನಲ್ಲಿ ಒದಗಿಸಿರತಕ್ಕಂಥ ಅಂಕಿಅಂಶಗಳನ್ನು ಆಧಾರವಾಗಿಟ್ಟುಕೊಂಡು ಮಾತನಾಡುವಾಗ ಶ್ರೀಮಾನ್ ಎಸ್. ಶ್ರೀನಿವಾಸಯ್ಯಂಗಾರ್ ಅವರು ಈ ಸಲ ಈ ರಸ್ತೆ ಬಾಬಿನಲ್ಲಿ ಒದಗಿಸಿರತಕ್ಕ ಹಣ ಪೂರಾ ಕಡಮೆಯಾಯಿತೆಂದು ಹೇಳಿ, ಇದು ಸರಿಯಲ್ಲವೆಂದು ಹೇಳಿದರು. ಅವರು ಹೇಳಿರತಕ್ಕದ್ದು ಒಂದು ದೃಷ್ಟಿಯಿಂದ ನಿಜ, ಆದರೆ ನಾವು ಈ ಇಲಾಖೆಗೆ ಎಷ್ಟು ಹಣವನ್ನು ಖರ್ಚುಮಾಡುತ್ತೇವೋ ಮತ್ತು ಹಾಗೆ ಖರ್ಚು ಮಾಡಿದ್ದಕ್ಕಾಗಿ ನಾವು ಎಷ್ಟು ಪ್ರತಿಫಲಗಳನ್ನು ಮತ್ತು ಅನುಕೂಲಗಳನ್ನು ಅಪೇಕ್ಷಿಸಿರುತ್ತೇವೋ ಅಷ್ಟು ಪ್ರಮಾಣದಲ್ಲಿ ಅವು ಆಗಿಲ್ಲ ಮತ್ತು ಆಗುವ ಹಾಗೂ ಇಲ್ಲ. ಈ ಇಲಾಖೆಯ ದಕ್ಷತೆಯಲ್ಲಿ ದಿನೇ ದಿನೇ ಎಷ್ಟರಮಟ್ಟಿಗೆ ಹಿಂದೆ ಬೀಳುತ್ತಿದೆ ಎಂಬುದು ಇದರಿಂದ ವ್ಯಕ್ತವಾಗುತ್ತದೆ.

ಸ್ವಾಮಿ, ಈ ಎಸ್ಟಾಬ್ಲಿಷ್‌ಮೆಂಟ್ ಎಂಬ ಒಂದು ಬಾಬಿನಲ್ಲಿ, ಈ ಬಡ್ಜೆಟ್ಟಿನಲ್ಲಿ ಕೊಟ್ಟಿರುವ ಅಂಕಿಗಳನ್ನು ನೋಡಿದರೆ—1950–51ಕ್ಕೆ 6,50,837 ರೂಪಾಯಿಗಳಿದ್ದದ್ದು 1951–52ಕ್ಕೆ 13,77,500 ರೂಪಾಯಿಗಳಿಗೆ ಏರಿಹೋಗಿದೆ. ಪುನಃ ಅದು Revised Estimate ನಲ್ಲಿ 15,43,000 ರೂಪಾಯಿಗೆ ನಿಂತಿರುತ್ತದೆ. ಈ Establishment ಬಾಬಿನಲ್ಲಿ ಖರ್ಚುವೆಚ್ಚಗಳು ವರ್ಷೇ ವರ್ಷೇ ಹೀಗೆ ಏರುತ್ತಾ ಇಂದು ಕೊನೆಗೆ ಈ ಚಾಲ್ತಿ ಸಾಲಿಗೆ ಎಂದರೆ 1952–53ಕ್ಕೆ 19,23,000 ರೂಪಾಯಿಗಳಿಗೆ ನಿಂತಿದೆ. ಈ ರೀತಿಯಾಗಿ 50–51ನೇ ಸಾಲಿನಲ್ಲಿ 6,50,837 ರೂಪಾಯಿಗಳಿದ್ದ ಸಂಬಳ ಸಾರಿಗೆ ಮೊಬಲಗನ್ನು 1952–53ನೇ ಸಾಲಿಗೆ ಎಂದರೆ 2 ವರ್ಷಗಳಲ್ಲಿ 19,23,000 ರೂಪಾಯಿಗಳಿಗೆ ಹೆಚ್ಚಿಸಿಕೊಂಡು ಬಂದಿದ್ದಾರೆ. ಇದಕ್ಕೆ ತಾವು ಹೇಳಬಹುದು, ಇತ್ತೀಚೆಗೆ ನೌಕರರಿಗೆ ತುಟ್ಟಿ ಭತ್ಯ ಮುಂತಾದವುಗಳನ್ನು ಕೊಡುತ್ತಿರುವುದರಿಂದ ಹೆಚ್ಚಾಗಿರುತ್ತೆ ಎಂದು. ಆದರೆ ಅದು ನಿಜವಾದ ಕಾರಣವಲ್ಲ. ಇದ್ದರೆ ಇದೂ ಸಹ ಅನೇಕ ಕಾರಣಗಳಲ್ಲಿ ಒಂದಾಗಿರಬಹುದು. ಈ ಹಿಂದೆ ಈ ಇಲಾಖೆಯು ಎಲ್ಲ ಕೆಲಸಗಳನ್ನೂ ಒಂದೇ ಬಾಬನ್ನಾಗಿ ಪರಿಗಣಿಸಿಕೊಂಡು ನಡೆಸುತ್ತಿದ್ದರು. ಈಗ ಹಾಗೆ ಮಾಡುವುದರಿಂದ ಕೆಲಸಕಾರ್ಯಗಳು ಬೇಗ ಮುಗಿಯುವುದಿಲ್ಲವೆಂಬ ಸಬೂಬಿನ ಮೇಲೆ ನೀರಾವರಿ ಕಾಮಗಾರಿಗಳ ಕೆಲಸವನ್ನು ಒಂದು ಭಾಗವನ್ನಾಗಿಯೂ ಮತ್ತು ರಸ್ತೆ,

ಕಟ್ಟಡಗಳ ಕೆಲಸವನ್ನು ಮತ್ತೊಂದು ಭಾಗವನ್ನಾಗಿಯೂ ವಿಭಾಗಮಾಡಿ, ಹೀಗೆ ಮಾಡಿದರೆ ಕೆಲಸಕಾರ್ಯಗಳು ಬೇಗ ನಡೆಯಲು ಅನುಕೂಲವಾಗುತ್ತದೆಯೆಂದು ಹೇಳಿದ್ದಾರೆ. ಆದರೆ ಹಾಗೆ ಯಾವ ಕೆಲಸಕಾರ್ಯಗಳೂ ಸರಾಗವಾಗಿ ನಡೆದಿದ್ದನ್ನು ನಾನು ಇಲ್ಲಿಯವರೆಗೂ ನೋಡಲಿಲ್ಲ. ಆದರೆ ಹೀಗೊಂದು ಬದಲಾವಣೆಮಾಡಿದ್ದರಿಂದ ಏನು ಪರಿಸ್ಥಿತಿ ಉಂಟಾಯಿತೆಂದರೆ, ಈ ಕೆಲಸಕ್ಕೇ ಒಬ್ಬ ಇಂಜಿನಿಯರು, ಆ ಕೆಲಸಕ್ಕೇ ಒಬ್ಬ ಇಂಜಿನಿಯರು, ಎಂಬುದಾಗಿ ಹೇಳಿ ಅಧಿಕಾರಿಗಳ ಸಂಖ್ಯೆ ಜಾಸ್ತಿಯಾಯಿತೇ ವಿನಾ ಮತ್ತೇನೂ ಇದಕ್ಕಿಂತ ಹೆಚ್ಚಿನ ಬದಲಾವಣೆ ಕೆಲಸಕಾರ್ಯಗಳಲ್ಲಿ ಕಂಡುಬಂದಿಲ್ಲ. ಹೀಗೆ ಕೆಲಸಗಳನ್ನು ಪ್ರತ್ಯೇಕಮಾಡಿದಲ್ಲಿ ಇಲಾಖೆಯ ದಕ್ಷತೆ ಹೆಚ್ಚಾಗುತ್ತದೆಯೆಂದೂ ಮತ್ತು ಆಯಾ ಬಾಬಿನ ಕೆಲಸಗಳು ಬೇಗಬೇಗ ಪೂರೈಸಿ ಜನರಿಗೆ ಹೆಚ್ಚಿನ ರೀತಿಯಲ್ಲಿ ಸೌಲಭ್ಯಗಳು ಒದಗುತ್ತವೆಂದೂ ತಿಳಿಸುತ್ತಿದ್ದರು. ಆದರೆ ಇಂಥ ಒಂದು ಬದಲಾವಣೆಯಿಂದ ಇಲ್ಲಿಯತನಕ ಜನರಿಗೆ ಒಂದು ಸಂಚಾರ ಸೌಕರ್ಯವಾಗಲಿ ಅಥವಾ ಮತ್ತಾವ ಅನುಕೂಲಗಳೇ ಆಗಲಿ ಉಂಟಾಗಿರುತ್ತವೆಂದು ನಾನು ಒಂದು ಪಕ್ಷ ಹೇಳಿದರೂ ಅದನ್ನು ಈ ಮಾನ್ಯ ಸಭೆಯಲ್ಲಿ ಯಾರೂ ಒಪ್ಪಲಾರರೆಂದು ನಾನು ಭಾವಿಸಿದ್ದೇನೆ.

ಶ್ರೀಮಾನ್ ಶ್ರೀನಿವಾಸಯ್ಯಂಗಾರ್ ಅವರು ಭಾಷಣ ಮಾಡುತ್ತಾ ಹೇಳಿದರು, ಈ ರಸ್ತೆ ಮತ್ತು ಕಟ್ಟಡಗಳ ಬಾಬಿನಲ್ಲಿ ರಸ್ತೆ ರಿಪೇರಿ ಇತ್ಯಾದಿಗಳೆಲ್ಲಾ ಸೇರಿಕೊಂಡು ಅವುಗಳಿಗೆ 1 ಕೋಟಿ 30 ಲಕ್ಷ ರೂಪಾಯಿಗಳನ್ನು ಮಾತ್ರ ಈ ಸಾಲಿನ ಬಡ್ಜೆಟ್ಟಿನಲ್ಲಿ ಒದಗಿಸಿದ್ದಾರೆ, ಎಂದು. ಆದರೆ ಹಾಗೆ ಅವರು ತಿಳಿಸಿರತಕ್ಕದ್ದರ ಜೊತೆಗೆ ಈ ಡೆವಲಪ್‌ಮೆಂಟ್ ಬಾಬಿನಲ್ಲಿ ಒದಗಿಸಿರತಕ್ಕ ಮೊಬಲಗನ್ನು ನಾವು ಗಮನಿಸಿದರೆ ಈ ಚಾಲ್ತಿ ಸಾಲಿಗೆ 64,36 500 ರೂಪಾಯಿಗಳನ್ನು ಒದಗಿಸಿದ್ದಾರೆ. 1950–51ನೇ ಸಾಲಿನಲ್ಲಿ ಇದು 61,76,268 ರೂಪಾಯಿಗಳಿತ್ತು. 1951–52ಕ್ಕೆ ಮೊಬಲಗು 1 ಕೋಟಿ 15 ಲಕ್ಷ 61,500 ರೂ.ಗಳಿಗೆ ಏರಿಹೋಗಿದೆ. ಹೀಗೆ ಇನ್ನೂ ಬೇರೆ ಬೇರೆಯಾಗಿ ಕೊಟ್ಟಿರತಕ್ಕ ಭಾಗಗಳನ್ನೆಲ್ಲಾ ಸೇರಿಸಿಕೊಂಡರೆ, ಇನ್ನೂ ಒಂದು ಕೋಟಿ ರೂಪಾಯಿ ಜಾಸ್ತಿಯಾಗಬಹುದು. ಆದರೆ ಈ ಡೆವಲಪ್‌ಮೆಂಟ್ ಬಾಬಿಗೆ ಒದಗಿಸಿರತಕ್ಕ 64,36,500 ರೂಪಾಯಿಗಳಿಗಿಂತ ಇನ್ನೂ ಹೆಚ್ಚಿಗೆ ಒದಗಿಸಬೇಕಾಗಿತ್ತು. ಆದರೆ ಹಾಗೆ ಮಾಡದೆ ರಸ್ತೆ ರಿಪೇರಿ ಬಾಬಿನಲ್ಲಿ ಈ ಸಾಲಿಗೆ 38,71,020 ರೂಪಾಯಿಗಳನ್ನು ಒದಗಿಸಿದ್ದಾರೆ. ಆದರೆ ಕಳೆದ ಸಾಲಿನಲ್ಲಿ ರಸ್ತೆಗಳನ್ನು ಹಾಕತಕ್ಕ ಬಗ್ಗೆ ಒದಗಿಸಲಾಗಿದ್ದ ಮೊಬಲಗು 17,46,500 ರೂಪಾಯಿಗಳು. ಹೀಗೆ 17,46,500 ರೂಪಾಯಿಗಳ ವೆಚ್ಚದಲ್ಲಿ ತಯಾರಿಸಿರತಕ್ಕ ರಸ್ತೆಗಳಿಗೆ ರಿಪೇರಿಮಾಡಲು ಈ ಸಾಲಿನಲ್ಲಿ 38,71,020 ರೂಪಾಯಿಗಳನ್ನು ಒದಗಿಸಲಾಗಿದೆ. ಹೋದ ಸಾಲಿನಲ್ಲಿ ಈ ರಿಪೇರಿ ಕಾಮಗಾರಿಗಳ ಬಗ್ಗೆ 34,87,833 ರೂಪಾಯಿಗಳನ್ನು ಆಗಲೆ ಖರ್ಚುಮಾಡಿದ್ದಾರೆ. ಆದರೂ ರಸ್ತೆಗಳೊಂದೂ ಚೆನ್ನಾಗಿಲ್ಲ. ಇದಕ್ಕೆಲ್ಲಾ ತಾವು ಏನು ಹೇಳುತ್ತೀರಿ ? 1933ನೇ ಇಸವಿಯಲ್ಲಿ ನಾನೂ ಕೂಡ ಒಬ್ಬ ರಸ್ತೆ ಕಂಟ್ರಾಕ್ಟರಾಗಿದ್ದೆನು. ನನಗೆ ಈ ಕೆಲಸಗಳಲ್ಲಿ ಚೆನ್ನಾಗಿ ಅನುಭವವಿದೆ. ಈ ಬಗ್ಗೆ ತಮಗೆ ನಾನು ಒಂದು ಸಣ್ಣ ವಿಚಾರ ತಿಳಿಸಬೇಕೆಂದು ತಿಳಿಸಲಿಚ್ಛಿಸುತ್ತೇನೆ. ನಾನು ಹಿಂದೆ ಯಾವಾಗ ಕಂಟ್ರಾಕ್ಟ್ ಕೆಲಸಗಳನ್ನು ಮಾಡಿಸುತ್ತಿದ್ದೆನೋ ಆಗ ನಮ್ಮ ಹುಣಸೂರು ಸಬ್‌ಡಿವಿಜನ್‌ನಲ್ಲಿ ಒಂದು ರಸ್ತೆಗೆ ಸುಮಾರು 9 ಫರ್ಲಾಂಗ್ ಜಲ್ಲಿ ಹಾಕಿಸಿ, ರಸ್ತೆ ದುರಸ್ತುಮಾಡಿಸಿದ್ದೆನು. ಆ 9 ಫರ್ಲಾಂಗ್ ರಸ್ತೆಗೆ ಸುಮಾರು 8 ವರ್ಷಗಳತನಕವೂ ಒಂದು ಜಲ್ಲಿಯು ಕಲ್ಲನ್ನಾಗಲೀ ಅಥವಾ ಮಣ್ಣು ಕಾಮಗಾರಿಯನ್ನು ಮಾಡಿರತಕ್ಕದ್ದಾಗಲಿ ಯಾವುದೂ ಇಲ್ಲ. ಈ ವಿಚಾರ ಬರವಣಿಗೆಯಲ್ಲೂ ಕೂಡ ಇರುತ್ತೆ. ತಾವು ಅದನ್ನು ಬೇಕಾಗಿದ್ದರೆ ನೋಡಬಹುದು. ಆಗ ನಮಗೆ ಇಲಾಖೆಯವರು ಒಂದು ಘನ ಗಜ ಜಲ್ಲಿಗೆ ಕೊಡುತ್ತಿದ್ದ ರೇಟ್ ಆದರೂ ಏನಿತ್ತು? ಕೇವಲ 3 ರೂಪಾಯಿ, ರೂ. 2-12-0 ಹೀಗಿತ್ತು. ಅಷ್ಟಿದ್ದರೂ ನಮಗೇನೂ ಲುಕ್ಸಾನಾಗುತ್ತಿರಲಿಲ್ಲ. ಈಗ ಘನ ಗಜ ಒಂದಕ್ಕೆ 10 ರೂಪಾಯಿಗಳವರೆಗೂ ರೇಟಿರುತ್ತೆ. ಹೀಗೆ ಘನ ಗಜಕ್ಕೆ ಹತ್ತು ರೂಪಾಯಿಗಳನ್ನು ಕೊಟ್ಟು ಮಾಡಿಸತಕ್ಕ ರಸ್ತೆಗಳ ರಿಪೇರಿಯನ್ನೂ ನೋಡಿ, ಆಗ ನಾನು ಘನ ಗಜ ಒಂದಕ್ಕೆ ರೂ. 2-12-0, ರೂ. 3-0-0 ಗಳ ಪ್ರಕಾರ ಮಾಡಿಸಿರತಕ್ಕ ರಿಪೇರಿ ಕೆಲಸಗಳನ್ನು ನೋಡಿ. ಆದರೆ ಹಿಂದಿನ ಕಾಲದಲ್ಲಿ ಈ ರೋಡ್ ರಿಪೇರಿ ಇತ್ಯಾದಿ ಕೆಲಸಗಳನ್ನೆಲ್ಲಾ ಕೇವಲ ಅನುಭವಶಾಲಿಗಳಾದ ಮತ್ತು ನುರಿತಿದ್ದಂಥವರಿಗೆ ಮಾತ್ರವೇ ಕೊಡುತ್ತಿದ್ದರು. ಆಗೆಲ್ಲಾ ಅಂಥ ನುರಿತ ಕಂಟ್ರಾಕ್ಟರುಗಳು 15–20 ಜನಗಳಿಗೆ ಮೇಲಿರಲಿಲ್ಲ, ಆದರೆ ಈಗಿನ ಸಿಸ್ಟಮ್ಮೇ ಒಂದು ರೀತಿಯಾಗಿದೆ. ಒಂದು ಫರ್ಲಾಂಗನ್ನು ರಿಪೇರಿ ಮಾಡಿಸಬೇಕಾಗಿದ್ದರೆ ಜಲ್ಲಿ ಹರಡಲಿಕ್ಕೆ ಒಬ್ಬ ಕಂಟ್ರಾಕ್ಟರು, ನೀರು ಸರಬರಾಯಿಮಾಡಲು ಅದಕ್ಕೇ ಇನ್ನೊಬ್ಬ ಕಂಟ್ರಾಕ್ಟರು, ಅಕ್ಕ ಪಕ್ಕದಲ್ಲಿ ಬೆಳೆದಿರತಕ್ಕ ಗಿಡಮರಗಳನ್ನು ಕತ್ತರಿಸಲಿಕ್ಕೇ ಮತ್ತೊಬ್ಬ ಕಂಟ್ರಾಕ್ಟರು, ರಸ್ತೆಗಳಲ್ಲಿ ಬಿದ್ದಿರುವ ಗುಂಡಿ, ಗುದ್ದುರಗಳನ್ನು ಮುಚ್ಚಿಸಲಿಕ್ಕೇ ಒಬ್ಬ ಕಂಟ್ರಾಕ್ಟರು, ಹೀಗೆಲ್ಲಾ ಒಂದೊಂದು ಸಣ್ಣಪುಟ್ಟ ಐಟಂಗೂ ಒಬ್ಬ ಕಂಟ್ರಾಕ್ಟರಿರುತ್ತಾರೆ. ಇಷ್ಟು ಜನ ಕಂಟ್ರಾಕ್ಟರುಗಳು ಸೇರಿ ಮಾಡತಕ್ಕ ಕೆಲಸ ಹೇಗಿರಬಹುದು ! ತಮಗೆ ನಾನು ಉದಾಹರಣೆ ಬಗ್ಗೆ ಹೇಳಬೇಕೆಂದರೆ, ಮೈಸೂರಿನಿಂದ–ಮಡಕೇರಿಗೆ ಹೋಗತಕ್ಕ ರಸ್ತೆಯನ್ನು ಹೋದ ವರ್ಷ ರಿಪೇರಿ ಮಾಡಿಸಿದರು. ಆದರೆ ಹಾಗೆ ರಿಪೇರಿಮಾಡಿಸಿದ ಕೆಲಸ ಮೂರು ತಿಂಗಳು ಕೂಡ ಇರಲಿಲ್ಲ. ಎಲ್ಲಾ ಕಿತ್ತು, ಒಡೆದುಹೋಯಿತು. ನನಗೆ ತಾವು ಸಂಬಳವನ್ನು ಕೊಡದಿದ್ದರೂ ಚಿಂತೆಯಿಲ್ಲ, 6 ತಿಂಗಳ ಕಾಲ ಈ ರಸ್ತೆ ರಿಪೇರಿಗಳ ಕೆಲಸವನ್ನು ನನಗೆ ತಾವು ಕೊಟ್ಟು ನೋಡಿ, ನಾನು ಕೆಲಸವನ್ನು ಹೇಗೆ ಮಾಡಿಸುತ್ತೇನೆ.

ಜನಾಬ್ ಜೆ. ಮಹಮದ್ ಇಮಾಂರವರು (ಜಗಳೂರು).—ಹಾಗೆ ಇಂಥ ಕೆಲಸಗಳಿಗೆ ಮುಂದಾಳುಗಳಾಗಿ ಬರತಕ್ಕಂಥವರು ಬಹಳ ಜನರಿದ್ದಾರೆ !

ಶ್ರೀ ಡಿ. ದೇವರಾಜ ಅರಸಿನವರು.—ಸ್ವಾಮಿ, ಇನ್ನೊಂದು ವಿಚಾರವಿದೆ.

ಈ Establishment ಬಾಬಿನಲ್ಲಿ ಈ ಸಾಲಿಗೆ 19,23,000 ರೂಪಾಯಿಗಳನ್ನು ಖರ್ಚುಮಾಡುವುದು ತುಂಬಾ ಅನ್ಯಾಯ. ಈ ಸಿಬ್ಬಂದಿಯಲ್ಲಿ ಅನೇಕ ಜನ ಇಂಜನಿಯರ್ಸ್‌ಗಳನ್ನೂ ಸೆಕ್ಷನ್ ಆಫೀಸರುಗಳನ್ನೂ ಮತ್ತು ಸಬ್ ಓವರ್‌ಸೀಯರ್ಸ್‌ಗಳನ್ನು ಹೆಚ್ಚುಮಾಡಿಕೊಂಡು ಬಿಟ್ಟಿದ್ದಾರೆ. ಹೀಗೆ ಅನಾವಶ್ಯಕವಾಗಿ ಎಷ್ಟೋ ಜನ ಸಂಬಳಕ್ಕಾಗಿ ಮಾತ್ರ ಇಲಾಖೆಯಲ್ಲಿದ್ದಾರೆ. ಹೇಗೆ ಜಿಲ್ಲಾಧಿಕಾರಿಗಳಿಗೂ ಮತ್ತು ತಾಲ್ಲೂಕು ಅಮಲ್ದಾರರುಗಳಿಗೂ ಮಧ್ಯೆ ಸಬ್‌ಡಿವಿಜನ್ ಆಫೀಸು ಒಂದು ಪೋಸ್ಟಾಫೀಸಿನ ಮಾದರಿ ಇರುತ್ತದೆಯೋ ಹಾಗೆ ಈ ಇಲಾಖೆಯಲ್ಲಿ ಸಬ್‌ಓವರ್‌ಸೀಯರುಗಳಿಗೂ ಮತ್ತು ಒಂದು ಸಬ್‌ಡಿವಿಜನ್ ಆಫೀಸರವರಿಗೂ

(ಶ್ರೀ ಡಿ. ದೇವರಾಜ ಅರಸಿನವರು).

ಮಧ್ಯೆ ಈ ಸೆಕ್ಷನ್ ಆಫೀಸರ್ ಎಂದು ಒಬ್ಬರು ಇರುತ್ತಾರೆ. ಇವರಿಗೆ ಕೊಡುತ್ತಿರುವ ಸಂಬಳ ಸುಮ್ಮನೆ ಕೊಟ್ಟಹಾಗೆ. ಆದರೆ ಶ್ರೀಮಾನ್ ಬಿ. ಎಚ್. ಬೋರಣ್ಣ ಗೌಡರು ಹೇಳಿದರು, ಹೀಗೆ ಇಲಾಖೆಯಲ್ಲಿ ನಿರರ್ಥಕವಾಗಿ ಅಧಿಕಾರಿಗಳನ್ನು ಹೆಚ್ಚಿಸುತ್ತ ಬಂದುದರಿಂದ ಸರಾಗವಾಗಿ ಮತ್ತು ಶೀಘ್ರವಾಗಿ ಆಗುತ್ತಿದ್ದಂಥ ಎಸ್ಟಿಮೇಟ್ ಇತ್ಯಾದಿ ಕೆಲಸಗಳೆಲ್ಲಾ ತೀರ ನಿಧಾನವಾಗುವುದಕ್ಕೆ ಒಂದು ಕಾರಣವಾಗಿದೆ, ಎಂದು. ಆದರೆ ಅವರು ಮಾಡತಕ್ಕ ಎಸ್ಟಿಮೇಟುಗಳು ಮತ್ತು ಅವುಗಳನ್ನು ಪುನಃಪುನಃ ರಿವೈಸ್‌ಮಾಡತಕ್ಕದ್ದನ್ನು ನೋಡಿದರೆ ಅವರಿಗೆ ಈ ಕೆಲಸದಲ್ಲಿ ಅಷ್ಟಾಗಿ ಅನುಭವವೇ ಇದ್ದಂತೆ ಕಾಣುವುದಿಲ್ಲ. ಬಡ್ಜೆಟ್ ಪುಸ್ತಕದ 340ನೇ ಪುಟವನ್ನು ತಾವು ತೆಗೆದು ನೋಡುವುದಾದರೆ, ಮೈಸೂರು ಡಿವಿಜನ್‌ಗೆ ಸೇರಿರತಕ್ಕ ಪೆರಿಯಾಪಟ್ಟಣದ ತಾಲ್ಲೂಕಾಫೀಸಿಗೆ—Improving the Taluk Office at Periyapatna ಎಂದು ಹೇಳಿ ಇದಕ್ಕೆ ಒಂದು ಅಂದಾಜನ್ನು ತಯಾರಿಸಲು 1943ನೇ ಇಸ್ವಿಯಲ್ಲಿ ಪ್ರಾರಂಭವಾಯಿತು. ಆಗ್ಗೆ ಇದರ ಮೊದಲನೆಯ ಅಂದಾಜಿನ ಮೊಬಲಗು 7–8 ಸಾವಿರ ರೂಪಾಯಿಗಳು ಮಾತ್ರವಿತ್ತು. ಈಗ ಅದು ಎಷ್ಟೋ ವೇಳೆ ರಿವೈಜ್ ಆಗಿ ಆಖೈರಿನಲ್ಲಿ 23,508 ರೂಪಾಯಿಗಳಿಗೆ ನಿಂತಿದೆ. ಇದು ಇಲ್ಲಿಗಾಗಲೆ ನಾಲ್ಕಾರಾವರ್ತಿ ರಿವೈಜಾಗಿರುತ್ತೆ. 51-52ರಲ್ಲಿ 23 ಸಾವಿರ ಚಿಲ್ಲರೆ ಆಗಿತ್ತು.

Sri Kadidal MANJAPPA.—On a point of order. The cut motion is in regard to 're-organising the Department.'

Sri D. DEVARAJ URS.—Yes; because of all these delays, enormous wastage and all these things, I want that the entire Department should be re-organized. How best to re-organise is left to the Government. But these are the wastages; this is the delay; all these things I am pointing out.

2 P.M.

ಆಮೇಲೆ ಇನ್ನೊಂದು ವಿಷಯ. ಮೊದಲೇ ತಿಳಿಸಿದ ಹಾಗೆ ಇಷ್ಟೊಂದು ಹಣವಿದ್ದರೂ ಕೂಡ ಅದು ಸದುಪಯೋಗವಾಗಿಲ್ಲ. ಸರ್ಕಾರದವರು ಸದಾ ಕಾಲದಲ್ಲೂ ಇಲಾಖೆಯನ್ನು ಬೆನ್ನಿಗೆ ಕಟ್ಟಿಕೊಂಡು ಅವರು ಮಾಡುವುದೆಲ್ಲಾ ಸರಿ ಎಂದು ಹೇಳಿದರೆ ದೇಶಕ್ಕೆ ಒಳ್ಳೆಯದಾಗುವುದಿಲ್ಲ. ಮಾಡುವ ಕೆಲಸದಲ್ಲಿ ತಪ್ಪು ಅಥವಾ ನ್ಯೂನತೆಗಳಿದ್ದರೆ ಅದನ್ನು ಒಪ್ಪಿಕೊಳ್ಳುವುದರಿಂದ ಗೌರವಕ್ಕೆ ಧಕ್ಕೆ ಬರುವುದಿಲ್ಲ. ಶ್ರೀ ರಾಜಗೋಪಾಲಾಚಾರಿಯವರೂ ಕೂಡ ಒಂದು ಸಲ ಪಬ್ಲಿಕ್ ವರ್ಕ್ಸ್ ಇಲಾಖೆಯನ್ನು 'ಪಬ್ಲಿಕ್ ಎನಿಮಿ ನಂಬರ್ 2' ಎಂದು ಹೇಳಿರುವಾಗ ಮತ್ತು ಇತರ ದೊಡ್ಡ ಮನುಷ್ಯರು ತಮ್ಮ ತಪ್ಪನ್ನು ಒಪ್ಪಿಕೊಂಡಿರುವಾಗ, ನಮ್ಮ ಸರ್ಕಾರದವರು ಅವರ ಲೋಪದೋಷಗಳನ್ನು ಏಕೆ ಒಪ್ಪಿಕೊಳ್ಳಬಾರದು ? ಕೆಲಸ ಸರಿಯಾಗಿ ಮಾಡುತ್ತಿಲ್ಲ. ಹಣ ದುರ್ವ್ಯಯವಾಗುತ್ತಿದೆ ಎಂದು ನಾವು ಹೇಳಿದರೆ ಅದನ್ನು ತಪ್ಪುಭಾವನೆಯಿಂದ ನೋಡಬಾರದು. ಸತ್ಯಾಸತ್ಯತೆಯನ್ನು ಶೋಧಿಸಿ ನ್ಯೂನತೆಗಳನ್ನು ಸರಿಪಡಿಸಬೇಕು. ಸರ್ಕಾರೀ ಆರ್ಕಿಟೆಕ್ಟಿಗೆ ರೂ. 800 ರಿಂದ ಒಂದು ಸಾವಿರ ರೂಪಾಯಿಗಳವರೆಗೂ ಸಂಬಳವಿದೆಯೆಂದು ಹೇಳುತ್ತಾರೆ. ಅವರು ಸರ್ಕಾರದ ಕೆಲಸದ ಜೊತೆಗೆ ಖಾಸಗಿಯಾಗಿ ಅವರ ಕೆಲಸವನ್ನು ಮಾಡಿಕೊಳ್ಳುವುದಕ್ಕೆ ಅವಕಾಶವಿದೆಯೆಂದು ಕೇಳಿದ್ದೇನೆ. ಹೀಗಿರುವಾಗ ಅವರಿಗೆ ಸಂಬಳ ನಿಲ್ಲಿಸಬೇಕು ಅಥವಾ ಖಾಸಗಿಯಾಗಿ ಕೆಲಸಮಾಡುವುದನ್ನು ನಿಲ್ಲಿಸಬೇಕು. ಈ ಎರಡರಲ್ಲಿ ಯಾವುದಾದರೂ ಒಂದಕ್ಕೆ ಅವಕಾಶವಿರಬೇಕು. ಹೆಚ್ಚು ಅಧಿಕಾರವಿಲ್ಲದಿರುವುದರಿಂದ ಈಗ ರೀಆರ್ಗನೈಸೇಷನ್ ಯಾವ ರೀತಿ ಮಾಡಬೇಕೆಂಬ ತಪಶೀಲು ನನಗೆ ಗೊತ್ತಾಗುವುದಿಲ್ಲ. As a layman, as an ordinary man ನನಗೆ ಗೊತ್ತಿರುವುದು ನಮ್ಮ ಇಲಾಖೆಯಿಂದ ಆಗುವ ಅನುಕೂಲ ಮತ್ತು ಅನನುಕೂಲ ತೋರಿಸುವುದು, ಅಷ್ಟು ಮಾತ್ರ ನನಗೆ ತಿಳಿವಳಿಕೆಯಿದೆಯೇ ಹೊರತು, ಇಲಾಖೆಯನ್ನು ಈ ರೀತಿ ಮಾಡಿ ಆ ರೀತಿ ಮಾಡಿ ಎಂದು ಹೇಳುವುದಕ್ಕಾಗುವುದಿಲ್ಲ. ಬೇಕಾದರೆ ಒಂದು ಸಮಿತಿಮಾಡಿ, ಅಲ್ಲಿ ನಿಧಾನವಾಗಿ ಎಲ್ಲವನ್ನೂ ಹೇಳಬಹುದು. ಈಗ ಹೇಳುವುದಕ್ಕೆ ಸಾಧ್ಯವಿಲ್ಲ. ಹಿಂದೆ ಸರ್ಕಾರದವರು ರೀಆರ್ಗನೈಸೇಷನ್ ದಕ್ಷತೆ ದೃಷ್ಟಿಯಿಂದ ಮಾಡಿದ್ದಾರೆ. ಈಗಲೂ ಕೂಡ ದಕ್ಷತೆ ಹೆಚ್ಚಲಿ, ಅನುಕೂಲವಾಗಲಿ, ಹಣ ಪೋಲಾಗುವುದು ತಪ್ಪಲಿ ಎಂಬ ಉದ್ದೇಶದಿಂದ ಕೂಲಂಕಷವಾಗಿ ಪರಿಶೀಲಿಸಬೇಕೆಂದು ಈ ಖೋತಾ ಸೂಚನೆಯನ್ನು ಸಭೆಯ ಮುಂದೆ ಇಡುತ್ತೇನೆ.

Mr. SPEAKER.—Cut motion moved

"That the Demand be reduced by Rs. 100".

ಶ್ರೀ ಕಡಿದಾಳ್ ಮಂಜಪ್ಪನವರು.—ಅಧ್ಯಕ್ಷರೇ, ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ನ್ಯೂನತೆಯಿಲ್ಲವೆಂದು ನಾನು ಹೇಳುವುದಿಲ್ಲ. ಕಂಡದ್ದು ಹೇಳಿದರೆ ಕೆಂಡದಂಥ ಕೋಪ ನಮಗೆ ಬರುವ ಸ್ಥಿತಿಯಿಲ್ಲ. ಆದರೆ ಒಂದಂಶವನ್ನು ಮಾತ್ರ ಮಾನ್ಯ ಮಿತ್ರರಾದ ಶ್ರೀ ದೇವರಾಜ ಅರಸಿನವರು ಜ್ಞಾಪಕದಲ್ಲಿಡಬೇಕು. ಸರ್ಕಾರವಾಗಲಿ ಅಥವಾ ಯಾವ ಇಲಾಖೆಯಾಗಲಿ ಸಾರ್ವಜನಿಕ ಅಭಿಪ್ರಾಯದ ಒಂದು ಪ್ರತಿಬಿಂಬ ಎಂಬುದನ್ನು ಅವರು ಮರೆಯಬಾರದು. ಸಾರ್ವಜನಿಕರಲ್ಲಿ ಯಾವ ಒಂದು ನೈತಿಕಮಟ್ಟವಿರುತ್ತದೋ ಅದೇ ನೈತಿಕಮಟ್ಟ ಸರ್ಕಾರದಲ್ಲೂ ಮತ್ತು ಸಂಸ್ಥಾನದಲ್ಲೂ ಪ್ರತಿಬಿಂಬಿಸುತ್ತದೆ ಯೆಂಬುದನ್ನು ಮರೆಯಬಾರದು. ನಿಜವಾಗಿಯೂ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಒಳ್ಳೆಯ ಕರಿ ಕುರಿ (black sheep) ಇವೆ ಎಂದು ನನ್ನ ಗಮನಕ್ಕೆ ಬಂದಿದೆ. ಒಂದೇ ಸಮನೆ ವೇಗ್ ಆಗಿ, ಅಸ್ಪಷ್ಟವಾಗಿ, ಅನಿರ್ದಿಷ್ಟವಾಗಿ ಆರೋಪಮಾಡುವುದಕ್ಕಿಂತ ಸರಿಯಾದ ವಿವರಗಳನ್ನು ಕೊಟ್ಟರೆ, ಯಾರು ಸರ್ಕಾರಕ್ಕೆ ದ್ರೋಹಮಾಡುತ್ತಾರೆಯೋ ಅವರ ಮೇಲೆ ಸರಿಯಾದ ಕ್ರಮತೆಗೆದುಕೊಂಡು ಶಿಕ್ಷೆ ವಿಧಿಸುವುದಕ್ಕೆ ಸಿದ್ಧವಾಗಿದ್ದೇವೆ. ಇದು ಬರೀ ಬಾಯಿಮಾತಿನಲ್ಲಿ ಹೇಳುವುದಿಲ್ಲ, ಎಷ್ಟು ಕ್ರೂರವಾದ ಶಿಕ್ಷೆ ಬೇಕಾದರೂ ಕೊಡುವುದಕ್ಕೆ ಸಿದ್ಧವಾಗಿದ್ದೇವೆ, ತಪ್ಪಿತಸ್ಥರನ್ನು ವಜಾಮಾಡುವುದಕ್ಕೂ ಸಿದ್ಧವಾಗಿದ್ದೇವೆ. ಒಂದು ಮಾತನ್ನು ಮಾತ್ರ ಹೇಳಬೇಕು. ನಮ್ಮ ಇಲಾಖೆಯಲ್ಲಿ ದಕ್ಷರೂ, ಪ್ರಾಮಾಣಿಕರೂ ಅನೇಕರಿದ್ದಾರೆ, ಅದು ಎಲ್ಲರಿಗೂ ಗೊತ್ತಿದೆ. ಆದ್ದರಿಂದ ದಕ್ಷರಾದವರಿಗೆ ವಿರೋಧ ಬರುವ ರೀತಿಯಲ್ಲಿ ಮಾತನಾಡುವುದು ಬೇಡ ಎಂದು ಮನವಿಮಾಡಿಕೊಳ್ಳುತ್ತೇವೆ.

ಆ ಮೇಲೆ ಪುನರ್ವ್ಯವಸ್ಥೆಗೊಳಿಸಬೇಕೆಂದು ಹೇಳಿದರು. After all there is nothing in re-organising or planning. Our hearts should be re-organised, our minds should be reorganised, our mental outlook should be re-organised.

ಹಾಗೇ ಮಾಡಬೇಕೇ ಹೊರತು ಬರೀ ಪುನರ್ವ್ಯವಸ್ಥೆಯಿಂದ ಪ್ಲಾನಿಂಗ್ ಮುಂತಾದ್ದರಿಂದ ಇಲಾಖೆ ಅಥವಾ ಸರ್ಕಾರ ಉತ್ತಮಗೊಳ್ಳುತ್ತದೆಂಬ ನಂಬಿಕೆಯಿಲ್ಲ. ಸಾಧ್ಯವಾದರೆ ಪುನರ್ವ್ಯವಸ್ಥೆಮಾಡುವುದಕ್ಕೆ ನಾವು ಪ್ರಯತ್ನಮಾಡುತ್ತೇವೆ.

ಆ ಮೇಲೆ ಶ್ರೀ ದೇವರಾಜ ಅರಸಿನವರು ತಾವು ಕಂಟ್ರಾಕ್ಟರಾಗಿದ್ದ ಅನುಭವವನ್ನು ಮಾನ್ಯ ಸಭೆಯ ಗಮನಕ್ಕೆ ತಂದು ಅವರು ಚೆನ್ನಾಗಿ ಕೆಲಸಮಾಡಿ ಸರ್ಕಾರಕ್ಕೆ ಸಹಾಯಮಾಡಿದಾಗ್ಯೂ ಈಚೆಗೆ ಇಲಾಖೆಯವರು ಹಳೇ ಕಂಟ್ರಾಕ್ಟರನ್ನು ಬಿಟ್ಟು ಹೊಸ ಕಂಟ್ರಾಕ್ಟರ ಕೈಲಿ ಕೆಲಸ ತೆಗೆದುಕೊಳ್ಳುತ್ತಿದ್ದಾರೆಂದು ಹೇಳಿದರು.

ಶ್ರೀ ಡಿ. ದೇವರಾಜ ಅರಸ್ ಅವರು.—ನಾನು ಕಂಟ್ರಾಕ್ಟ್ ಕೆಲಸವನ್ನು ಬಿಟ್ಟಿರುವುದನ್ನು ಒಪ್ಪಿಕೊಳ್ಳುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಹಳೆಯ ಕಂಟ್ರಾಕ್ಟರು ಅಸೆಂಬ್ಲಿಗೆ ಸದಸ್ಯರಾಗಿ ಬಂದ ಮೇಲೆ ಸ್ಥಾನಕ್ಕೆ ತಕ್ಕಂತೆ ಕಂಟ್ರಾಕ್ಟರ ಕೆಲಸವನ್ನು ಬಿಡಲೇಬೇಕು.

Sri. D. DEVARAJ URS.—No, no, Sir, it is not so. It is on a point of personal information. It is not because that I want to become a contractor.

Mr. SPEAKER.—Nobody will understand it like that.

ಶ್ರೀ ಕಡಿದಾಳ್ ಮಂಜಪ್ಪನವರು.—ಆ ಮೇಲೆ ಸಿಬ್ಬಂದಿ ಖರ್ಚು ನಮ್ಮ ಸಂಸ್ಥಾನದಲ್ಲಿ ಬಹಳ ಜಾಸ್ತಿಯಾಗಿದೆಯೆಂದು ಹೇಳಿದರು. ನಮ್ಮ ಸಂಸ್ಥಾನದಲ್ಲಿರುವ ಸಿಬ್ಬಂದಿ ಖರ್ಚನ್ನು ಬೇರೆ ಸಂಸ್ಥಾನಗಳಲ್ಲಿರುವ ಸಿಬ್ಬಂದಿ ಖರ್ಚಿನೊಡನೆ ಹೋಲಿಸಿದರೆ ನಮ್ಮ ಸಂಸ್ಥಾನದ ಸಿಬ್ಬಂದಿ ಖರ್ಚು ಬಹಳ ಕಡಮೆಯೆಂದು ನಾನು ಹೇಳುತ್ತೇನೆ.

ಆಮೇಲೆ ಎಷ್ಟೋ ಹಣವನ್ನು ನಾವು ಖರ್ಚು ಮಾಡುತ್ತೇವೆ, ಅದಕ್ಕೆ ಸರಿಯಾದ ಪ್ರತಿ ಫಲ ಕಾಣುತ್ತಿಲ್ಲ ಎಂದು ಹೇಳಿದರು. ಲಕ್ಕವಳ್ಳಿ ಪ್ರಾಜೆಕ್ಟಿಗೆ ಸುಮಾರು ಒಂದು ಕೋಟಿ ರೂಪಾಯಿಗಳವರೆಗೂ ಖರ್ಚಾಗಿದೆ. ಆದರೆ ಕಣ್ಣಿಗೆ ಕಾಣುವುದು ಬರೀ ಭೂಮಿಯನ್ನು ಸಮಮಾಡುವುದು ಮುಂತಾದ ಕೆಲಸ ನಡೆಯುತ್ತಿರುವುದು. ತುಂಗಾನದಿ ಅಣೆಕಟ್ಟಿನ ಕೆಲಸ ಮಾಡಿದ್ದೇವೆ. ಅದರಿಂದ ಪ್ರತಿಫಲ ಈಗ ಕಾಣುವುದಿಲ್ಲ. ಆದರೆ ಕೆಲಸ ನಡೆದ ಕೂಡಲೆ, ಅಣೆಕಟ್ಟು ಕಟ್ಟಿದ ಪ್ರತಿಫಲ ಕೂಡಲೆ, ಎದ್ದುಕಾಣಬೇಕೆಂದು ಹೇಳಿದರೆ ಸಾಧ್ಯವಾಗುವುದಿಲ್ಲ. ಅದಕ್ಕೆ ಸ್ವಲ್ಪ ಕಾಲ ಬೇಕು.

ರಸ್ತೆ ವಿಚಾರ ಹೇಳಿದರು. ಅದನ್ನಾಗಲೇ ಅರಿಕೆಮಾಡಿಕೊಂಡಿದ್ದೇನೆ. ಇತ್ತೀಚೆಗೆ ರಸ್ತೆಯ ಸಂಚಾರ ಜಾಸ್ತಿಯಾಗಿರುವುದರಿಂದ ಮೊದಲು ರಸ್ತೆ ಬಾಳಿಕೆ ಬರುತ್ತಿದ್ದಷ್ಟು ಈಗ ಬರುತ್ತಿಲ್ಲ, ಅದಕ್ಕೆ ವಾಟರ್ ಬೌಂಡ್ ಮಕೇಡಮ್ ಎಂಬ ಸಿಸ್ಟಂ ಪ್ರಕಾರ ರಸ್ತೆ ವ್ಯವಸ್ಥೆಯಿರುವುದು ಈಗಿನ ಸ್ಥಿತಿಗತಿಗನುಗುಣವಾಗಿಲ್ಲ. ಈಗಿನ ಸ್ಥಿತಿಗತಿಗನುಗುಣವಾಗಿ ರಸ್ತೆಮಾಡಬೇಕಾದರೆ, ರಸ್ತೆಯನ್ನು ಅಸ್ಫಾಲ್ಟ್ ಮೂಲಕ ಅಥವಾ ಸಿಮೆಂಟ್ ಕಾಂಕ್ರೀಟ್ ಮೂಲಕ ಮಾಡಬೇಕು. ಹಾಗೆಮಾಡುವುದು ಬಹಳ ತೊಂದರೆ. ಹತ್ತು ಅಡಿ ಅಗಲ ಸಿಮೆಂಟ್ ಕಾಂಕ್ರೀಟ್ ರಸ್ತೆ ನಿರ್ಮಾಣಮಾಡಲು ಒಂದು ಮೈಲಿಗೆ ಸುಮಾರು 50 ಸಾವಿರ ರೂಪಾಯಿಗಳ ಖರ್ಚಿದೆ, ಅದೇ ರೀತಿಯಲ್ಲಿ ಅಸ್ಫಾಲ್ಟ್ ರಸ್ತೆಮಾಡುವುದಕ್ಕೆ ಒಂದು ಮೈಲಿಗೆ 20-25 ಸಾವಿರ ರೂಪಾಯಿ ವಳು ಖರ್ಚಾಗುತ್ತವೆ. ಅದ್ದರಿಂದ ನಮ್ಮ ಹಣಕಾಸಿನ ಸ್ಥಿತಿಗತಿ ಉತ್ತಮವಾಗುವವರೆಗೆ ರಸ್ತೆಯ ಸ್ಥಿತಿ ಉತ್ತಮವಾಗುತ್ತದೆಂದು ಭಾವಿಸಿಲ್ಲ.

ಮತ್ತೊಂದು ಅಂಶವನ್ನು ಸಭೆಯ ಗಮನಕ್ಕೆ ತಂದರು. ಈ ಇಲಾಖೆಯಲ್ಲಿ ನೌಕರರ ಸಂಖ್ಯೆ ಜಾಸ್ತಿಯಾಗಿದೆ, ಕಡಮೆಮಾಡಬಹುದು ಎಂದು ಹೇಳಿದರು. ನೌಕರರ ಸಂಖ್ಯೆ ಕಡಮೆಮಾಡುವ ಬಗ್ಗೆ ಈಗಾಗಲೇ ಕೆಲವು ನಿರ್ದಿಷ್ಟ ಕಾರ್ಯಕ್ರಮಗಳನ್ನು ಕೈಕೊಂಡಿದ್ದೇವೆ. ಕೆಲವು ಇಲಾಖೆಗಳಲ್ಲಿ ಮಟ್ಟಿಗೆ ಖರ್ಚು ಕಡಮೆಮಾಡಿದ್ದೇವೆ.

Sri S. SRINIVASA IYENGAR.—Cannot the posts of the Secretary to Government, Public Works Department and the Chief Engineer be clubbed together?

Sri Kadidal MANJAPPA.—It cannot be. The reason is simple. ನೀವು ಹೇಳಿದ ಹಾಗೆ ಮಾಡಿದರೆ.

ಸೆಕ್ರೆಟರಿ ಆಗಿರುವವರೇ ಚೀಫ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನಡೆಯತಕ್ಕ ಕೆಲಸಕಾರ್ಯಗಳ ಮೇಲೂ ನಿಗಾ ಇಟ್ಟುಕೊಂಡು ಕೆಲಸಮಾಡುತ್ತಾರೆ. ಚೆಕ್ ಇದ್ದಹಾಗೆ ಇರಬೇಕು. ಆದ್ದರಿಂದ ಅವೆರಡನ್ನೂ ಒಂದುಗೂಡಿಸುವುದಕ್ಕೆ ಸಾಧ್ಯವಿಲ್ಲ.

ಆಮೇಲೆ ಸೂಪರಿಂಟೆಂಡಿಂಗ್ ಇಂಜನಿಯರುಗಳು ಅನಾವಶ್ಯಕ ವೆಂದು ವಾದಿಸಿದ್ದಾರೆ. ಸಾಧ್ಯವಾದ ಮಟ್ಟಿಗೂ ಸಂಖ್ಯೆ ಕಡಮೆ ಮಾಡುವುದಕ್ಕೆ ಪ್ರಯತ್ನಪಟ್ಟಿದೆ. ಎಲೆಕ್ಟ್ರಿಕಲ್ ಡಿವಿಜನಲ್ಲಿರತಕ್ಕ ಸೂಪರಿಂಟೆಂಡಿಂಗ್ ಎಂಜಿನಿಯರ ಹುದ್ದೆಯನ್ನು ರದ್ದುಗೊಳಿಸದೆ ಸಾಧ್ಯವಾದ ಮಟ್ಟಿಗೂ ಈ ಇಲಾಖೆಯಲ್ಲೂ ಇತರ ಇಲಾಖೆಗಳಂತೆಯೇ ಖರ್ಚು ಕಡಮೆ ಮಾಡುವುದಕ್ಕೆ ಪ್ರಯತ್ನಪಡುತ್ತೇವೆ. ಆದರೆ ತಮ್ಮಗಳ ಸಹಕಾರ ಬೇಕು. ಅಸ್ಪಷ್ಟವಾಗಿ ಹೇಳುವುದಕ್ಕಿಂತ, ಅನಿರ್ದಿಷ್ಟವಾಗಿ ಹೇಳುವುದಕ್ಕಿಂತ ಉದಾಹರಣೆಗಳನ್ನು ಸರ್ಕಾರದ ಗಮನಕ್ಕೆ ತಂದರೆ ಈ ಇಲಾಖೆಯನ್ನು ಖಂಡಿತ ಉತ್ತಮಪಡಿಸುವುದಕ್ಕೆ ಪ್ರಯತ್ನಪಡುತ್ತೇವೆ, ಎಂದು ಮನವಿಮಾಡಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್ ಅವರು.—ಪ್ರವೀಣರ ಅಭಿಪ್ರಾಯ ತೆಗೆದುಕೊಳ್ಳುತ್ತೀರಿ. ಹೀಗಿರುವಾಗ ರೀಆರ್ಗನೈಸ್ ಮಾಡಬೇಕಾದರೂ......

Sri S. SRINIVASA IYENGAR.—On a point of order, Sir. Can the member speak after the reply by the Hon'ble Minister?

Mr. SPEAKER.—No.

Sri D. DEVARAJ URS.—I beg leave of the House to withdraw my cut motion.

The cut motion was by leave, withdrawn.

Road in Malnad.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು (ಚಿಕ್ಕಮಗಳೂರು—ಮೂಡಿಗೆರೆ).—ಸ್ವಾಮಿ ನನ್ನ ಖೋತಾ ನಿರ್ಣಯವನ್ನು ಸಭೆಯಮುಂದೆ ಮಂಡಿಸುತ್ತೇನೆ. ಅದು ಈ ರೀತಿ ಇದೆ.

"50 ಸಿವಿಲ್ ಕಾಮಗಾರಿಗಳು ಎಂಬಬಾಬಿನಲ್ಲಿ ₹ 1,64,06,000 ರೂಪಾಯಿಗಳ ಡಿಮಾಂಡ್ ಮನವಿಯ ಸಂಬಂಧದಲ್ಲಿ 100 ರೂಪಾಯಿಗಳನ್ನು ಕಡಮೆ ಮಾಡಬೇಕು, ಮಲೆನಾಡು ಪ್ರಾಂತ್ಯದಲ್ಲಿ ಸಂಚಾರ ಸೌಕರ್ಯ ಹೆಚ್ಚಿಸಬೇಕು, ಆ ಬಗ್ಗೆ ಸರ್ಕಾರದವರ ಮನವನ್ನು ಎಳೆಯುವುದಕ್ಕಾಗಿ"

ಮಲೆನಾಡು ಬಹಳ ವಿಸ್ತಾರವಾದ ಪ್ರದೇಶವಾಗಿದೆ. ಆದರೆ ಜನಸಂಖ್ಯೆ ಬಹಳ ಕಡಮೆಯಾಗಿರುತ್ತದೆ. ಅಲ್ಲಿರತಕ್ಕ ಜನಗಳಿಗೆ ಮಾರ್ಗಾನುಕೂಲ ಸರಿಯಾಗಿಲ್ಲ ಎಂಬ ವಿಚಾರ ಸರ್ಕಾರದವರಿಗೂ ಗೊತ್ತಿದೆ. ಮಾನ್ಯ ಮಂತ್ರಿಗಳು ಆ ಮಲೆನಾಡು ಜಿಲ್ಲೆಗಳಲ್ಲಿ ಪ್ರವಾಸ ಮಾಡುವಾಗ ಆ ಜಿಲ್ಲೆಗಳ ಅನುಭವ ಹೊಂದಿರುತ್ತಾರೆ. ಅಲ್ಲಿ ಸಂಚಾರಕ್ಕೆ ಸೌಕರ್ಯ ಸರಿಯಾಗಿಲ್ಲದೆ ಅನೇಕ ವಿಚಾರಗಳಲ್ಲಿ ಹಿಂದುಳಿದಿವೆ. ಸರ್ಕಾರದವರು ಆ ಜಿಲ್ಲೆಗೆ ಹೆಚ್ಚು ನಿಗಾ ಕೊಡುತ್ತಿಲ್ಲ ಎಂಬ ಅಂಶವನ್ನು ನಾನು ಬಹಳ ವಿಷಾದದಿಂದ ಹೇಳುತ್ತಾ ಇದ್ದೇನೆ. ಮಲೆನಾಡು ಬಹಳ ಅನಾದರಣೆಗೆ ಗುರಿಯಾಗಿದೆ ಎಂದು ಖಂಡಿತವಾಗಿ ಹೇಳುತ್ತೇನೆ. ರಸ್ತೆಗಳಾಗಲಿ ಸೇತುವೆಗಳಾಗಲಿ, ವಿದ್ಯುಚ್ಛಕ್ತಿ ಆಗಲಿ ಯಾವ ವಿಷಯವನ್ನೇ ತೆಗೆದುಕೊಂಡರೂ ಅನಾದರಣೆ ಹೆಚ್ಚಾಗಿದೆ. ನಮ್ಮ ಮೈಸೂರು ಜಿಲ್ಲೆಯ ಪ್ರತಿನಿಧಿಗಳು ಎರಡು ಮೈಲಿ ರಸ್ತೆ ಮಾಡಿಸಿಕೊಡಬೇಕೆಂದು ಕೇಳಿದ್ದಾರೆ. ಇಷ್ಟೊಂದು ರಸ್ತೆಗಳಿರುವಾಗ ಎರಡು ಮೈಲಿ ರಸ್ತೆ ಮಾಡಿಸಿಕೊಡಬೇಕೆಂದು ಕೇಳುವಾಗ ಏನೂ ಇಲ್ಲದೆ ಇರತಕ್ಕ ನಮ್ಮ ಮಲೆನಾಡು ಜಿಲ್ಲೆಯಲ್ಲಿ 50 ಮೈಲಿ ರಸ್ತೆ ಮಾಡಿಸಿಕೊಡಿ ಎಂದು ಕೇಳುವುದೇನೂ ಹೆಚ್ಚಲ್ಲ ನಮ್ಮ ಸ್ಥಿತಿ ಹೀಗಿದೆ. ಮಲೆನಾಡಿನ ಕ್ಷೇತ್ರ ದೊಡ್ಡದಾಗಿದ್ದರೂ ಡೀಲಿಮಿಟೇಷನ್ ಮಾಡುವಾಗ ಆ ಜಿಲ್ಲೆಯನ್ನು ಹರಿದು ಹಂಚಿರುತ್ತಾರೆ. ಹೀಗೆ ಮಾಡಿರುವುದರಿಂದ, ಆ ಜನಗಳು ಅಕ್ಕ ಪಕ್ಕದ ಪ್ರದೇಶಗಳಿಗೆ ಸೇರಿಸಿರತಕ್ಕ ಸ್ಥಳಗಳಿಗೆ ಹೋಗಿಬರಲು ರಸ್ತೆ ಸೌಕರ್ಯ ಇದೆಯೇ, ಜನಗಳಿಗೆ ಅನುಕೂಲವಾಗುತ್ತದೆಯೇ ಎಂಬುದನ್ನು ಸರ್ಕಾರದವರು ನೋಡಬೇಕು. ನಮ್ಮ ಜಿಲ್ಲೆಯಲ್ಲಿ ಬಾಳೆ ಹೊನ್ನೂರು ರಸ್ತೆ ನೋಡಿದ್ದೀರಿ. ಚಿಕ್ಕಮಗಳೂರು—ನರಸಿಂಹರಾಜಪುರ ರಸ್ತೆ, ಬೆಳವಾಡಿ ರಸ್ತೆ, ಹೀಗೆಯೇ ಒಂದೊಂದು ರಸ್ತೆಯ ಹೆಸರನ್ನು ಹೇಳುತ್ತಾ ಹೋದರೆ ಅದೇ ಒಂದು ದೊಡ್ಡ ಪಟ್ಟಿಯಾಗುತ್ತದೆ. ಈ ರಸ್ತೆಗಳ ಸ್ಥಿತಿ ಯಾವ ರೀತಿಯಲ್ಲಿದೆ ಎಂಬುದನ್ನು ಮಂತ್ರಿಗಳು ಯೋಚನೆ ಮಾಡಿ ನೋಡಬೇಕು. ಅಲ್ಲಿಗೆ ಹೋಗಿ ನೋಡಿದರೆ ಅದರ ಕಷ್ಟ ಗೊತ್ತಾಗುತ್ತದೆ. ಸರ್ಕಾರಕ್ಕೆ ನಮ್ಮ ಜಿಲ್ಲೆಯಿಂದ ಬೇಕಾದಷ್ಟು ಉತ್ಪತ್ತಿ ಇದೆ, ಹೀಗಿದ್ದರೂ ಕೂಡ ನಮ್ಮ ಜಿಲ್ಲೆಯನ್ನು ಅನಾದರಣೆ ಮಾಡುವುದು ಬಹಳ ಅನ್ಯಾಯ. ಸರ್ಕಾರದವರು ಈ ಜಿಲ್ಲೆಯಮೇಲೆ ಹೆಚ್ಚು ನಿಗಾ ಇಟ್ಟು, ರಸ್ತೆಗಳ ಸೌಕರ್ಯ, ಸಣ್ಣ ಸಣ್ಣ ಸೇತುವೆಗಳ ಸೌಕರ್ಯ, ಆಸ್ಪತ್ರೆಗಳ ಸೌಕರ್ಯ ಇವುಗಳನ್ನು ಮಾಡಿ ಕೊಟ್ಟರೆ ಜನಗಳಿಗೆ ತುಂಬಾ ಉಪಕಾರವಾಗುತ್ತದೆ. ಅದಕ್ಕೆ ನಾವು ಸಾಕಷ್ಟು ಸಹಕಾರ ಮಾಡುತ್ತೇವೆ. ಆದ್ದರಿಂದ ಮಲೆನಾಡಿನ ಜಿಲ್ಲೆಯಾದ ನಮ್ಮ ಜಿಲ್ಲೆಗೆ ಸರ್ಕಾರದವರು ಖಂಡಿತವಾಗಿಯೂ ಹೆಚ್ಚು ನಿಗಾ ಕೊಡಬೇಕು. ಇಂಜನಿಯರಿಂಗ್ ಇಲಾಖೆ ಇದೆ. ಹಳ್ಳಿ ಜನಗಳಿಗೆ ಅದು ಗೊತ್ತಿಲ್ಲ. ಡಿಸ್ಟ್ರಿಕ್ಟ್ ಬೋರ್ಡಿನವರು ನಿರ್ಣಯ ಮಾಡುತ್ತಾರೆ. ಆಮೇಲೆ ಅಂದಾಜು ಆಗುತ್ತದೆ. ಅಂದಾಜಾದಮೇಲೆ ಕೆಲಸ ಪ್ರಾರಂಭಮಾಡಬೇಕಾದರೆ 4-5 ವರ್ಷಗಳಾದರೂ ಆಗುವುದಿಲ್ಲ. ಈ ರೀತಿ ಆದರೆ ಹಳ್ಳಿಯವರಿಗೆ ಏನು ಗೊತ್ತಾಗುತ್ತದೆ? ಇಂಜನಿಯರಿಂಗ್ ಇಲಾಖೆ ಏನು ಕೆಲಸ ಮಾಡುತ್ತದೆ, ಏನು ಕೆಲಸ ಮಾಡುವುದಿಲ್ಲ ಎಂಬುದು ಹಳ್ಳಿಯವರಿಗೆ, ರೈತರಿಗೆ ಗೊತ್ತಾಗುವುದಿಲ್ಲ. ಇಂಜನಿಯರಿಂಗ್ ಇಲಾಖೆಯಲ್ಲಿ ಒಳ್ಳೆಯ ಬುದ್ಧಿವಂತರೂ, ಪ್ರವೀಣರೂ ಆದ ಅಧಿಕಾರಿಗಳು ಇದ್ದಾರೆ. ಅದು ನಮಗೆ ಗೊತ್ತಿದೆ. ಇಲ್ಲದೇ ಇದ್ದಿದ್ದರೆ ಕನ್ನಂಬಾಡಿ, ಲಕ್ಕವಳ್ಳಿ ಜಲಾಶಯ ಮುಂತಾದುವು ನಮ್ಮ ದೇಶದಲ್ಲಿ ಆಗುತ್ತಾ ಇರಲಿಲ್ಲ. ಸರ್ ಎಂ. ವಿಶ್ವೇಶ್ವರಯ್ಯನವರಂಥ ದೊಡ್ಡ ದೊಡ್ಡ ಅಧಿಕಾರಿಗಳು ಇಂಜನಿಯರಿಂಗ್ ಇಲಾಖೆಯಲ್ಲಿ ಇದ್ದಾರೆ. ಅವರು ಇರುವುದು ನಮಗೆ ಒಂದು ಹೆಮ್ಮೆ. ಅವರು ಜವಾಬ್ದಾರಿಯನ್ನು ನಿರ್ವಹಿಸದೇ ಹೋದರೆ ದೇಶಕ್ಕೆ ಅನ್ಯಾಯವಾಗುತ್ತದೆ ಸಬ್‌ಓವರ್ಸಿಯರುಗಳಿಂದ ಒಂದು ಕಾಸಿನ ಪ್ರಯೋಜನವೂ ಆಗುತ್ತಾ ಇಲ್ಲ. (ಸಭೆಯಲ್ಲಿ ನಗು!) ನನ್ನ ಅನುಭವವನ್ನು ಹೇಳುತ್ತಾ ಇದ್ದೇನೆ. ತಪ್ಪಿದ್ದರೆ ಸರಿಪಡಿಸಿ, ಒಪ್ಪಿಕೊಳ್ಳುತ್ತೇನೆ. ಅವರು ಈ ಇಲಾಖೆಯಲ್ಲಿ ರತಕ್ಕದ್ದು ಅನಾವಶ್ಯಕ ಎಂದು ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಬೆಂಗಳೂರು—ಮಂಗಳೂರು ರಸ್ತೆ ಇದೆ. ಮಂಗಳೂರು ರಸ್ತೆ 2 ಫರ್ಲಾಂಗ್ ನೋಡಿದರೆ ಗೊತ್ತಾಗುತ್ತದೆ, ಸರ್ಕಾರದವರಿಗೆ ಬಹಳ ಹೇಳಬೇಕಾಗಿಲ್ಲ. ಅಲ್ಲಿ ಯಾವ ತರಹ ರಸ್ತೆ ಕಾಮಗಾರಿ ಮಾಡುತ್ತಾರೆ, ಡಿಸ್ಟ್ರಿಕ್ಟ್ ಬೋರ್ಡ್‌ನವರಿಗೆ ಎಷ್ಟು ಹೆಚ್ಚಿನ ಜವಾಬ್ದಾರಿ ಕೊಟ್ಟಿದ್ದಾರೆ ಎಂಬುದು ತಿಳಿಯುತ್ತದೆ. ಅದೇ ತರಹ ಸಂಪ್ರದಾಯವನ್ನು ಇಲ್ಲೂ ಏಕೆ ತರಬಾರದು? ಆದ್ದರಿಂದ ಮಂಗಳೂರಿನವರು ಯಾವ ರೀತಿ ಕಾರ್ಯಕ್ರಮವನ್ನು ಕೈಕೊಂಡಿದ್ದಾರೋ ಅದೇ ರೀತಿ ಕಾರ್ಯಕ್ರಮವನ್ನು ನಮ್ಮ ದೇಶದಲ್ಲಿ ಜಾರಿಗೆ ತಂದು ಮಲೆನಾಡಿನಲ್ಲಿ ವಿಶೇಷ ಸೌಕರ್ಯ ಒದಗಿಸಿಕೊಡಬೇಕೆಂದು ಸರ್ಕಾರದವರಲ್ಲಿ ಮನವಿಮಾಡಿಕೊಳ್ಳುತ್ತೇನೆ. ಅನೇಕ ವಿಚಾರಗಳನ್ನು ಹೇಳಿದ್ದೇನೆ. ಸರ್ಕಾರದವರಿಗೆ ಎಲ್ಲಾ ಗೊತ್ತಿದೆ, ಆದ್ದರಿಂದ ಹೇಳಿದ್ದನ್ನೇ ಪದೇ ಪದೇ ಹೇಳದೆ ಮಲೆನಾಡಿನ ಅಭಿವೃದ್ಧಿಗೆ ಸೂಕ್ತ ಕಾರ್ಯಕ್ರಮ ಕೈಕೊಳ್ಳಬೇಕೆಂದು ಹೇಳಿ ಈ ನಿರ್ಣಯವನ್ನು ಸಭೆಯ ಮುಂದೆ ಇಟ್ಟಿದ್ದೇನೆ.

Mr. SPEAKER.—Cut motion moved:

"That the demand be reduced by Rs, 100."

ಶ್ರೀ ಕಡಿದಾಳ್ ಮಂಜಪ್ಪನವರು.—ಮಲೆನಾಡಿನ ಅಭಿವೃದ್ಧಿ ಆಗಬೇಕು, ಮಲೆನಾಡಿನಲ್ಲಿ ರಸ್ತೆ ಸೌಕರ್ಯ ಆಗಬೇಕು ಎಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಮಲೆ

ನಾಡು ಅಭಿವೃದ್ಧಿಗೆ ಒಂದು ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕೆಂಬ ಪಾಂಚವಾರ್ಷಿಕ ಯೋಜನೆಯಲ್ಲಿ ಒಂದು ಯೋಜನೆ ಇದೆ. ಆದರೆ ಹಣದ ಅಭಾವದಿಂದ ಆ ಯೋಜನೆಯನ್ನು ತೆಗೆದುಕೊಂಡು ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯವಾಗಲಾರದು ಎಂದು ಹೇಳಿ ವಿಷಾದವನ್ನು ನಾನು ವ್ಯಕ್ತಪಡಿಸುತ್ತೇನೆ. ಆದರೂ ಕೂಡ ಸಾಧ್ಯವಾದಮಟ್ಟಿಗೂ ಮಲೆನಾಡಿನ ತಾಲ್ಲೂಕುಗಳಲ್ಲಿ ಸಣ್ಣ ಸಣ್ಣ ರಸ್ತೆಗಳ ನಿರ್ಮಾಣಕ್ಕೂ ಮತ್ತು ಸಣ್ಣ ಸಣ್ಣ ಸೇತುವೆಗಳ ನಿರ್ಮಾಣಕ್ಕೂ ಹಣವನ್ನು ಮುಂದಿನ ವರ್ಷದ ಬಡ್ಜೆಟ್‌ನಲ್ಲಿ ಮೀಸಲಾಗಿಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಹೇಳಿ ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತೇನೆ. ಈಗಾಗಲೇ 6 ಸೇತುವೆಗಳು ಮಲೆನಾಡಿನಲ್ಲಿ ಆಗಿವೆ. ಕೆಲವು ಸೇತುವೆಗಳ ಕೆಲಸ ಇನ್ನೂ ಮುಗಿದಿಲ್ಲ. ಹೊಸದಾಗಿ ಕುಮುದ್ವತಿ ನದಿಗೆ ಒಂದು ಸೇತುವೆ ಕಟ್ಟುತಕ್ಕ ಕೆಲಸ ನಡೆಯುತ್ತಾ ಇದೆ. ಆ ಮೇಲೆ ಹೊಸನಗರ—ಅನಂತಪುರ ರಸ್ತೆಯಲ್ಲಿ ಒಂದು ಸೇತುವೆ ಕೆಲಸ ನಡೆಯುತ್ತಾ ಇದೆ. ಇನ್ನೂ ಅನೇಕ ಕಡೆಗಳಲ್ಲಿ ಸಣ್ಣ ಸಣ್ಣ ಸೇತುವೆಗಳ ಕೆಲಸ ನಡೆಯುತ್ತಾ ಇದೆ. ಆದ್ದರಿಂದ ಸರ್ಕಾರದವರು ನಾನು ಮೊದಲೇ ಅರಿಕೆಮಾಡಿಕೊಂಡಹಾಗೆ ಸಾಧ್ಯವಿರುವ ಮಟ್ಟಿಗೂ ಮಲೆನಾಡನ್ನು ಸಹಾನುಭೂತಿ ದೃಷ್ಟಿಯಿಂದ ನೋಡುತ್ತಾರೆ ಎಂದು ಭರವಸೆ ಕೊಡುತ್ತೇನೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ಮಾನ್ಯ ಮಂತ್ರಿಗಳು ಮಲೆನಾಡಿನ ವಿಚಾರದಲ್ಲಿ ನಿಗಾಕೊಡುತ್ತಾರೆ ಎಂಬ ಭರವಸೆಯ ಮೇಲೆ ಈ ಖೋತಾ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

The cut motion was, by leave, withdrawn.

Need for a Bridge across Yagachi River near Settihalli.

ಶ್ರೀ ಜಿ. ಎ. ತಿಮ್ಮಪ್ಪಗೌಡರು (ಅರಕಲಗೂಡು).—ಅಧ್ಯಕ್ಷರೆ, I move:

> "That the demand under the head '50. Civil Works, Original Works — Communications' for Rs. 13,40,000 be reduced by Rs. 100 (to press the need for constructing a bridge across Yagachi River near Settihalli, Hassan Taluk)"

ಸ್ವಾಮಿ, ಈ ಸೇತುವೆಯನ್ನು ಯಗಚಿ ನದಿಗೆ ಸೆಟ್ಟಿಹಳ್ಳಿ ಬಳಿ ಕಟ್ಟಬೇಕೆಂದು ಹೇಳಿ ಸುಮಾರು 30 ವರ್ಷಗಳಿಂದಲೂ ಅಲ್ಲಿನ ಜನರು ಕೇಳುತ್ತಿದ್ದಾರೆ. ಜನಗಳು ಕೇಳುವುದೇ ಅಲ್ಲದೆ ಸಾರ್ವಜನಿಕ ಮುಖಂಡರೂ ಕೂಡ ಹಿಂದಿನ ಸರ್ಕಾರದವರನ್ನು ಒತ್ತಾಯಪಡಿಸಿದರು ಮತ್ತು ಈಗಿನ ಸರ್ಕಾರದವರನ್ನೂ ಬಹಳ ಒತ್ತಾಯಪಡಿಸುತ್ತಿದ್ದಾರೆ. ಮಾನ್ಯ ಮಂತ್ರಿಗಳು ಮೊನ್ನೆತಾನೆ ಆ ಜಿಲ್ಲೆಗೆ ಪ್ರವಾಸ ಬಂದಾಗಲೂ ಕೂಡ ಈ ಸೇತುವೆಯ ಸ್ಥಳವನ್ನು ನೋಡಿಕೊಂಡು ಬಂದಿದ್ದಾರೆ. ಹಿಂದೆ ಶ್ರೀಮಾನ್ ಎ. ವಿ. ರಾಮನಾಥನ್‌ರವರ ಅಧ್ಯಕ್ಷತೆಯಲ್ಲಿ ಮಲೆನಾಡು ಡೆವಲಪ್‌ಮೆಂಟ್ ಕಮಿಟಿಯೊಂದು ಏರ್ಪಾಡಾಗಿತ್ತು. ಅದರ ಮುಂದೆಯೂ ಕೂಡ ಈ ವಿಷಯ ಪರ್ಯಾಲೋಚನೆಗೆ ಬಂದು ಯಗಚಿ ಹೊಳೆಗೆ ಸೆಟ್ಟಿಹಳ್ಳಿ ಬಳಿಯಲ್ಲಿ ಸೇತುವೆ ಕಟ್ಟಬೇಕೆಂದು ಅವರ ರಿಪೋರ್ಟಿನಲ್ಲೂ ತಿಳಿಸಿದ್ದಾರೆ. ಇಷ್ಟೆಲ್ಲಾ ಹೇಳಿದಮೇಲೆ ಅದರ ಆವಶ್ಯಕತೆ ಯೆಷ್ಟಿದೆಯೆಂಬುದನ್ನು ನಾನು ಒತ್ತಿ ಹೇಳಬೇಕಾಗಿಲ್ಲ. ಈಗ ಆಲೂರು ತಾಲ್ಲೂಕಿನ ಕುಂದೂರು ಹೋಬಳಿಯ ಸುಮಾರು 30–40 ಗ್ರಾಮಗಳು ಇತ್ತಕಡೆ ಯಗಚಿ ಹೊಳೆಯಿಂದಲೂ, ಅತ್ತಕಡೆ ಹೇಮಾವತಿ ಹೊಳೆಯಿಂದಲೂ ಸುತ್ತುವರಿಯಲ್ಪಟ್ಟು ಅದೊಂದು ದ್ವೀಪದೋಪಾದಿಯಲ್ಲಿವೆ. ಮಳೆ ಬಂದು ಪ್ರವಾಹ ಬಂದಾಗ ವರ್ಷದಲ್ಲಿ ಆರುತಿಂಗಳು ಕಾಲ ಆ ಗ್ರಾಮಗಳವರು ಈ ಕಡೆ ಅರಕಲಗೂಡಿಗಾಗಲಿ ಆ ಕಡೆ ಹಾಸನಕ್ಕಾಗಲಿ ಬರುವುದಕ್ಕೆ ಅವಕಾಶವಿರುವುದಿಲ್ಲ. ಇದನ್ನು ಹಿಂದಿನ ಸರ್ಕಾರದವರೇ ಅಜಮಾಯಿಷಿ ಮಾಡಿ, ಕೊನೆಗೆ ಕೇಂದ್ರ ಸರ್ಕಾರದಿಂದ ಕೊಡುವ ಹಣದಿಂದ ಮಾಡಿಸಿಕೊಡುವ ಕಾಮಗಾರಿಗಳ ಪಟ್ಟಿಯಲ್ಲಿ ಸೇರಿಸಿದ್ದರು. ನನಗೆ ಖಚಿತವಾಗಿ ತಿಳಿದುಬಂದಿರುವಂತೆ, ಕೇಂದ್ರ ಸರ್ಕಾರದವರು 1,60,000 ರೂಪಾಯಿಗಳನ್ನು ಸೆಂಟ್ರಲ್ ರಿಸರ್ವ್‌ನಿಂದ ಒದಗಿಸಿದ್ದಾರೆ. ಇನ್ನು ಉಳಿದಿದ್ದೆಲ್ಲಾ ನಮ್ಮ ಮೈಸೂರು ಸರ್ಕಾರದವರು ಸ್ಯಾಂಕ್ಷನ್ ಮಾಡುವುದು ಮಾತ್ರ. ಈ ಬಗ್ಗೆ 60,000 ರೂಪಾಯಿಗಳನ್ನು ಒದಗಿಸಿ ಎಗ್ಜಿಕ್ಯೂಟಿವ್ ಎಂಜನಿಯರಿಗೆ ಕೆಲಸ ಕೈಕೊಳ್ಳುವಂತೆ ತಿಳಿಸಿದ್ದಾರೆಂದೂ ನಮಗೆ ತಿಳಿದುಬಂದಿತ್ತು. ಇಷ್ಟಾಗಿದ್ದರೂ ಇಂದು ಪ್ರಶ್ನೆಯ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಹೇಳಿದ ಉತ್ತರ ಬಹಳ ನಿರಾಶಾದಾಯಕವಾಗಿತ್ತು. ಈ ಕೆಲಸವನ್ನು ಇನ್ನೂ ಕೈಕೊಳ್ಳದಿರುವುದಕ್ಕೆ ಕಾರಣವೇನೋ ಗೊತ್ತಿಲ್ಲ. ಈಗ್ಗೆ 30 ವರ್ಷಗಳಿಂದ ಹೀಗೆ ಕೇಳುತ್ತಿದ್ದರೂ ಸರ್ಕಾರದವರು ಏನು ಉತ್ತರ ಹೇಳುತ್ತಿದ್ದಾರೆಂದರೆ, ಗೊರೂರಿನ ಬಳಿ ಹೇಮಾವತಿ ನದಿಗೆ ಒಂದು ಜಲಾಶಯವನ್ನು ಮಾಡಬೇಕಾಗಿದೆ, ಅದನ್ನು ಕಟ್ಟಿದರೆ ಈ ಸೇತುವೆ ಮುಳುಗಿಹೋಗೋಣದರಿಂದ ಸರ್ಕಾರಕ್ಕೆ ಲುಕ್ಸಾನಾಗುತ್ತದೆ ಎಂದು. ಅದು ನಿಜವಿರಬಹುದು ಆದರೂ ಎಷ್ಟುದಿವಸ ಹೀಗೆಯೇ ಹೇಳುವುದು! ವರ್ಷ ವರ್ಷವೂ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಾ ನುಗು, ಭದ್ರಾ, ಲಕ್ಕವಳ್ಳಿ ಮುಂತಾಗಿ ನಾನಾ ಕಾಮಗಾರಿಗಳನ್ನು ಕೈಕೊಳ್ಳುತ್ತಲಿದ್ದಾರೆ. ಅಲ್ಲದೆ ಬರುವ ವರ್ಷಗಳಲ್ಲಿ 20–30 ಜಲಾಶಯಗಳನ್ನು ಕೈಕೊಳ್ಳಬೇಕೆಂದು ಮೈಸೂರಿಗೆ ಸಂಬಂಧಪಟ್ಟಂತೆ ಇರುವ 5 ವರ್ಷದ ಪ್ಲಾನಿನಲ್ಲಿಯೂ ಈ ಗೊರೂರು ಜಲಾಶಯವನ್ನು ಸೇರಿಸಿಲ್ಲ. ಅಂದಮೇಲೆ ಈ ಜಲಾಶಯ ಯಾವ ಕಾಲಕ್ಕೆ ಆಗುತ್ತದೆಯೋ ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಆ ಜಲಾಶಯದ ನೆಪವನ್ನಿಟ್ಟುಕೊಂಡು ಈ ಸೇತುವೆಯ ಕೆಲಸವನ್ನು ಮುಂದಕ್ಕೆ ಹಾಕುತ್ತಾಹೋಗುವುದು ಆ ಜನಗಳಿಗೆ ಬಹಳ ತೊಂದರೆ ಕೊಟ್ಟಂತಾಗುತ್ತದೆ. ಈ ಸೇತುವೆ ಅತ್ಯಾವಶ್ಯಕವೆಂಬುದನ್ನು ಮನಗಂಡು ಈ ವರ್ಷವೇ ಇದನ್ನು ಕೈಕೊಂಡು ಮುಗಿಸಬೇಕೆಂದು ಹೇಳಿ ಈ ಖೋತಾ ನಿರ್ಣಯವನ್ನು ಸಭೆಯ ಮುಂದಿಡುತ್ತೇನೆ.

Mr. SPEAKER.—Cut motion moved :-

> "That the demand be reduced by Rs. 100"

(*Sri K. Lakkappa rose*)

Mr. SPEAKER.—The Hon'ble Member now standing has sent me a

(MR. SPEAKER).

chit also, but to-day's understanding is the cover will move his cut motion and the Hon'ble Minister will reply immediately. That procedure has been adopted.

Sri K. LAKKAPPA.—Will an opportunity be given to have a personal talk with the concerned Minister?

ಶ್ರೀ ಕಡಿದಾಳ್ ಮಂಜಪ್ಪನವರು (ರೆವಿನ್ಯೂ ಮತ್ತು ಪಬ್ಲಿಕ್‌ವರ್ಕ್ಸ್ ಶಾಖೆಗಳ ಮಂತ್ರಿಗಳು).—ಅಧ್ಯಕ್ಷರೇ, ಈ ಸೇತುವೆಗೆ ಅವಶ್ಯಕತೆಯಿದೆಯೆಂಬುದನ್ನು ನಾನು ಹೋದ ತಿಂಗಳು ಆ ಸ್ಥಳಕ್ಕೆ ಹೋದಾಗ ಅರಿತುಕೊಂಡು ಬಂದಿದ್ದೇನೆ. ಆದರೆ, ಶ್ರೀಮಾನ್ ತಿಮ್ಮಪ್ಪಗೌಡರು ಹೇಳಿದ ಹಾಗೆ, ಗೊರೂರಿನ ಹತ್ತಿರ ಹೇಮಾವತಿ ನದಿಗೆ ಒಂದು ರಿಸರ್ವಾಯರ್ ಕಟ್ಟಿಸಿದರೆ, ಈ ಸೇತುವೆಯನ್ನು ಕಟ್ಟಿಸತಕ್ಕ ಪ್ರದೇಶ ಆ ಜಲಾಯದಿಂದ ಮುಳುಗಿಹೋಗುತ್ತದೆಂದು ನಮ್ಮ ಇಂಜಿನಿಯರಿಂಗ್ ಇಲಾಖೆಯವರು ತಿಳಿಸಿದ್ದಾರೆ. ಆದ್ದರಿಂದ ಗೊರೂರು ಜಲಾಶಯದ ಕೆಲಸವನ್ನು ನಾವು ಕೈಕೊಳ್ಳುವುದಾದರೆ ಈ ಸೇತುವೆಯ ಕೆಲಸವನ್ನು ಕೈಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂಬ ಅಂಶವನ್ನು ಮಾನ್ಯ ಸೂಚಕರು ತಿಳಿದುಕೊಳ್ಳಬೇಕು.

ಶ್ರೀ ಜಿ. ಎ. ತಿಮ್ಮಪ್ಪಗೌಡರು.—ಆಗಿನಿಂದಲೂ ಇದನ್ನೇ ಹೇಳುತ್ತಿದ್ದೀರಿ!

ಶ್ರೀ ಕಡಿದಾಳ್ ಮಂಜಪ್ಪನವರು.—ತಾವೂ ಆ ವಿಚಾರವನ್ನು ಹೇಳಿದಿರಿ. ಈಗ ಒಂದುವೇಳೆ ಈ ಜಲಾಶಯ ಪ್ರಯೋಜನಕ್ಕೆ ಬರುವುದಿಲ್ಲ ಎಂದು ಹೇಳುವುದಾದರೆ, ಆ ಕೆಲಸವನ್ನು ಬಿಟ್ಟುಬಿಟ್ಟು ಸೇತುವೆಯ ಕೆಲಸವನ್ನು ಮುಂದಿನ ವರ್ಷವೇ ಕೈಕೊಳ್ಳಲು ಪ್ರಯತ್ನ ಮಾಡುತ್ತೇವೆರಿದು ಹೇಳುತ್ತೇನೆ. ಹಾಗಿಲ್ಲದೆ ಜಲಾಶಯವನ್ನೇ ಕೈಕೊಳ್ಳುವುದು ಸೂಕ್ತವೆಂದು ಗೊತ್ತಾದರೆ, ಈ ಸೇತುವೆಯ ಕೆಲಸವನ್ನು ಕೈಕೊಳ್ಳುವುದಿಲ್ಲವೆಂದು ನಾನು ಹೇಳಬೇಕಾಗಿದೆ.

Sri G. A. THIMMAPPA GOWDA.—I beg leave to withdraw my cut motion.

The cut motion was, by leave, withdrawn.

Construction of a building for Sericultural Department on the Biligirirangan Hills.

ಶ್ರೀ ಜಿ. ಪಾಪಣ್ಣನವರು (ಶಿಡ್ಲಘಟ್ಟ-ಚಿಕ್ಕಬಳ್ಳಾಪುರ).—ಅಧ್ಯಕ್ಷರೇ, I move :—

> "That the demand under the head '50. Civil Works' for Rs.1,64,06,000 be reduced by Rs.100 (to raise a debate on the necessity to expedite the construction of the building for Sericultural Department on the Biligirirangan Hills."

ಅಧ್ಯಕ್ಷರೇ, ಬಿಳಿಗಿರಿರಂಗನ ಬೆಟ್ಟದ ಮೇಲೆ ರೇಷ್ಮೆ ಇಲಾಖೆಗೆ ಒಂದು ಕಟ್ಟಡವನ್ನು ಕಟ್ಟಿಸಲು ಕಳೆದ ಹತ್ತು ವರ್ಷಗಳಿಂದಲೂ ಬಡ್ಜೆಟ್ಟಿನಲ್ಲಿ ಹಣವನ್ನೊದಗಿಸುತ್ತಿದ್ದಾರೆ. ಆದರೆ ಎಂಜಿನಿಯರಿಂಗ್ ಇಲಾಖೆಯವರ ಸಹಕಾರವಿಲ್ಲದೆ ಆ ಕಟ್ಟಡ ಇನ್ನೂ ಆಗುವುದರಲ್ಲೇ ಇದೆ.

ಬಿಳಿಗಿರಿರಂಗನ ಬೆಟ್ಟದಮೇಲೆ ಈ ಕಟ್ಟಡವನ್ನು ಕಟ್ಟಿಸುವ ಅವಶ್ಯಕತೆ ಎಷ್ಟು ಇದೆ ಎಂದರೆ ಇಡೀ ರೇಷ್ಮೆ ಇಲಾಖೆಯ ಅಭಿವೃದ್ಧಿಯು ಅಲ್ಲಿ ನಡೆಯತಕ್ಕ ಕಾರ್ಯದ ಮೇಲೆ ಬಿದ್ದಿದೆಯೆಂದು ಹೇಳಿದರೆ ತಪ್ಪಾಗಲಾರದು. ಅಲ್ಲಿ ಜಪಾನಿನಿಂದ ತಂದಿರುವ ಬಿಳಿಯಗೂಡಿನ ಹುಳುವನ್ನು ಸಾಕುವುದಕ್ಕೆ ಅನುಕೂಲಪಡಿಸಿದ್ದಾರೆ. ಈ ಬಿಳಿ ಹುಳುಗಳು ಸಮಶೀತೋಷ್ಣವಲಯದ ವಾಯುಗುಣದಲ್ಲಿ ಚೆನ್ನಾಗಿ ಬೆಳೆಯುತ್ತವೆ. ಉಷ್ಣವಲಯದಲ್ಲಿ ಅಷ್ಟು ಚೆನ್ನಾಗಿ ಬೆಳೆಯುವುದಿಲ್ಲ. ಆದ್ದರಿಂದ ಮೈಸೂರು ದೇಶದಲ್ಲಿ ಬಿಳಿಗಿರಿರಂಗನ ಬೆಟ್ಟದ ಹವಾದಷ್ಟು ಅನುಕೂಲವಾದ ಹವಾಗುಣವು ನಮ್ಮ ದೇಶದ ಬೇರೆ ಯಾವ ಪ್ರದೇಶದಲ್ಲೂ ಇಲ್ಲ. ಹುಳು ಸಾಕಾಣಿಕೆ ಅಲ್ಲಿ ಬಹಳ ಚೆನ್ನಾಗಿ ನಡೆಯುತ್ತಿದೆ. ಇದಕ್ಕಾಗಿ 10–12 ವರ್ಷಗಳ ಹಿಂದಿನಿಂದ ಬಹಳ ಪ್ರಯತ್ನಗಳು ನಡೆಯುತ್ತಿವೆ. ಒಂದು ಷೆಡ್ ಹಾಕಿಕೊಂಡು ಹೇಗೋ ಕಷ್ಟದಿಂದ ಜನರು ನಡೆಸಿಕೊಂಡು ಹೋಗುತ್ತಿದ್ದಾರೆ. ಆದರೆ ನಾವು ನಿರೀಕ್ಷಿಸುವಷ್ಟು ಯಶಸ್ವಿಯಾಗಿ ಇದು ನಡೆಯಲು ಅವಕಾಶವಿಲ್ಲವಾಗಿದೆ. ಕಾರಣವೇನೆಂದರೆ, ಅಲ್ಲಿ ಹತ್ತಿರದಲ್ಲಿ ಊರು, ಕೇರಿ ಏನೂ ಇಲ್ಲ. ಆನೆ, ಕಿರುಬ ಮೊದಲಾದ ಕಾಡುಮೃಗಗಳ ಕಾಟ ಬೇರೆ, ಇಂಥ ಪರಿಸ್ಥಿತಿಯಲ್ಲಿ ಇಲಾಖೆಯ ಸಿಬ್ಬಂದಿಯವರಿಗಾಗಲಿ, ಹುಳು ಸಾಕಾಣಿಕೆಗಾಗಲಿ ಒಂದು ಕಟ್ಟಡವಿಲ್ಲದಮೇಲೆ ಆ ಬೆಟ್ಟದಮೇಲೆ ಯಾವರೀತಿ ಇರಬೇಕೆಂಬುದನ್ನು ತಜ್ಞರು ಯೋಚನೆಮಾಡಬಹುದು. ಅಕಸ್ಮಾತ್ತಾಗಿ ಸ್ವಲ್ಪ ಜೋರಾಗಿ ಗಾಳಿ ಬಂದರೆ ಷೆಡ್‌ಗಳೆಲ್ಲಾ ಹಾರಿಹೋಗುತ್ತವೆ! ಈ ಬಿಳಿಜಾತಿ ಹುಳು ಸರಿಯಾಗಿ ಅಭಿವೃದ್ಧಿಯಾಗದೆಹೋದರೆ ಇಡೀ ನಮ್ಮ ರೇಷ್ಮೆ ಕೈಗಾರಿಕೆಯೇ ನಶಿಸಿಹೋಗುತ್ತದೆ. ಏಕೆಂದರೆ, ಈ ದಿವಸ ನಾವು ರೇಷ್ಮೆಗೆ ಉಪಯೋಗಿಸುತ್ತಿರುವ ಗೂಡೆಲ್ಲಾ ಮಿಶ್ರಜಾತಿಯ ಗೂಡು. ಮಿಶ್ರಜಾತಿಯ ಗೂಡು ಬೇಕಾದರೆ ಮಿಶ್ರಜಾತಿಯ ಮೊಟ್ಟೆ ಬೇಕು. ಮಿಶ್ರಜಾತಿಯ ಮೊಟ್ಟೆ ಸಾಕಾದಷ್ಟು ಸಿಕ್ಕಬೇಕಾದರೆ ಹೊರದೇಶದ ಈ ಬಿಳಿ ಹುಳುಗಳ ಸಾಕಾಣಿಕೆ ಯಶಸ್ವಿಯಾಗಿ ಆಗಬೇಕು. ಬೇರೆ ಕಡೆಗಳಲ್ಲಿ ಇದು ಯಶಸ್ವಿಯಾಗಿ ಆಗುವುದಿಲ್ಲ. ಕೆಮ್ಮಣ್ಣುಗುಂಡಿಯಲ್ಲೇನೋ ಸ್ವಲ್ಪಮಟ್ಟಿಗೆ ಈಗ ಸಾಕುತ್ತಿದ್ದಾರೆ. ಆದರೆ ಅಲ್ಲೂ ಕೂಡ ಇಷ್ಟು ಯಶಸ್ವಿಯಾಗಿ ಆಗುತ್ತಿಲ್ಲ. ಆದ್ದರಿಂದ ಈ ಸ್ಥಳದ ಅವಶ್ಯಕತೆಗಳನ್ನು ಮನಗಂಡು ಈ ವರ್ಷವೇ ಈ ಕಟ್ಟಡಗಳನ್ನು ಕಟ್ಟಿಸಿಕೊಡುತ್ತಾರೆಂದು ನಂಬಿ ಈ ಕತ್ತರಿ ನಿರ್ಣಯವನ್ನು ಸಭೆಯಮುಂದಿಡುತ್ತೇನೆ.

Mr. SPEAKER.—Cut motion moved:—

> "That the demand be reduced by Rs. 100."

2-30 P.M.

ಶ್ರೀ ಕಡಿದಾಳ್ ಮಂಜಪ್ಪನವರು (ರೆವಿನ್ಯೂ ಮತ್ತು ಪಬ್ಲಿಕ್‌ವರ್ಕ್ಸ್ ಶಾಖೆಗಳ ಮಂತ್ರಿಗಳು).—ಅಧ್ಯಕ್ಷರೇ. ಸ್ವಾಮಿ, ಈಚೆಗೆ ಬಹುಶಃ ಅವರು ಬಿಳಿಗಿರಿರಂಗನಬೆಟ್ಟಕ್ಕೆ ಹೋಗಿಲ್ಲವೆಂದು ಕಾಣುತ್ತದೆ, ಹೋಗಿದ್ದಿದ್ದರೆ ಈ ಭಾಷಣವನ್ನು ಮಾಡುತ್ತಿರಲಿಲ್ಲ. ಕಟ್ಟಡದ ಬಗ್ಗೆ 37,800 ರೂಪಾಯಿಗಳಿಗೆ ಒಂದು ಅಂದಾಜನ್ನು 16-7-1951ರಲ್ಲಿ ಸರ್ಕಾರದವರು ಮಂಜೂರುಮಾಡಿ, ಅದರ ಕೆಲಸ ನಡೆಯುತ್ತಿದೆ. ಆಗಲೇ ಫೌಂಡೇಷನ್ ಆಗಿದೆ. ಮೇಲಿನ ಕಟ್ಟಡಕ್ಕೆ ಬೇಕಾದ ಸಾಮಾನುಗಳ

ನ್ನು ಶೇಖರಮಾಡಲಾಗಿದೆ. ಸಂಬಂಧಪಟ್ಟ ಅಧಿಕಾರಿಗಳ ವಾಸಕ್ಕೆ ಬೇಕಾದ ಮನೆಗಳಿಗೆ 21 ಸಾವಿರ ಚಿಲ್ಲರೆ ರೂಪಾಯಿಗೆ ಒಂದು ಅಂದಾಜನ್ನೂ ಮಂಜೂರುಮಾಡಿದ್ದೇವೆ. ಈ ಕೆಲಸವೂ ಕೂಡ ನಡೆಯುತ್ತಿದೆ. ಬಹುಶಃ ಒಂದೆರಡು ವರ್ಷಗಳೊಳಗೆ ಎರಡು ಕಟ್ಟಡಗಳೂ ಪೂರೈಸುತ್ತವೆ ಎಂಬ ನಿರೀಕ್ಷಣೆಯಿದೆ. ಆದುದರಿಂದ ಈ ಖೋತಾ ಸೂಚನೆಯನ್ನು ಅವರು ವಾಪಸು ತೆಗೆದುಕೊಳ್ಳುವರೆಂದು ಭಾವಿಸುತ್ತೇನೆ.

ಶ್ರೀ ಜಿ. ಪಾಪಣ್ಣನವರು.—ಅವರು ಕಟ್ಟಡವನ್ನು ಮುಗಿಸುತ್ತಾರೆಂಬ ಭರವಸೆಯಮೇಲೆ ನನ್ನ ಖೋತಾ ಸೂಚನೆಯನ್ನು ವಾಪಸು ತೆಗೆದುಕೊಳ್ಳಲು ಸಭೆಯ ಅನುಮತಿ ಬೇಡುತ್ತೇನೆ.

The cut motion was, by leave, withdrawn.

Programme for cementing and asphalting important Roads.

Sri S. SREENIVASA IYENGAR (T.-Narsipur).—Sir, I beg to move :

> "That the demand under the head "50. Civil Works" for Rs. 1,64,06,000 be reduced by Rs.100 (to urge the necessity of laying out a programme for cementing and asphalting all important roads in the State)".

Sir, while speaking about this cut motion I beg to place before this House a few of the following points which I consider are of utmost importance. Under the Development scheme according to the Budget of this year, our Government have provided 64·36 lakhs. This amount is made up of 23·54 lakhs drawn from the Central Road fund and 49·94 lakhs out of the general revenues. Even within this amount of 64·36 lakhs, 36·06 lakhs only is set apart for roads. Now Sir, the condition of the roads, as it is today, has already been referred to by me while I was moving my previous cut motion. How best we can improve these roads at the same time saving money to the exchequer of the State, is the subject now before us. I submit Sir, there are two methods: one is asphalting and the other is concerting. And for asphalting, I submit Sir, there are two methods. One is the pre-mixing method and the other is the surface coating and while the Hon'ble Minister was replying..............

Sri A. BHEEMAPPA NAIK (Molakalmuru) Grouting, pre-mixing and surface coating. These are three methods.

Sri S. SRINIVASA IYENGAR.—Thank you very much. These two methods cost Rs. 24,000 per mile. Surface coating would cost Rs. 12,000 per mile and cement concreting comes to about Rs. 50,000 per mile. As I have already said, we have nearly 10,853 miles to be cement-concreted and if the entire length is to be concreted, it would no doubt cost us very much. I would like to submit, Sir, that a programme has to be drawn up and I may say in this connection that there was a scheme before the Government, about 7 years back, as regards cement-concreting of all roads in the State. I also feel Sir, that that scheme has not been put into effect and further this scheme has been discontinued. Suppose Sir, we undertake to cement-concrete all our roads in a period of ten years. It would cost five crores of rupees per year and if a loan is raised to cover this expenditure the amount of interest that the State will have to pay would be twenty lakhs. If cement-concreting is not done then the amount of money that is allotted and wasted, comes to 28 lakhs in maintaining these roads. Maintenance has to be done every year. Twenty lakhs of rupees will be enough to pay as interest and we save 8 lakhs. So I submit Sir, and I recommend that a loan may be raised to cover this concreting scheme even though we have to pay an interest of nearly 20 lakhs; still we will be benefited because what we have to spend for maintenance we need not spend once again to that extent. Maintenance of these concrete roads costs us perhaps about Rs. 250 per mile and the life of these roads would be nearly 50 years. We manufacture cement and other raw materials that are necessary and are available with us and labour is cheap. We can certainly undertake this work and spread it over a period of ten years.

Further Sir, as regards the provision in the development scheme, I find that a sum of 15·53 lakhs has been provided for cement concreting. Just now I have stated that it would be necessary to

(SRI S. SRINIVASA IYENGAR)

spend Rs. 50,000 to concrete one single mile. For the whole State we will be concreting just 30 miles. I consider, Sir, that this quota of 30 miles out of 10,853 miles is absolutely negligible and insufficient. For asphalting we have allotted 12·82 lakhs and this works out to asphalting of 60 miles and the same observation applies to that also. There fore Sir, I know certainly that it may not be possible to undertake concreting the entire mileage within the State immediately and a comprehensive plan is absolutely necessary and we must see that all these roads are completely concreted or asphalted within a period of ten years. The Motor Vehicle owners and the owners of lorries and buses will be highly thankful to this Government and they will not hesitate to give some more taxes also. It will result in a saving to them because, at present, despite the huge sum of money that we are spending, they have to replace tyres and other spares and the cost of replacements is heavy. Everyday these buses need replacements and if such concrete roads are made, the owners of these vehicles will be highly thankful to the Government, because the cost of maintenance of their vehicles will be reduced to a very little amount and you can certainly collect more taxes from the users of the roads. Thank you Sir.

Mr. SPEAKER.—Cut motion moved;

"That the demand be reduced by Rs. 100."

ಶ್ರೀ ಕಡಿದಾಳ್ ಮಂಜಪ್ಪನವರು.—ಅಧ್ಯಕ್ಷರೆ, ಸ್ವಾಮಿ, ಶ್ರೀಮಾನ್ ಶ್ರೀನಿವಾಸಯ್ಯಂಗಾರ್ಯರು ಹೇಳಿರತಕ್ಕ ಕೆಲವು ವಿಚಾರಗಳಲ್ಲಿ ಸರ್ಕಾರಕ್ಕೂ ವರಿಗೂ ಯಾವ ಭಿನ್ನಾಭಿಪ್ರಾಯವೂ ಇರುವುದಿಲ್ಲ. ನಾನು ಆಗಲೇ ಹೇಳಿರುವಂತೆ, ನಮ್ಮ ಸಂಸ್ಥಾನದಲ್ಲಿ 10,853 ಮೈಲಿ ರಸ್ತೆಗಳಿವೆ. ಅವುಗಳ ಪೈಕಿ ಈಗಾಗಲೇ 67 ಮೈಲಿ 1 ಫರ್ಲಾಂಗ್‌ಗಳಿಗೆ ಕಾಂಕ್ರೀಟ್ ಹಾಕಿದೆ ಮತ್ತು ಸುಮಾರು 350 ಮೈಲಿಗೆ ಆಸ್‌ಫಾಲ್ಟ್ ಹಾಕಿದೆ. ಇದು ಕಡಮೆ ಎಂಬುದನ್ನು ಒಪ್ಪುತ್ತೇನೆ. ಈಗ ನಾವು ಸಿಮೆಂಟ್ ಕಾಂಕ್ರೀಟಿಂಗ್‌ಗೆ 15,53,000 ಸಾವಿರ ಒದಗಿಸಿದ್ದೇವೆ, ಆಸ್‌ಫಾಲ್ಟಿಂಗ್‌ಗೆ 12,72,000 ರೂಪಾಯಿ ಒದಗಿಸಿದ್ದೇವೆ; ಆದರೆ ಸರ್ಕಾರದ ಈಗಿನ ಹಣಕಾಸಿನ ಸ್ಥಿತಿಯಲ್ಲಿ ಇದಕ್ಕಿಂತ ಹೆಚ್ಚು ಒದಗಿಸುವುದಕ್ಕೆ ಸಾಧ್ಯವಿಲ್ಲ.

Sri S. SRINIVASA IYENGAR.—But the Government will be losing a lot of money in maintenance.

ಶ್ರೀ ಕಡಿದಾಳ್ ಮಂಜಪ್ಪನವರು.—ನಿಜವಾಗಿಯೂ ಇದಕ್ಕೆ ನಾವು ಉಪಯೋಗಿಸುವ ಹಣವನ್ನು ಕಾಂಕ್ರೀಟಿಂಗ್‌ಗೆ ಮತ್ತು ಆಸ್‌ಫಾಲ್ಟಿಂಗ್‌ಗೆ ಉಪಯೋಗಿಸಿದ್ದರೆ ಚೆನ್ನಾಗಿತ್ತು. ಆದರೆ ಕಾಯುವ ಸ್ಥಿತಿಯಲ್ಲಿಲ್ಲ. ಕೆಲವು ಕಡೆ ರಸ್ತೆಗಳು ತೀರಾ ಹಾಳಾಗಿವೆ; ಸ್ವಲ್ಪ ರಿಪೇರಿ ಬೇಗ ಮಾಡದೇಯಿದ್ದರೆ ನಿರ್ವಾಹವಿಲ್ಲ. ನಾವು ಯೋಜನೆಯ ಪ್ರಕಾರ ಕಾರ್ಯವನ್ನು ಕೈಕೊಂಡಿದ್ದೇವೆ. ಪ್ರತಿ ವರ್ಷವೂ ಸಾಧ್ಯವಾದಷ್ಟು ಕೆಲವು ಮೈಲಿಗಳವರೆಗೆ ಕಾಂಕ್ರೀಟನ್ನೂ ಕೆಲವು ಮೈಲಿಗಳವರೆಗೆ ಆಸ್‌ಫಾಲ್ಟನ್ನೂ ಮಾಡಬೇಕೆಂದು ತೀರ್ಮಾನಿಸಿದ್ದೇವೆ, ಅದರ ಪ್ರಕಾರ ನಡೆಸುತ್ತೇವೆ.

Sri S. SRINIVASA IYENGAR.—What is that scheme?

Sri Kadidal MANJAPPA.—We have got our own programme of asphalting and concreting.

Sri S. SRINIVASA IYENGAR.—30 miles per year?

Sri Kadidal MANJAPPA.—30 miles per year and if circumstances permit, we are going to enhance the grant if necessary.

Sri S. SRINIVASA IYENGAR.— In view of the assurances given by the Hon'ble Minister, I seek the permission of the House to withdraw my cut motion.

The cut motion was, by leave, withdrawn.

Sri S. SRINIVASA IYENGAR.—Sir, I do not move cut motion No. 18.

Mr. SPEAKER.—The cut motions under this Demand are over. If any Hon'ble Members are willing to speak on the main Demand itself, they are at liberty to do so. But we can extend the discussion on this Demand till Three of the Clock. Shall we fix 3 minutes or 5 minutes for each speaker?

(Several MEMBERS: Five minutes)

All right, 5 minutes will be allowed to each.

ಶ್ರೀ ಆರ್. ಅನಂತರಾಮಯ್ಯರವರು (ಚಾಮರಾಜಪೇಟೆ).—ಸ್ವಾಮಿ, ಈ ಡಿಮ್ಯಾಂಡಿನ ಮೇಲೆ ತರಲಾಗಿದ್ದ ಕತ್ತರಿ ನಿರ್ಣಯಗಳ ಮೇಲೆ ಮಾತನಾಡುತ್ತಾ ನನ್ನ ಕೆಲವು ಮಾನ್ಯ ಸ್ನೇಹಿತರು ಈಗಾಗಲೇ ಈ ಸಂಬಂಧವಾಗಿ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಅವೆಲ್ಲ ಬಹಳ ಉಚಿತವಾಗಿಯೂ ಇವೆ. ಆದರೆ ನಾನು ಒಂದು ಅಂಶವನ್ನು ಮಾತ್ರ ಈ ಮಾನ್ಯ ಸಭೆಯ ಗಮ

ನಕ್ಕೆ ತರಲು ಇಚ್ಛಿಸುತ್ತೇನೆ. ಈ ಇಲಾಖೆಯ ಕೆಲಸಗಳ ಕೆಲವನ್ನು ಕಂಟ್ರಾಕ್ಟರುಗಳ ಮೂಲಕವೂ ಮತ್ತೆ ಕೆಲವನ್ನು ಇಲಾಖೆ ಮುಖೇನವೂ ನಡೆಸಲಾಗುತ್ತಿದೆ. ಹಾಗೆ ಒಂದು ಕೆಲಸಕ್ಕೆ ಟೆಂಡರುಗಳನ್ನು ಕರೆದು, ಅವರಲ್ಲಿ ಯಾರು ಅತ್ಯಂತ ಕಡಮೆ ರೇಟಿಗೆ ಮಾಡುತ್ತೇವೆಂದು ತಿಳಿಸುತ್ತಾರೋ ಅಂಥವರಿಗೆ ಆ ಕೆಲಸವನ್ನು ಕೊಟ್ಟ ಬಳಿಕ ಅವರು ಅದನ್ನು ಬೇಗ ಪೂರೈಸಿದಾಗ್ಯೂ ಕೂಡ ಇಂಜನಿಯರಿಂಗ್ ಇಲಾಖೆಯವರು ಅವರಿಗೆ ಪಾವತಿ ಮಾಡತಕ್ಕ ಹಣವನ್ನು ಸರಿಯಾಗಿ ಸಕಾಲಕ್ಕೆ ಪಾವತಿ ಮಾಡುತ್ತಿಲ್ಲ. ಹೀಗೆ ಅನೇಕರು ತಮ್ಮ ಹಣವನ್ನು ಸಕಾಲಕ್ಕೆ ಪಡೆಯದೆ ಅನೇಕ ಕಷ್ಟನಷ್ಟಗಳಿಗೀಡಾಗಿದ್ದಾರೆ. ಇಂಜನಿಯರಿಂಗ್ ಇಲಾಖೆಯವರು ನಿಧಾನ ಮಾಡುತ್ತಾರೆಂದರೆ ಅದೇನು ತಿಂಗಳು ಲೆಕ್ಕದಲ್ಲಿ ಅಲ್ಲ, ವರ್ಷಗಟ್ಟಲೆ ಆ ಬಟವಾಡೆಗಳನ್ನು ಹಿಂದಕ್ಕೆ ಹಾಕಿಕೊಂಡು ಬಿಡುತ್ತಾರೆ. ಇವರು ಈ ರೀತಿ ಮಾಡುವುದರಿಂದ ಸಾಲ ಸೋಲ ಮಾಡಿ ಹಣ ತಂದು ಈ ಕೆಲಸಕ್ಕೆ ಹಾಕಿ, ಕೆಲಸವನ್ನು ಪೂರೈಸಿದರೂ ಕೂಡ ಅವರ ಬಿಲ್ಲನ್ನು ಪಾಸುಮಾಡಿ ಅವರಿಗೆ ಸಕಾಲಕ್ಕೆ ಈ ಇಲಾಖೆಯವರು ಹಣವನ್ನು ಕೊಡದೆ ನಿಧಾನ ಮಾಡುತ್ತಿರುವುದರಿಂದ ಅವರಿಗೆ ಬಡ್ಡೀ ಸಹ ಗಿಟ್ಟದಂತಾಗಿ ಅನೇಕ ಕಂಟ್ರಾಕ್ಟರುಗಳು ಇಂದ ಬಹಳ ದುಸ್ಥಿತಿಗೆ ಬಂದಿದ್ದಾರೆ. ಹೀಗೆ ಇನ್ನು ಮುಂದಕ್ಕೂ ಕೆಲವು ಕಾಲದವರೆಗೆ ನಡೆದುಕೊಂಡು ಬಂದರೆ, ಇದರಿಂದ ಅನೇಕರ ಮನೆ ಮಠಗಳೇ ಹೋಗಿಬಿಡಬಹುದು. ಆದರೆ ನಾನು ಹೀಗೆ ಹೇಳಿದಕ್ಕೆ ಮಾನ್ಯ ಮಂತ್ರಿವರ್ಯರು ಹೇಳಬಹುದು, ಅಂಥಾದ್ದನ್ನೆಲ್ಲಾ ನಾವು ಬೇಗ ಸರಿಪಡಿಸಬೇಕೆಂದು ತಿಳುವಳಿಕೆ ಕೊಟ್ಟಿದ್ದೇವೆ ಎಂದು. ಆದರೆ ಹೀಗೆ ಬಹಳ ದಿವಸಗಳಿಂದ ನಡೆದುಕೊಂಡು ಬರುತ್ತಿರುವ ಈ ಅಭ್ಯಾಸವನ್ನು ಅವರು ಅಷ್ಟು ಬೇಗ ಸರಿಪಡಿಸಲು ಸಾಧ್ಯವೇ ಎಂಬುದನ್ನು ಗಮನದಲ್ಲಿಟ್ಟುಕೊಂಡು ಈ ಬಗ್ಗೆ ಸರ್ಕಾರದವರು ಉಗ್ರ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂಬ ಬಗ್ಗೆ ಸರ್ಕಾರವನ್ನು ಒತ್ತಾಯಪಡಿಸುವ ಸಲುವಾಗಿ ನಾನು ಈ ಡಿಮ್ಯಾಂಡಿನ ಮೇಲೆ ಮಾತನಾಡಲು 'ಆಸೆಪಟ್ಟೆನು. ಎಷ್ಟು ಬೇಗ ಕೆಲಸ ಮುಗಿಸಿದರೂ ನಮಗಂತೂ ಹಣ ಜಾಗ್ರತೆ ಬರುವುದಿಲ್ಲ' ಎಂಬ ಭಾವನೆ. ಇಂದು ಎಲ್ಲಾ ಕಂಟ್ರಾಕ್ಟರುಗಳಲ್ಲೂ ಕಂಡುಬರುತ್ತಿರುವುದರಿಂದ ಕೆಲಸವು ಈಗ ನಿಧಾನವಾಗಲು ಇದೇ ಒಂದು ಮುಖ್ಯ ಕಾರಣವಾಗಿರುತ್ತೆ. ಇದರಿಂದ ನಮ್ಮ ಸಂಸ್ಥಾನದ ಕೆಲಸ ಕಾರ್ಯಗಳೆಲ್ಲಾ ಈಗ ಬಹಳವಾಗಿ ನಿಧಾನವಾಗಿ ನಡೆಯಲು ಅವಕಾಶವಾಗಿದೆ. ಈ ಕುಂದು ಕೊರತೆಗಳನ್ನೆಲ್ಲಾ ತಾವು ಬೇಗ ಸರಿಪಡಿಸಬೇಕೆಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಜಿ. ಶಿವಪ್ಪನವರು (ಹೊಳಲ್ಕೆರೆ).—ಸ್ವಾಮಿ, ಈ ಪಿ. ಡಬ್ಲ್ಯು. ಇಲಾಖೆಯೆಂಬುದು ಬಹಳ ಮುಖ್ಯವಾದ ಇಲಾಖೆ. ನಮ್ಮ ದೇಶದಲ್ಲಿ ಸರ್ಕಾರ ಇದೆಯೇ ಅಥವಾ ಇಲ್ಲವೇ ಎಂಬುದನ್ನು ಸಂಸ್ಥಾನದ ಜನರಿಗೆ ತೋರಿಸಲು ಹೆಚ್ಚಿನ ರೀತಿಯಲ್ಲಿ ಸೌಲಭ್ಯಗಳನ್ನು ಈ ಇಲಾಖೆಯ ಮೂಲಕ ಕಲ್ಪಿಸಿಕೊಡಬೇಕಾದದ್ದು ಅಗತ್ಯವೆಂದು ನಾನು ಭಾವಿಸುತ್ತೇನೆ. ದೇಶದಲ್ಲಿ ಸರ್ಕಾರ ಈ ಇಲಾಖೆಯ ಮೂಲಕ ನೇಷನ್ ಬಿಲ್ಡಿಂಗ್ ಆಕ್ಟಿವಿಟೀಸ್‌ಗಳನ್ನು ಹೆಚ್ಚು ಮಾಡಿದಷ್ಟೂ ದೇಶದಲ್ಲಿರತಕ್ಕ ಜನರ ಸಂಪರ್ಕ ಸರ್ಕಾರಕ್ಕೆ ಹೆಚ್ಚಾಗುತ್ತಿದೆ. ರೆವಿನ್ಯೂ ಇಲಾಖೆ ಇರುವುದು ಕಂದಾಯದ ವಸೂಲಿಯಿಂದ ಜನರಿಗೆ ಗೊತ್ತಾಗುತ್ತದೆ. ಅದೇ ರೀತಿ ಪೋಲೀಸ್ ಇಲಾಖೆಯಿರುವುದು, ಅವರು ಜನರನ್ನು ಹೊಡೆದು ಶಿಕ್ಷೆಗೆ ಗುರಿಪಡಿಸುವುದರಿಂದ ಗೊತ್ತಾಗುತ್ತದೆ. ಅದೇ ರೀತಿಯಲ್ಲಿ ಈ ಪಿ. ಡಬ್ಲ್ಯು. ಇಲಾಖೆಯಿಂದ ಸರ್ಕಾರ ಅನೇಕ ಉಪಯುಕ್ತ ಕೆಲಸಗಳನ್ನು ಮಾಡಿಸುತ್ತಿದ್ದಾರೆ. ಆದರೆ ಈ ಇಲಾಖೆಯಲ್ಲಿ ಅನೇಕ ಲೋಪದೋಷಗಳಿವೆ. ಆದರೆ ಬ್ರಿಟಿಷರ ಕಾಲದಿಂದಲೂ ಇದ್ದಂಥ ಮೆಷಿನರಿಯನ್ನೇ ಈಗಲೂ ಇಟ್ಟುಕೊಂಡು ಕೆಲಸ ಮಾಡುತ್ತಿರುವುದರಿಂದ ಈ ಲೋಪದೋಷಗಳು ಇನ್ನೂ ಇರುತ್ತವೆ. ಇವುಗಳನ್ನು ತಾವು ಕಾಲಕ್ರಮದಲ್ಲಿ ಸರಿಪಡಿಸಬಹುದು. ಈಗಾಗಲೇ ಶ್ರೀಮಾನ್ ದೇವರಾಜ ಅರಸಿನವರು ಈ ಇಲಾಖೆಯ ಬಗ್ಗೆ ಅನೇಕ ಬಹು ಮುಖ್ಯವಾದ ಲೋಪದೋಷಗಳನ್ನು ಎತ್ತಿ ತೋರಿಸಿದ್ದಾರೆ. ಆದರೆ ನಾನು ಒಂದೆರಡು ವಿಚಾರಗಳನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಇಂಜನಿಯರಿಂಗ್ ಇಲಾಖೆಯವರು ಟೆಂಡರ್ಸ್‌ನ್ನು ಕರೆದು ಕೆಲಸವನ್ನು ಕೊಡುತ್ತಾರೆ, ಆ ಮಾರ್ಗವೇನೋ ಸರಿಯಾದದ್ದೇ. ಆದರೆ ಅವರು ಮೊದಲು Lowest tender ಎಂಬುದಾಗಿ ಒಬ್ಬನ ಟೆಂಡರನ್ನು ಅಂಗೀಕಾರ ಮಾಡಿಕೊಂಡನಂತರ ಆತನು ಕೆಲಸವನ್ನು ಪೂರೈಸುವುದರೊಳಗಾಗಿ ಆ ಎಸ್ಟಿಮೇಟ್ ಮೊಬಲಗನ್ನು ಕನಿಷ್ಠಪಕ್ಷ 3-4 ಆವರ್ತಿಯಾದರೂ ಬದಲಾವಣೆ ಮಾಡಿ ಮೊದಲು ಟೆಂಡರಿನಲ್ಲಿ ಒಪ್ಪಿಕೊಂಡಿದ್ದ ಮೊಬಲಗಿಗಿಂತ ಹೆಚ್ಚಾಗಿ 15 ಪರ್ಸೆಂಟ್, 20 ಪರ್ಸೆಂಟ್ ಸೇರಿಸಿಕೊಡುವಂಥ ಒಂದು ವಾಡಿಕೆ ಸಾಧಾರಣವಾಗಿ ಜಾರಿಯಲ್ಲಿರುತ್ತೆ. ಹೀಗೆ ಮಾಡತಕ್ಕ ಸಂಪತ್ತಿಗೇಕೆ lowest tender ರೇಟು ಬೇಕೆಂದು ಕೇಳುತ್ತಾರೆ? 1952ನೇ ಇಸವಿಯಲ್ಲಿ ಒಂದು ಎಸ್ಟಿಮೇಟಿನ ವಿಚಾರ ಹೀಗೆ ಆಗಿ, ಕೊನೆಗೆ ಆತನಿಗೆ ಮೊದಲಿನ ರೇಟಿಗಿಂತ 5 ಪರ್ಸೆಂಟ್ ಜಾಸ್ತಿ ಸೇರಿಸಿ ಪೇಮೆಂಟ್ ಮಾಡಿದ ನಿದರ್ಶನವೊಂದು ನನಗೆ ಗೊತ್ತಾಗಿದೆ. ಆದರೆ ಇನ್ನೂ ಎಷ್ಟೋ ಗುಟ್ಟಿನ ಸಂಗತಿಗಳಿವೆ. ಅವುಗಳನ್ನೆಲ್ಲಾ ನಾನೀಸಭೆಯ ಮುಂದೆ ಇಡಲು ಇಚ್ಛೆಪಡುವುದಿಲ್ಲ ಆದರೆ ಹೀಗೆ ನಾನು ಹೇಳಿದ ಮಾತ್ರದಿಂದಲೇ ಈ ವಿಚಾರಗಳ ಸ್ವರೂಪ ಹೇಗಿರುತ್ತದೆಂಬುದನ್ನು ಅನೇಕ ಮಾನ್ಯ ಸದಸ್ಯರು ಅರ್ಥ ಮಾಡಿಕೊಂಡಿರಬಹುದು. ಈ ಇಲಾಖೆಯಲ್ಲಿ ಹೆಚ್ಚಿನ ಹಣ ಸಿಬ್ಬಂದಿ ವೆಚ್ಚದ ಬಗ್ಗೆ ವ್ಯಯವಾಗಿ ಹೋಗುತ್ತಿದೆ. ಒಂದೊಂದು ಜಿಲ್ಲಾ ಕಸಬೆಗಳಲ್ಲೂ ಇಬ್ಬರು ಮೂರು ಜನ ಎಗ್ಸಿಕ್ಯುಟಿವ್ ಇಂಜನಿಯರೂ, ಅಸಿಸ್ಟೆಂಟ್ ಇಂಜನಿಯರ್ಸ್‌ಗಳೂ ಇರುತ್ತಾರೆ. ಹೀಗೆ ಸಿಬ್ಬಂದಿಗಾಗಿಯೇ ಒಂದೊಂದು ಸಬ್ ಡಿವಿಜನ್ನಿಗೂ 25-30 ಸಾವಿರ ರೂಪಾಯಿಗಳು ಖರ್ಚಾಗುತ್ತಿವೆ. ಹೀಗೆ ಮಾಡತಕ್ಕದ್ದು ಸರಿಯಾದ್ದಲ್ಲವೆಂದು ನನಗೆನಿಸುತ್ತದೆ. ಈ ಎಗ್ಸಿಕ್ಯುಟಿವ್ ಇಂಜನಿಯರ್ ಮತ್ತು ಅಸಿಸ್ಟೆಂಟ್ ಇಂಜನಿಯರ್ ಇರತಕ್ಕ ಕಡೆ ಅನೇಕ ಜನ ಸೆಕ್ಷನಲ್ ಆಫೀಸರೆಂದು ಬೇರೆ ಇರುತ್ತಾರೆ. ಇವರನ್ನು ತೆಗೆದು ಹಾಕಿದರೂ ಯಾವ ತೊಂದರೆಯೂ ಇಲ್ಲದಂತೆ ಕೆಲಸ ಕಾರ್ಯಗಳು ನಡೆಯುತ್ತವೆ. ಹೀಗೆ ಜನ ಹೆಚ್ಚಿದಷ್ಟು ಕೆಲಸ ಬೇಗ ಮುಗಿಯುವುದಕ್ಕೆ ಬದಲಾಗಿ ವಿಪರೀತ ನಿಧಾನವಾಗಲು ಕಾರಣವಾಗಿರುತ್ತೆ. ಒಂದೊಂದು ಸಣ್ಣ ಸಣ್ಣ ಕೆಲಸಗಳಿಗೂ ಸಹ ಒಂದೊಂದು ಡಿವಿಜನ್ನನ್ನು ತೆರೆಯುತ್ತಿದ್ದಾರೆ. ಅದಕ್ಕೆ ಸಿಬ್ಬಂದಿ ವಗೈರೆಗೆಲ್ಲಾ ವಿಪರೀತ ಹಣವ್ಯಯವಾಗುತ್ತಿದೆ ನಮ್ಮ ಬಡ್ಜೆಟ್ಟನ್ನು ನೋಡಿದರೆ ಈ ಸಂಬಳಕ್ಕಾಗಿ ಖರ್ಚು ಆಗುವ ನಷ್ಟ ಜನೋಪಯುಕ್ತವಾದ ಕಾರ್ಯಗಳಿಗೆ ಆಗುತ್ತಿಲ್ಲವೆಂಬುದು ಕಂಡುಬರುತ್ತದೆ. ಆದರೆ ಈಗ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಬ್ಬೊಬ್ಬ

(ಶ್ರೀ ಜಿ. ಶಿವಪ್ಪನವರು.)

ಅಸಿಸ್ಟೆಂಟ್ ಇಂಜನಿಯರ್‌ಗಳು ಇದ್ದಾರೆ. ಇದು ಅನಾವಶ್ಯಕವೆಂದು ಕಾಣುತ್ತದೆ. ಎಲ್ಲಿ ಅಂಥ ಹೆಚ್ಚಿನ ಅವಶ್ಯಕತೆಯಿದೆಯೋ ಅಲ್ಲಿಗೆ ಮಾತ್ರ ಇಟ್ಟು ಬಾಕಿ ತಾಲ್ಲೂಕುಗಳಲ್ಲಿರತಕ್ಕವರನ್ನು ತೆಗೆದುಹಾಕಬಹುದು. ಆದರೆ ನಮ್ಮ ಜಿಲ್ಲೆಯ ವಿಚಾರವನ್ನೇ ತೆಗೆದುಕೊಳ್ಳೋಣ. ನಮ್ಮಲ್ಲಿರತಕ್ಕ ದೊಡ್ಡ ಕೆಲಸಗಳು ಕೆಲವು, ಸಂಗೇನಹಳ್ಳಿ ಕೆರೆ ಮತ್ತು ತುಪ್ಪದಹಳ್ಳಿ ಕೆರೆ ವಗೈರೆ. ಅಂಥ ಸ್ಥಳಕ್ಕೆ ಈ 4-6 ಅಧಿಕಾರಗಳನ್ನು ತೆಗೆದುಹಾಕಿ ತಾವು integrity ಇರತಕ್ಕಂಥವರನ್ನು ಹಾಕಬೇಕು. ಹಾಗೆ ಮಾಡದ ವಿನಾಃ ತಾವು ಕೊಡತಕ್ಕ ಹಣವೆಲ್ಲಾ ಕೇವಲ ನಿರರ್ಥಕವಾಗಿ ವೆಚ್ಚ ಮಾಡಿದಂತಾಗುತ್ತದೆ.

ಇನ್ನೊಂದು ವಿಚಾರವೇನೆಂದರೆ, ಮಂತ್ರಿಗಳಾದಾದರೂ ಜಿಲ್ಲಾಮಳೆ ಸಂಚಾರ ಬಂದಾಗ್ಗೆ ಈ ಇಲಾಖೆಯವರು ರಸ್ತೆಯ ಪಕ್ಕದಲ್ಲಿರತಕ್ಕ ಧೂಳನ್ನು ರಸ್ತೆಗೆ ಹಾಕಿ, ದುಡ್ಡನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಇದು ಎರಡು ದಿವಸ ಕೂಡ ನಿಲ್ಲುವುದಿಲ್ಲ. ಹೀಗೆ ಜನರ ಕಣ್ಣಿಗೆ ಮಣ್ಣು ಹಾಕುವುದರ ಜೊತೆಗೆ ಸರ್ಕಾರದ ಕಣ್ಣಿಗೂ ಮಣ್ಣು ಹಾಕುತ್ತಿದ್ದಾರೆ. ಇಂಥಾದ್ದನ್ನೆಲ್ಲಾ ತಾವು ಸರಿಪಡಿಸಬೇಕೆಂದು ಸಲಹೆ ಮಾಡುತ್ತೇನೆ. ಕೊನೆಯದಾಗಿ, ಅನಾವಶ್ಯಕವಾಗಿರತಕ್ಕ ಅಧಿಕ ಸಿಬ್ಬಂದಿಯನ್ನು ತೆಗೆಯಬೇಕು. ಕೆಲಸಕಾರ್ಯಗಳು ಚೆನ್ನಾಗಿ ನಡೆಯುವಂತೆ ಆಗಲು ತಕ್ಕ ಕಾರ್ಯಕ್ರಮಗಳನ್ನು ಸರ್ಕಾರದವರು ಕೂಡಲೆ ಕೈಕೊಳ್ಳುತ್ತಾರೆಂದು ನಂಬಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಕೆ. ಲಕ್ಕಪ್ಪನವರು (ಚನ್ನರಾಯಪಟ್ಟಣ).—ಶ್ರೀ ಶಿವಪ್ಪನವರು ಹೇಳಿದ ಹಾಗೆ ಇಂಜನಿಯರಿಂಗ್ ಬಹಳ ಮುಖ್ಯವಾದಂಥ ಇಲಾಖೆ. ಆದರೆ ಇತ್ತೀಚೆಗೆ ಆ ಇಲಾಖೆಯಲ್ಲಿ ಆಗುತ್ತಿರುವ ಕೆಲಸ ಕಾರ್ಯ ನೋಡಿದರೆ ಕೆಲವು ಸಂದರ್ಭಗಳಲ್ಲಿ ನಾವು ನಿಜವಾಗಿಯೂ ಬಹಳ ಸಂಕಟವನ್ನು ವ್ಯಕ್ತಪಡಿಸಬೇಕಾಗುತ್ತದೆ. ಈ ಹೊತ್ತು ಸಂಸ್ಥಾನಾಮಳೆ ರಸ್ತೆಗಳ ಸ್ಥಿತಿಗತಿ ಎಷ್ಟು ದುರವಸ್ಥೆಗಿಳಿದಿದೆ ಎಂಬುದು ಸಂಸ್ಥಾನದ ನಾನಾ ಮೂಲೆಗಳಿಂದ ಬಂದಿರುವ ಎಲ್ಲಾ ಸದಸ್ಯರಿಗೂ ಸಹ ಚೆನ್ನಾಗಿ ಗೊತ್ತಿದೆ. ಇದರ ಜೊತೆಗೆ ಕಟ್ಟಡಗಳ ವ್ಯವಸ್ಥೆಯ ವಿಚಾರದಲ್ಲಿ ಈ ಇಲಾಖೆ ಬಹಳ ಅಲಕ್ಷ್ಯ ಭಾವನೆಯಿಂದಿದೆಯೆಂದು ನಾನು ಕೆಲವು ದೃಷ್ಟಾಂತಗಳಿಂದ ಹೇಳಬೇಕಾಗಿದೆ. ಅವರಲ್ಲೂ ಬಹಳ ಮುಖ್ಯವಾಗಿ ಎಲ್ಲೆಲ್ಲಿ ವಿದ್ಯಾ ಇಲಾಖೆಯ ಪ್ರೈಮರಿ ಮತ್ತು ಮಿಡ್ಲ್ ಸ್ಕೂಲುಗಳು ಮೊದಲಾದವುಗಳ ಕಟ್ಟಡಗಳಿವೆಯೋ ಅಲ್ಲಿ ಅವುಗಳ ರಿಪೇರಿ ವಿಚಾರದಲ್ಲಿ ಈ ಇಲಾಖೆ ನಿಗಾ ತೆಗೆದುಕೊಳ್ಳುತ್ತಿಲ್ಲ ಎಂಬುದನ್ನು ಒಂದು ದೃಷ್ಟಾಂತದ ಮೂಲಕ ತಿಳಿಸಲಿಚ್ಛಿಸುತ್ತೇನೆ. ವಿದ್ಯಾ ಇಲಾಖೆ ಮಂತ್ರಿಗಳು ಆ ದೃಷ್ಟಾಂತವನ್ನು ದಯವಿಟ್ಟು ಜ್ಞಾಪಕದಲ್ಲಿಟ್ಟುಕೊಂಡು ಸರಿಪಡಿಸುವುದಕ್ಕೆ ಪ್ರಯತ್ನಪಡುತ್ತಾರೆಂದು ನಂಬಿದ್ದೇನೆ.

Mr. SPEAKER.—If it is a big list the Hon'ble Member can give it to him afterwards because the Member has only two minutes more. He can touch upon other points.

ಶ್ರೀ ಕೆ. ಲಕ್ಕಪ್ಪನವರು.—ಎರಡು ಮೂರು ಉದಾಹರಣೆಗಳನ್ನು ಮಾತ್ರ ಗಮನಕ್ಕೆ ತರುತ್ತೇನೆ. ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಎಲಿಯೂರು ಎಂಬ ಗ್ರಾಮವಿದೆ. ಅಲ್ಲಿರುವ ಮಿಡ್ಲ್‌ಸ್ಕೂಲು ಕಟ್ಟಡ ಈಗಲೋ ಆಗಲೋ ಬಿದ್ದು ಅನರ್ಥವಾಗುವ ಸ್ಥಿತಿಯಿತ್ತು. ಆಗ ಅಲ್ಲಿಗೆ ಹೋಗಿ ಕೂಡಲೆ ಹುಡುಗರನ್ನು ಬೇರೆ ಕಡೆಗೆ ಕಳುಹಿಸಿ, ಸ್ಕೂಲಿನ ಜಾಗವನ್ನು ಬದಲಾಯಿಸಿ, ಅನರ್ಥವಾಗುವುದನ್ನು ತಪ್ಪಿಸಲಾಯಿತು. ಇದಲ್ಲದೆ ನಲ್ಲೂರು ಗ್ರಾಮದಲ್ಲಿ ಒಂದು ಹೊಸದಾಗಿ ಮಿಡ್ಲ್‌ಸ್ಕೂಲು ಕಟ್ಟಡ ಕೇವಲ ಎಂಟು ವರ್ಷಗಳ ಹಿಂದೆ ಆಗಿತ್ತು. ಅದು ಈಗಲೋ ಆಗಲೋ ಬೀಳುವ ಸ್ಥಿತಿಯಲ್ಲಿದೆ. ಅದನ್ನು ನೋಡಿದರೆ, ಕಟ್ಟಡದ ವಿಚಾರದಲ್ಲಿ ನಿರ್ಲಕ್ಷ್ಯವಾಗಿದ್ದಾರೆ ಇಲಾಖೆಯವರು ಸರಿಯಾಗಿ ಗಮನ ಕೊಡುತ್ತಿಲ್ಲ ಎಂಬುದು ವೇದ್ಯವಾಗುತ್ತದೆ. ಮೊನ್ನೆ ನಡೆದ ಚುನಾವಣೆ ಕಾಲದಲ್ಲಿ ಒಂದು ಪೋಲಿಂಗ್ ಬೂತನ್ನು ಪ್ರೈಮರಿ ಶಾಲೆಯ ಕಟ್ಟಡದಲ್ಲಿ ಏರ್ಪಡಿಸಿದ್ದರು. ಅಲ್ಲಿ ಮೊಳದುದ್ದ ಗುಂಡಿಗಳಿದ್ದು ನೆಲ ದುಸ್ಥಿತಿಯಲ್ಲಿರುವುದನ್ನು ನೋಡಿ ಆಶ್ಚರ್ಯವಾಯಿತು. ಜನರು ಆ ಜಾಗವನ್ನು ಓಟುಮಾಡುವಾಗ ನೋಡಿ ನಕ್ಕರು, ಇಲಾಖೆಯವರು ನಿರ್ಲಕ್ಷ್ಯದಿಂದ ಇರುವುದನ್ನು ನೋಡಿ ಹಾಸ್ಯ ಮಾಡುತ್ತಾರೆ ಎಂದು ಅದನ್ನು ಅಧಿಕಾರಿಗಳಿಗೆ ತೋರಿಸಿದೆ. ಅಂಥದ್ದನ್ನು ನೋಡಿ ಇಲಾಖೆ ಸರಿಪಡಿಸುತ್ತಾ ಇಲ್ಲ. ಅದನ್ನು ಇಂಜನಿಯರಿಂಗ್ ಇಲಾಖೆಗೆ ತಿಳಿಸಿದರೆ ಅಂದಾಜಾಗಿ ಸಕಾಲದಲ್ಲಿ ಕೆಲಸವಾಗಲಿಲ್ಲ. ಕೊನೆಗೆ ಅಮಲ್ದಾರರನ್ನು ಹಿಡಿದು ತಾತ್ಕಾಲಿಕವಾಗಿ ಅಲ್ಲಿನ ಕೆಲಸ ಮಾಡಿಸುವುದಕ್ಕೆ ಏರ್ಪಾಡು ಮಾಡಬೇಕಾಗಿ ಬಂತು. ಇಲಾಖೆ ಈರೀತಿ ಕಟ್ಟಡಗಳ ಕಡೆ ಹೆಚ್ಚಾಗಿ ನಿಗಾ ಕೊಡುತ್ತಿಲ್ಲ. ಇದೇ ರೀತಿ ರಸ್ತೆ ವಿಚಾರದಲ್ಲೂ ಸಹ ಸಾಕಷ್ಟು ಗಮನಕೊಡುತ್ತಿಲ್ಲ. ಈ ದಿವಸ ಹಾಸನ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರಿಗೆ ಮಂತ್ರಿಗಳು ಹೋಗಿ ನೋಡಬಹುದು. ಸಿಮೆಂಟ್ ಕಾಂಕ್ರೀಟ್ ರಸ್ತೆಯಾಗಬೇಕೆಂದು ಎರಡು ವರ್ಷಗಳಿಂದ ಒಂದೇ ಸಮ ಹೇಳುತ್ತಿದ್ದರೂ ಇನ್ನೂ ಏನೂ ಮಾಡಿಲ್ಲ. ರಸ್ತೆ ಅಲ್ಲ ಬಹಳ ಕೆಟ್ಟಿದೆ. ಈ ರೀತಿಯಾಗಿ ಈ ಇಲಾಖೆ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇದರ ಕಡೆ ಸರ್ಕಾರ ಹೆಚ್ಚು ಗಮನಕೊಟ್ಟು ಸರಿಪಡಿಸುವುದಕ್ಕೆ ಮನಸ್ಸು ಮಾಡಬೇಕು.

Mr SPEAKER.—Hon'ble Minister will have to close his speech at 3 P.M. It has been already agreed upon.

ಶ್ರೀ ಕಡಿದಾಳ್ ಮಂಜಪ್ಪನವರು.—ಸ್ವಾಮಿ, ಮಾನ್ಯ ಸದಸ್ಯರನೇಕರು ನಿರಾಶಾ ಮನೋಭಾವನೆಯನ್ನು ನನ್ನ ಇಲಾಖೆಯ ವಿಚಾರದಲ್ಲಿ ವ್ಯಕ್ತಪಡಿಸಿದ್ದಾರೆ. ಪಬ್ಲಿಕ್‌ವರ್ಕ್ಸ್ ಇಲಾಖೆಯವರು ಅನೇಕ ಕೆಲಸ ಕಾರ್ಯಗಳನ್ನು ಇದುವರೆಗೆ ಮೈಸೂರು ಸಂಸ್ಥಾನದಲ್ಲಿ ಮಾಡಿದ್ದಾರೆ. ಕೃಷ್ಣರಾಜಸಾಗರ ಜಲಾಶಯ, ವಾಣಿವಿಲಾಸ ಸಾಗರ, ಮಾರ್ಕೋನಹಳ್ಳಿ ಜಲಾಶಯ ವಗೈರೆ ಅನೇಕ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ಅವುಗಳಿಂದ ಎಷ್ಟು ಪ್ರಯೋಜನ ಈ ಸಂಸ್ಥಾನಕ್ಕೆ ಲಭಿಸುತ್ತಿದೆ ಎಂಬುದನ್ನು ಮಾನ್ಯ ಸದಸ್ಯರು ಗಮನಿಸಬೇಕು. ಮೊದಲೇ ಹೇಳಿದ ಹಾಗೆ ಅಲ್ಲಲ್ಲಿ ನ್ಯೂನತೆಗಳಿವೆ, ಇಲ್ಲ ಎಂದು ಹೇಳುವುದಿಲ್ಲ. ಶ್ರೀ ಕೆ. ಲಕ್ಕಪ್ಪನವರು ಮತ್ತು ಶ್ರೀ ಜಿ. ಶಿವಪ್ಪನವರು ಸಿಬ್ಬಂದಿ ಬಗ್ಗೆ ವಿಪರೀತವಾಗಿ ಖರ್ಚಾಗುತ್ತಿದೆಯೆಂದು ಹೇಳಿದರು. ಆಗಲೇ ಅರಿಕೆ ಮಾಡಿಕೊಂಡ ಹಾಗೆ, ನಮ್ಮ ಸಂಸ್ಥಾನದ ಸಿಬ್ಬಂದಿ ಖರ್ಚು ಇಡೀ ಹಿಂದೂಸ್ಥಾನದಲ್ಲೇ ಕೇವಲ ಕಡಮೆ. ನಮ್ಮ

ಸಂಸ್ಥಾನದ ಸಿಬ್ಬಂದಿ ಖರ್ಚು ಶೇಕಡ 8·7. ನೆರೆ ಪ್ರಾಂತವಾದ ಮದ್ರಾಸಿನಲ್ಲಿ ಶೇಕಡ 19ರಿಂದ 27ರ ವರೆಗೆ ಸಿಬ್ಬಂದಿಗಾಗಿ ಖರ್ಚಾಗುತ್ತದೆ; ಬೊಂಬಾಯಿ ನಲ್ಲಿ ಶೇಕಡ 15ರಿಂದ 20ರವರೆಗೆ ಖರ್ಚಿದೆ. ಆಮೇಲೆ ರಸ್ತೆ ಕೆಟ್ಟುಹೋಗಿದೆಯೆಂದು ಹೇಳಿ, ಮಂಗಳೂರು ರಸ್ತೆಯೊಡನೆ ಹೋಲಿಸಿ ವಾದಮಾಡಿದರು. ಆದರೆ ಮದ್ರಾಸು ಸರ್ಕಾರದವರು ರಸ್ತೆಗಾಗಿ ಗ್ರಾಂಟು ಕೊಡುವುದನ್ನು ತಿಳಿದಿದ್ದರೆ ಹಾಗೆ ವಾದ ಮಾಡುತ್ತಿರ ಲಿಲ್ಲವೆಂದು ಭಾವಿಸುತ್ತೇನೆ. ಅಲ್ಲಿ ಒಂದು ಮೈಲಿಗೆ ಮೂರು ಸಾವಿರ ರೂಪಾಯಿಗಳ ಗ್ರಾಂಟು ಕೊಡು ತ್ತಾರೆ.

ಜನಾಬ್ ಜೆ. ಮಹಮದ್ ಇಮಾಂರವರು.—ನೀವೂ ಕೊಡಿ.

ಶ್ರೀ ಕಡಿದಾಳ್ ಮಂಜಪ್ಪನವರು.—ಶ್ರೀ ಎ. ಭೀಮಪ್ಪನಾಯಕರಿಗೆ ಒಂದು ಗಜ ಬಟ್ಟೆ ತೆಗೆದು ಕೊಂಡು ಕೊಟ್ಟು ಹೋಲಿಸಿದರೆ ಏನಾಗುತ್ತದೆಯೋ ಅದೇ ರೀತಿ....................

ಜನಾಬ್ ಜೆ. ಮಹಮದ್ ಇಮಾಂರವರು.—ಮಾನ್ಯ ಮಂತ್ರಿಗಳಿಗೆ ಅರ್ಧಗಜ ಸಾಕು.

ಶ್ರೀ ಕಡಿದಾಳ್ ಮಂಜಪ್ಪನವರು.—ನಾವು ಕೊಡು ವುದು ಮೊದಲನೆಯ ದರ್ಜೆ ರಸ್ತೆಗೆ 750ರಿಂದ ಒಂದು ಸಾವಿರ ರೂಪಾಯಿಗಳು, ಎರಡನೆಯ ದರ್ಜೆ ರಸ್ತೆಗೆ 500 ರೂಪಾಯಿಗಳು. ಇಷ್ಟು ಕೊಟ್ಟು ರಸ್ತೆ ಚೆನ್ನಾ ಗಿರಬೇಕೆಂದು ಹೇಳಿದರೆ ಮಾನ್ಯ ಸದಸ್ಯರಿಗೆ ಎಷ್ಟು ವಿಚಕ್ಷಣೆಯಿರುತ್ತದೆಯೆಂಬುದನ್ನು ಯೋಚನೆ ಮಾಡ ಬಹುದು.

ಆಮೇಲೆ ವಾಟರ್‌ಬೌಂಡ್ ಮಕೇಡಂ ರಸ್ತೆಗಳಿ ರುವುದು ಈಗಿನ ವಾಹನಗಳಿಗೆ ಅನುಕೂಲವಾಗಿಲ್ಲ. ಲಾರಿ, ಮಿಲಿಟರಿ ಟ್ರಕ್ಸ್, ಬಸ್ಸು ಇವುಗಳ ಸಂಚಾರಕ್ಕೆ ಈ ರಸ್ತೆಗಳು ತಡೆಯುವುದಿಲ್ಲ. ಕಾಲಕ್ರಮೇಣ ಎಲ್ಲಾ ರಸ್ತೆಗಳನ್ನೂ ಸಿಮೆಂಟ್ ಕಾಂಕ್ರೀಟಿನಿಂದ ನಿರ್ಮಾಣ ಮಾಡಬೇಕು, ಕೆಲವನ್ನು ಆಸ್ಫಾಲ್ಟಿನಿಂದ ಮಾಡಬೇ ಕೆಂದ ಪ್ರಮೇಯ ಬಂದಿದೆ. ಆಗಲೇ ಅರಿಕೆ ಮಾಡಿದ ಹಾಗೆ, ಈ ವಿಚಾರದಲ್ಲಿ ಒಂದು ಸೂಕ್ತವಾದ ಪ್ರೋಗ್ರಾಂ ಹಾಕಿ ಅದರ ಪ್ರಕಾರ ಮುಖ್ಯವಾದ ರಸ್ತೆ ಗಳನ್ನು ಸಿಮೆಂಟ್ ಕಾಂಕ್ರೀಟಿನಿಂದ ಮತ್ತು ಆಸ್ಫಾಲ್ಟಿ ನಿಂದ ನಿರ್ಮಾಣ ಮಾಡುವುದಕ್ಕೆ ನಾವು ಪ್ರಯತ್ನ ಪಡುತ್ತೇವೆ.

ಅನಂತರ ಅಂದಾಜು ತಯಾರಾಗುವುದರಲ್ಲಿ, ಕೆಲಸ ನಡೆಯುವುದರಲ್ಲಿ ಬಹಳ ವಿಳಂಬವಾಗುತ್ತದೆಯೆಂದು ಒಬ್ಬಿಬ್ಬರು ಮಾನ್ಯ ಸದಸ್ಯರು ತಿಳಿಸಿದರು. ಅದು ನಿಜ, ಕೆಲವು ಸಂದರ್ಭಗಳಲ್ಲಿ ಆರೀತಿ ಆಗುತ್ತಿದೆ. ಆಗಲೇ ಹೇಳಿದ ಹಾಗೆ ಅಂದಾಜನ್ನು ಷೆಡ್ಯೂಲ್ ದರ ಗಳಿಗನುಗುಣವಾಗಿ ಮೊದಲು ತಯಾರಿಸುತ್ತಾರೆ. ಅದಾದನಂತರ ಕೆಲವು ಸಂದರ್ಭಗಳಲ್ಲಿ ಬೇರೆ ಇಲಾಖೆ ಯವರಿಂದ ಕೌಂಟರ್‌ಸಿಗ್ನೇಚರ್ ಪಡೆಯಬೇಕಾದ ಆವಶ್ಯಕತೆ ಬರುತ್ತದೆ. ಇನ್ನು ಕೆಲವು ಸಂದರ್ಭಗಳಲ್ಲಿ ಇರಿಗೇಷನ್ ಆಕ್ಟ್ ಪ್ರಕಾರ ರೆವೆನ್ಯೂ ಇಲಾಖೆಯವರು ನೋಡಬೇಕಾದ ಪ್ರಮೇಯ ಬರುತ್ತದೆ. ಇದೆಲ್ಲಾ ಶಾಸ್ತ್ರವಾದ ಮೇಲೆ ಟೆಂಡರು ಕರೆಯಬೇಕು. ಮೊದಲು ತಯಾರಿಸಿರುವ ಅಂದಾಜು ಟೆಂಡರು ದರಕ್ಕೆ ಹೊಂದುವುದಿಲ್ಲ. ಈ ಕಾರಣದಿಂದ ಅಂದಾಜು ರಿವೈಸ್ ಮಾಡಬೇಕಾಗುತ್ತದೆ. ಅಲ್ಲದೆ ಕೆಲವು ಸಂದರ್ಭಗಳಲ್ಲಿ ಅನಿರೀಕ್ಷಿತವಾಗಿ ಯೋಜನೆಗೆ ಸಂಬಂಧಪಟ್ಟ ಕೆಲವು ಸಣ್ಣಪುಟ್ಟ ಹೊಸ ಕೆಲಸ ಕಾರ್ಯಗಳನ್ನು ನಡೆಸ ಬೇಕಾಗುತ್ತದೆ. ಅವನ್ನು ಮೊದಲು ಮಾಡಿದ ಅಂದಾ ಜಿನಲ್ಲಿ ಸೇರಿಸಿರುವುದಿಲ್ಲ. ಹೊಸದಾಗಿ ಬೇರೆ ಕೆಲಸ ಸೇರಿಸುವಾಗ ಅಂದಾಜನ್ನು ಬದಲಾಯಿಸಬೇಕಾಗುವ ಪ್ರಮೇಯ ಬರುತ್ತದೆ. ಇವುಗಳೆಲ್ಲಾ ಶ್ರೀ ಶ್ರೀನಿವಾ ಸಯ್ಯಂಗಾರ್‌ರವರಿಗೆ ಚೆನ್ನಾಗಿ ಗೊತ್ತಿರುವ ಅಂಶ ಗಳೇ ಆಗಿವೆ. ಇದೂ ಅಲ್ಲದೆ ಇತ್ತೀಚೆಗೆ ಸುಮಾರು ಹತ್ತು ವರ್ಷಗಳಿಂದ ಸಾಮಾನುಗಳ ಬೆಲೆ ದಿನೇ ದಿನೇ ಏರುತ್ತಿದೆ. ಅದೇ ರೀತಿಯಲ್ಲಿ ಕೂಲಿ ದರ ಕೂಡ ದಿನೇ ದಿನೇ ಏರುತ್ತಿದೆ. ಒಂದು ವರ್ಷದ ಹಿಂದೆ ತಯಾರಾದ ಅಂದಾಜು ನಂತರ ಸರಿಹೋಗುವುದಿಲ್ಲ. ಕೆಲವು ಸಂದ ರ್ಭಗಳಲ್ಲಿ ಆವಶ್ಯಕವಾದ ಸಿಮೆಂಟು, ಕಬ್ಬಿಣ ಮುಂತಾ ಪದಾರ್ಥಗಳು ಸಿಕ್ಕುವುದಿಲ್ಲ. ಈ ಕಾರಣದಿಂದ ಕೂಡ ಕೆಲಸ ಕಾರ್ಯಗಳು ನಡೆಯುವುದು ತಡವಾಗುತ್ತದೆ. ಮಲೆನಾಡಿನಲ್ಲಿ ಕೂಲಿಗಳ ಅಭಾವದಿಂದ ಮತ್ತು ಕಂಟ್ರಾಕ್ಟರುಗಳ ಅಭಾವದಿಂದ, ಕೆಲಸಕಾರ್ಯ ಜಾಸ್ತಿ ಯಾಗಿ ಮಾಡಬೇಕೆಂಬ ಅಪೇಕ್ಷೆಯಿದ್ದರೂ, ಮಾಡುವು ದಕ್ಕೆ ಅವಕಾಶವಿರುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಅಧಿಕಾರಿಗಳ ಲೋಪದೋಷಗಳಿಂದ ನಿಧಾನವಾಗಿ ರುವ ನಿದರ್ಶನಗಳು ಕೂಡ ಸರ್ಕಾರದ ಗಮನಕ್ಕೆ ಬಂದಿದೆ.

Sri S. SRINIVASA IYENGAR.—Larger proportions.

Sri Kadidal MANJAPPA.—Not in larger proportions. ಅಂಥ ಸಂದರ್ಭಗಳಲ್ಲಿ ಸೂಕ್ತವಾದ ರೀತಿಯಲ್ಲಿ ನಾವು ಗಣನೆಗೆ ತೆಗೆದುಕೊಳ್ಳು ತ್ತೇವೆ ಎಂದು ಭರವಸೆ ಕೊಡುತ್ತೇನೆ.

ONE HON'BLE MEMBER.—Red tapism....................

Mr. SPEAKER.—It is too late. That has already been answered.

ಶ್ರೀ ಕಡಿದಾಳ್ ಮಂಜಪ್ಪನವರು.—ರೆಡ್‌ಟೇಪಿಸಂ ಕಡಮೆಮಾಡುವುದಕ್ಕೆ ಸೂಕ್ತವಾದ ಎಲ್ಲಾ ಕಾರ್ಯ ಕ್ರಮ ಕೈಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೇವೆ ಎಂದು ಒಂದು ಮಾತಿನಲ್ಲಿ ಹೇಳುತ್ತೇನೆ.

3 P. M.

Mr. SPEAKER.—The question is:

"That a sum not exceeding Rs. 1,64,06,000 be granted to the Government to complete the sum necessary to defray the charges which will come in course of payment during the year ending 31st day of March 1953, in respect of 'Civil Works.'"

The motion was adopted.

———

Mr. SPEAKER.—At 3-30 P.M. we will take up Demand No. 31 "54-A. Territorial and Political Pensions" and then Demand No. 30 "54. Famine Relief." Cut motion No. 35 stands in the name of Sri Mulka Govinda Reddy and Sri Gopala Gowda. They will move it after lunch.

Janab J. MOHAMED IMAM.—I do not know if the Chief Minister will be here after lunch. I want to ascertain if it is possible to have a morning session tomorrow because that will be convenient to such of the Members as desire to avail themselves of Saturday and Sunday. Secondly, I find that no day has been fixed for the introduction of the Finance Bill. I think it necessarily takes a long time and it is an important occasion when we have to offer our views. Last time one full day was fixed for the Finance Bill. But I find from the programme that no day has been allotted for the Finance Bill. We want one full day for it.

Mr. SPEAKER.—What does the Leader of the House say regarding the morning session tomorrow?

Sri K. HANUMANTHAIYA (Leader of the House).—If it is acceptable to the House I have no objection.

Hon'ble MEMBERS.—Yes.

Sri K. HANUMANTHAIYA.—I feel the House is in general agreement with the suggestion made. So we may accept it.

Mr. SPEAKER.—We will meet at 8·30 A.M. tomorrow.

Sri K. HANUMANTHAIYA.—Regarding the other suggestion, it is not the Finance Bill but it is the Appropriation Bill. We will consider it on the 15th.

An Hon'ble MEMBER.—There is election to the House Committee between 3 P.M. and 5 P.M. tomorrow.

Mr. SPEAKER.—He is bringing another fact into notice. Between 3 P.M. and 5 P.M. tomorrow there is election to the House Committee. If the House has no objection, I will change the timings.

Hon'ble MEMBERS.—No objection.

Mr. SPEAKER.—Between 9 A.M. and 11 A.M. tomorrow election to the House Committee will take place.

Janab J. MOHAMED IMAM.—May I draw your attention to the definition of "Finance Bill"?

> "Finance Bill" means, the Bill ordinarily introduced in each year to give effect to the financial proposals of the Government for the next following financial year and includes a Bill to give effect to supplementary financial proposals for any period."

I think it is quite obligatory on the part of Government.

Mr. SPEAKER.—That is true. But there is no Finance Bill this year; it is only the Appropriation Bill.

The House will now adjourn for lunch and meet again at 3–30 P.M.

The Assembly adjourned for lunch a Five Minutes past Three of the Clock and re-assembled at Thirty-five Minutes past Three of the Clock.

[MR. SPEAKER *in the Chair.*]

Demand No. 31—Political Pensions

54-A TERRITORIAL AND POLITICAL PENSIONS

Mr. SPEAKER.—Motion moved:

> "That a sum not exceeding 1,34,500 be granted to the Government to complete the sum necessary to defray the charges which will come in course of payment during the year ending 31st day of March 1953, in respect of territorial and Political Pensions."

Abolition of all types of hereditary privileges.

Sri S. GOPALA GOWDA (Sagar—Hosanagar).—

> "I move that the demand under the head 54-A. Territorial and Political Pensons for Rs. 1,34,500 be reduced to Re. 1 (Refusal of Supplies) (to raise a discussion on the imperative need for abolishing all types of hereditary privileges)."

ಈ ಖೋತಾ ನಿರ್ಣಯವನ್ನು ನಾನು ಸಭೆಯ ಮುಂದೆ ಇಡುತ್ತಾ ಈ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ನಾವು ಈಗ...........

Mr. SPEAKER.—The mover is given only five minutes.

Sri S. GOPALA GOWDA.—Yes.

ನಾವು ಈಗ ಪ್ರಜಾಪ್ರಭುತ್ವದ ಯುಗಕ್ಕೆ ದಾಟಿ ಬಂದಿದ್ದೇವೆ. ಹಿಂದೆ ಒಮ್ಮೆ ಮಾನ್ಯ ಪ್ರಧಾನ ಸಚಿವರು ಹೇಳಿದಹಾಗೆ, ಅನೇಕ ವೇಳೆ ನಾವು ಯುಗಗಳನ್ನು ದಾಟಿದ್ದರೂ ಕೂಡ ನಮ್ಮ ಗಮನದಲ್ಲಿ ಅವು ಇರುವುದಿಲ್ಲ. ಈ ಒಂದು ಸಂದರ್ಭದಲ್ಲೂ ಕೂಡ ನಾನು ಅದನ್ನೇ ಹೇಳಬೇಕಾಗಿದೆ. ಇಲ್ಲ ವಂಶಪಾರಂಪರ್ಯವಾಗಿ ಒಂದು ಐತಿಹಾಸಿಕ ಕಾರಣಕ್ಕಾಗಿ ನಾವು ಕೆಲವು ವಂಶಗಳಿಗೆ, ವ್ಯಕ್ತಿಗಳಿಗೆ ವರ್ಷೇವರ್ಷೇ ಕೆಲವು ಹಣವನ್ನು ಪೆನ್ಷನ್ ರೂಪದಲ್ಲಿ ಮತ್ತು ಅಲೋಯನ್ಸ್ ರೂಪದಲ್ಲಿ ಸಲ್ಲಿಸುತ್ತೇವೆ. ನನಗಾದರೂ ಆ ರೀತಿ ಪೆನ್ಷನ್ ಮತ್ತು ಅಲೋಯನ್ಸ್ ಪಡೆಯುತಕ್ಕ ವ್ಯಕ್ತಿಗಳ ಅಥವಾ ಮನೆತನಗಳ ಬಗ್ಗೆ ವೈಯಕ್ತಿಕವಾದ ಯಾವ ಒಂದು ವೈಮನಸ್ಯವೂ ಕೂಡ ಇರುವುದಿಲ್ಲವಾದರೂ ಈ ಪದ್ಧತಿ ಏನು ನಡೆದುಕೊಂಡು ಬರುತ್ತಾ ಇದೆ. ಇದನ್ನು ನಾವು ದೇಶದ ಆದಾಯದ ಹಿತದೃಷ್ಟಿಯಿಂದ, ಪ್ರಜಾಪ್ರಭುತ್ವದ ಮರ್ಯಾದೆ ಮತ್ತು ಗೌರವದ ದೃಷ್ಟಿಯಿಂದ, ಮತ್ತು ಈ ಒಂದು ಅಲೋಯನ್ಸ್ ಪೆನ್ಷನ್ ಪಡೆಯುತಕ್ಕ ವ್ಯಕ್ತಿಗಳ ಹಿತದೃಷ್ಟಿಯಿಂದಲೂ ಕೂಡ ನಿಲ್ಲಿಸತಕ್ಕುದು ಅತ್ಯಗತ್ಯವಾಗಿದೆ. ಇದು ಒಂದು ಚಾರಿತ್ರಿಕ ಕಾರಣಕ್ಕಾಗಿ ಸಲ್ಲಿಸತಕ್ಕ ಸಂಭಾವನೆ. ಇದರ ಮೇಲೆ ಅಂಥಾ ವ್ಯಕ್ತಿಗಳು ಜೀವಿಸಿರಲು ಸಾಧ್ಯವಾಗುವುದಿಲ್ಲ, ಎಂದರೆ ಇದನ್ನೇ ನೆಚ್ಚಿಕೊಂಡು ಅವರ ಜೀವನವನ್ನು ನಡೆಸಿಕೊಂಡು ಹೋಗಲಾರರು.

ಈ ರೀತಿಯಾಗಿ ಒಂದು ವಂಶಪಾರಂಪರ್ಯದ ಹಕ್ಕಂಬಾದೇನಿದೆಯೋ ಅದು ನೇರವಾಗಿ ಪ್ರಜಾಪ್ರಭುತ್ವ ತತ್ವಕ್ಕೆ ವಿರೋಧವನ್ನು ವ್ಯಕ್ತಪಡಿಸುತ್ತದೆ. ಆದ್ದರಿಂದ ನಾವು ಇಂಥ ಪೆನ್ಷನ್ ಮತ್ತು ಅಲೋಯನ್ಸ್‌ಗಳನ್ನು ತೊಡೆದುಹಾಕುವುದರಿಂದ ಪ್ರಜಾಪ್ರಭುತ್ವವನ್ನು ಅದರ ಪೂರ್ಣ ರೀತಿಯಲ್ಲಿ ಕಾರ್ಯಗತ ಮಾಡಿದಂತಾಗುತ್ತದೆ ಮತ್ತು ಆಚರಣೆಗೆ ತಂದಂತಾಗುತ್ತದೆ. ಅಲ್ಲದೆ ಆ ವ್ಯಕ್ತಿಗಳು ಪ್ರಜಾಪ್ರಭುತ್ವದ ಮರ್ಯಾದೆಗನುಸಾರವಾಗಿ ನಡೆಯುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಂತಾಗುತ್ತದೆಂದು ಹೇಳುತ್ತೇನೆ. ಈ ಬಾಬಿಗಾಗಿ 2 ಲಕ್ಷ 25 ಸಾವಿರ ರೂಪಾಯಿಗಳನ್ನು ಹಾಕಿಕೊಂಡಿದ್ದು 1 ಲಕ್ಷ 34 ಸಾವಿರ (ಚಿಲ್ಲರೆ) ರೂಪಾಯಿಗಳ ಡಿಮ್ಯಾಂಡ್ ನಮ್ಮ ಮುಂದಿಟ್ಟಿರುವುದನ್ನು ಖೋತಾ ಮಾಡಬೇಕೆಂದು ಹೇಳಿ, ಈ ನನ್ನ ಖೋತಾ ನಿರ್ಣಯಕ್ಕೆ ಸಭೆಯವರು ಬೆಂಬಲಕೊಡಬೇಕೆಂದು ಕೇಳುತ್ತೇನೆ.

Mr. SPEAKER.—Cut motion moved:

"That the demand be reduced to Re. 1"

Sri K. HANUMANTHAIYA (Chief Minister).—Sir, it is true that we are spending considerable sums under the Head of Territorial and Political Pensions. We are giving about Rs. 40,000 as allowances to families of Sirdars and Officers of late Hyder Ali Khan and Tippu Sultan's Court. Again, an allowance, for the maintenance of tombs of those past dignitaries, of about Rs. 13,000 is given. For Pallegars, we are paying Rs. 40,000 and Sarjapur Stipendiaries Rs. 1,500 and Mutfarkhat pensions Rs. 1,000. Apart from this, we are paying to each of the sisters of the Maharaja, His Highness the Rajpramukh, Rs. 40,000. Then, the children of Rajkumar Desaraj Urs—one is paid Rs. 12,000, another is paid Rs. 8,000 and another is paid Rs. 5,000. Rs. 2,25,000 is being paid annually under this Head.

Sir, I have made it clear that we have to work this Constitution in its true spirit. The Preamble of the Constitution, Sir, lays down that the intention of the Constitution is "to secure to all its citizens : Justice, social, economic and political......Equality of status and of opportunity; and to promote among them all Fraternity..." etc. Also in the Directive Principles of the Consttiution, Article 38 says:

> "The State shall strive to promote the welfare of the people by securing and protecting as effectively as it may a social order in which justice, social, economic and political shall inform all the institutions of the national life."

These provisions of the Constitution, Sir, make it abundantly clear that the payment of these pensions are not in consonance with the Constitution. That, I have to straightaway admit. Then, Sir, there is always a hiatus between logic and fact in life. Though we have adopted this Constitution and we are working that Constitution, we have not yet brought all its principles into practice. I am not admitting any want of will when I say, we must hasten slowly. I am myself envisaging a day when we should have the satisfaction of having brought into actual practice all the principles enunciated in the Constitution, whether it is in the Preamble or in the Directive Principles of State Policy or in any other Article of the Constitution.

---

*Asterisk indicates non-revision of speech by the Member secured.

(SRI K. HANUMANTHAIYA).

The House is aware, Sir, that very many people still live in the past so far as their mental outlook is concerned though physically they may be said to live in the present. My anxiety is not to rub any section of the people on the wrong side. My policy is to persuade people to see the reasonableness of the Constitutional provisions. It is with that view, Sir, the other day I made a statement on the floor of this House that I am having talks with the concerned personages to enable me to take a decision with harmony and in friendship. Personally, I see no reason whatever why we should pay Rs. 40,000 to each of the sisters of His Highness the Maharaja, because they are married to Princes who are themselves getting considerable sums in the shape of Privy Purse. When we want political and economic equality to prevail in this country, it appears to me that to perpetuate this inequality would be doing violence to the spirit of the Constitution; not only to the spirit of the Constitution but to the definite provisions of the Constitution. Therefore I request this House to give me some time to move in the matter so as to bring agreement. It is easy for us to simply vote down this Demand. It is in our power. Nobody can come in the way. But when we are strong, when the Constitution has made us sovereign, let us conduct ourselves with that dignity which power casts on our shoulders. Let us move in a manner be fitting the sovereign dignity that the House to-day enjoys.

I hope, Sir, that with the goodwill and co-operation of this House, we may be able to do things along the lines I have suggested. I have to mention one more fact. The Leader of the country, Pandit Jawaharlal Nehru, has said that he is not in favour of these hereditary things being continued. I am not flattering myself or this House when I say that all of us are informed by the same spirit. Merely because a person is born in a particular family, he should not have the advantage of money as well as status. It is against this psychology that the Constitution has made provisions in the Preamble and in the Directive Principles of State Policy. I am sure, Sir, those people who think this House is revolutionary, those people who think I am doing things rather in a revolutionary manner, will see I am not revolutionary at all. I am merely a humble and sincere servant of the Constitution. I hope those people who are upset by some of the measures that we have taken in keeping with the spirit of the Constitution will see reason. It is with this view that I beg this House to give me some time so that I may do their behest.

Sri Mulka GOVINDA REDDY.—I seek the leave of the House to withdraw my cut motion.

The cut motion was, by leave, withdrawn.

Mr. SPEAKER.—There is no other cut motion under this head. The question is :

"That a sum not exceeding Rs. 1,34,500 be granted to the Government to complete the sum necessary to defray the charges which will come in course of payment during the year ending 31st day of March 1953, in respect of 'Territorial and Political Pensions'."

The motion was adopted.

Demand No. 30—Famine Relief

54—Famine Relief.

Mr. SPEAKER.—Motion moved.

"That a sum not exceeding Rs. 16,00,000 be granted to the Government to complete sum necessary to defray the charges which will come in course of payment during the year ending 31st day of March 1953, in respect of Famine Relief."

Providing Adequate Relief in the Famine-stricken areas.

Sri Mulka GOVINDA REDDY (Chitaldrug).—Mr. Speaker, I move the following cut motion :

> "That the demand under the head "54. Famine Relief" for Rs. 16,00,000 be reduced to Re. 1, (Refusal of supplies) (to raise a debate on the failure of the Government in not rushing adequate relief to the famine-stricken areas of Kolar, Tumkur and Chitaldrug Districts.)"

ಸ್ವಾಮಿ, ಈ ಖೋತಾ ನಿರ್ಣಯವನ್ನು ಸಭೆಯ ಮುಂದಿಡುತ್ತಾ ನಾನು ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಹಿಂದೆ 1946ರಲ್ಲಿ ಚಿತ್ರದುರ್ಗದಲ್ಲಿ ಕ್ಷಾಮದಿಂದ ಜನ ಬಹಳ ನೊಂದಿದ್ದಾರೆ, ಕಷ್ಟಪಟ್ಟಿದ್ದಾರೆ. ಈಗ ಈ ಕ್ಷಾಮ ಚಿತ್ರದುರ್ಗ, ಕೋಲಾರ, ತುಮಕೂರು ಮತ್ತು ಇನ್ನೂ ಕೆಲವು ಸ್ಥಳಗಳಲ್ಲಿ ಆವರಿಸಿಕೊಂಡಿದೆ. ಈ ಅಧಿವೇಶನ ಪ್ರಾರಂಭವಾಗುವುದಕ್ಕಿಂತ ಮುಂಚೆ ಯಾವ ಪರಿಸ್ಥಿತಿಯಿತ್ತು ಈಗ ಯಾವ ಪರಿಸ್ಥಿತಿಯಿದೆ ಎಂದು ನೋಡಿದರೆ, ಕ್ಷಾಮದ ಕಷ್ಟ ದಿನೇದಿನೇ ಹೆಚ್ಚು ಹೆಚ್ಚು ಪ್ರದೇಶಗಳಿಗೆ ಹರಡುತ್ತಿದೆ. ಪ್ರತಿ ದಿನವೂ ಅಲ್ಲಿಂದ ನನಗೆ ಕಾಗದಗಳು ಬರುತ್ತಿವೆ. ಚಿತ್ರದುರ್ಗ ಜಿಲ್ಲೆಯಲ್ಲಿಯೂ ಕೂಡ, ಕೋಲಾರದಲ್ಲಿ ಎಷ್ಟು ಅಭಾವವಿದೆಯೋ ಅಷ್ಟು ಇಲ್ಲದಿದ್ದರೂ ಆಹಾರದ ಬೆಲೆ ಹೆಚ್ಚಾಗುತ್ತಿದೆ. ಅಲ್ಲಿ ಹುಲ್ಲಿನ ತೊಂದರೆಯೂ ಬಹಳ ಹೆಚ್ಚಾಗಿದೆ. ದೊಡ್ಡ ದೊಡ್ಡ ರೈತರಿಗೂ ಹುಲ್ಲಿನ ಅಭಾವವುಂಟಾಗಿ ದನಗಳು ಸಾಯುತ್ತಿಲ್ಲದಿದ್ದರೂ ಆಹಾರ ವಿಲ್ಲದೆ ಕಷ್ಟಪಡುತ್ತಿವೆ. ಅಲ್ಲಿನ ಜನಕ್ಕೆ ಈ ಕಷ್ಟ ಪರಿಸ್ಥಿತಿ ಬಂದಿದೆ. ಸರ್ಕಾರದವರು ಅಲ್ಲಿಗೆ ಹೆಚ್ಚು ಹುಲ್ಲಿನ ಸರಬರಾಯಿ ಮಾಡುತ್ತಿಲ್ಲವೆಂದೂ ತೊಂದರೆ ಪಡುತ್ತಿರುವುದಾಗಿಯೂ ನನಗೆ ಕಾಗದಗಳು ಬರುತ್ತಿವೆ. ಕೋಲಾರದಲ್ಲಿಯೂ ಪರಿಸ್ಥಿತಿ ಬಹಳ ಹೆಚ್ಚಾಗಿದೆ. ಕೋಲಾರ ಜಿಲ್ಲೆಗೆ ಸರ್ಕಾರದವರು ಎಷ್ಟು ಹಣ ಕೊಟ್ಟಿದ್ದರೋ ಆ ಹಣವೆಲ್ಲಾ ಖರ್ಚಾಗಿದೆ. ಕೆಲವು ಕಡೆ ಕ್ಷಾಮ ನಿವಾರಣೆ ಕೆಲಸಗಳನ್ನು, ಎಂದರೆ ರಿಲೀಫ್ ಕಾಮಗಾರಿಗಳನ್ನು ನಿಲ್ಲಿಸಿದ್ದಾರೆಂದು ಗೊತ್ತಾಗಿದೆ. ಬಾಗೇಪಲ್ಲಿಯಿಂದ ಮೂರು ನಾಲ್ಕು ಜನರು ಬಂದಿದ್ದರೂ, ಆಹಾರ ಅಭಾವದಿಂದ ಕೆಲವು ಜನ ಸತ್ತಿದ್ದಾರೆಂದು ಅವರು ಹೇಳಿದರು. ಇದರ ನಿಜತ್ವವನ್ನು ಸರ್ಕಾರದವರು ವಿಚಾರಿಸಬೇಕು. ಅವರು ಹೇಳಿದರು ಆದ್ದರಿಂದ ಅದು ನಿಜ ಎಂದು ತಮ್ಮ ಮುಂದಿಡುತ್ತಿಲ್ಲ. ಈ ಪರಿಸ್ಥಿತಿ ಬಂದಿದೆಯೆಂದು ಅವರು ಹೇಳಿದರು, ಇದನ್ನು ಪರಿಶೀಲಿಸಬೇಕು. ಇದೇ ರೀತಿ ತುಮಕೂರು ಜಿಲ್ಲೆಯಲ್ಲಿಯೂ ಕೂಡ ಅನೇಕ ತಾಲ್ಲೂಕುಗಳಲ್ಲಿ ಕ್ಷಾಮ ಜಾಸ್ತಿ ಬಂದು ಆಹಾರ ಮತ್ತು ಹುಲ್ಲಿನ ಅಭಾವ ಜಾಸ್ತಿಯಾಗುತ್ತಿದೆ. ಸತ್ತವರ ಸಂಖ್ಯೆ ಜಾಸ್ತಿಯಾಗದೆ ಇದ್ದರೂಕೂಡ ಪರಿಸ್ಥಿತಿ nearing starvation ಗೆ ಬಂದಿದೆ. ಈಗ ಪಕ್ಕದ ಮದ್ರಾಸ್ ಸಂಸ್ಥಾನಕ್ಕೆ ಸೇರಿದ ರಾಯಲುಸೀಮೆಯಲ್ಲಿ ಕ್ಷಾಮವಿದೆ. ಅಲ್ಲಿಗೆ ಇಂಡಿಯಾ ಸರ್ಕಾರದವರೂ ಕೂಡ ಆಹಾರ ಮತ್ತು ಇತರ ಸಹಾಯ ಸಲಕರಣೆಗಳನ್ನು ಒದಗಿಸುತ್ತಿದ್ದಾರೆ. ಹೀಗಿರುವಾಗ ಮೈಸೂರು ಸಂಸ್ಥಾನದ ವಿಷಯದಲ್ಲಿ ಏಕೆ ಈ ರೀತಿಯ ಮನೋಭಾವ ತೋರಿಸುತ್ತಾರೋ ಆಶ್ಚರ್ಯವಾಗುತ್ತದೆ. ನಮಗೆ ಅವರು ಆಹಾರ ಸಬ್ಸಿಡಿ ಕೂಡ ಸರಿಯಾಗಿ ಒದಗಿಸಲಿಲ್ಲ. ಕ್ಷಾಮ ನಿವಾರಣೆಗಾಗಿ ಇಂಡಿಯಾ ಸರ್ಕಾರದವರು ಹಣವನ್ನು ಕೂಡ ಒದಗಿಸಲಿಲ್ಲ, ಸಲಕರಣೆಗಳನ್ನೂ ಒದಗಿಸಲಿಲ್ಲ. ಇದನ್ನು ನೋಡಿದರೆ ಅವರು ಮೈಸೂರು ದೇಶವನ್ನು ಸರಿಯಾದ ರೀತಿಯಲ್ಲಿ ಕಾಣುತ್ತಿಲ್ಲವೆಂದು ಕಾಣುತ್ತದೆ. ಅಥವಾ ನಮ್ಮ ಸರ್ಕಾರದವರು ಕೇಂದ್ರ ಸರ್ಕಾರದವರಲ್ಲಿ ನಮ್ಮ ದೇಶದಲ್ಲಿ ಯಾವ ರೀತಿ ಕ್ಷಾಮ ಬಂದಿದೆ, ಈ ಕ್ಷಾಮದ ಉಗ್ರತೆ ಎಷ್ಟು ಎಂಬುದನ್ನು ಸರಿಯಾಗಿ ತಿಳಿಸಿಲ್ಲವೋ ಎಂಬ ಶಂಕೆ ಬರುತ್ತಿದೆ. ಏಕೆಂದರೆ ಪಕ್ಕದ ಪ್ರದೇಶಕ್ಕೆ ಅವರು ಇಷ್ಟು ಹಣ ಸಹಾಯವನ್ನೂ ಇತರ ಸಹಾಯಗಳನ್ನೂ ಕೊಡುತ್ತಿರುವಾಗ ಮೈಸೂರು ದೇಶಕ್ಕೆ ಏಕೆ ಕೊಡುತ್ತಿಲ್ಲ ?

ಶ್ರೀ ಕೆ. ಹನುಮಂತಯ್ಯನವರು—ಅವರಿಗೆ ಎಷ್ಟು ಕೊಡುತ್ತಿದ್ದಾರೆ ?

ಶ್ರೀ ಮುಲ್ಕಾ ಗೋವಿಂದರೆಡ್ಡಿಯವರು.—ಬಾವಿಗಳನ್ನು ತೆಗೆಸುವುದಕ್ಕೆ ಸಹಾಯಮಾಡುತ್ತಿದ್ದಾರೆ. ನೀರನ್ನೊದಗಿಸುವುದಕ್ಕೆ ಸೈನ್ಯದ ಸಹಾಯವನ್ನೊದಗಿಸುತ್ತಿದ್ದಾರೆ. ಮೈಸೂರು ದೇಶಕ್ಕೆ ಕೊಡುತ್ತಿಲ್ಲವೆಂಬುದನ್ನು ಅವರೇ ಹೇಳಲಿ. ಪ್ರಧಾನಿಗಳ ಫಂಡಿನಿಂದ ಅಲ್ಲಿಗೆ ಜಾಸ್ತಿ ಹಣ ಸಹಾಯ ಕೊಟ್ಟಿದ್ದಾರೆ, ನಮಗೆ ಸ್ವಲ್ಪ ಕೊಟ್ಟಿದ್ದಾರೆ. ಮೈಸೂರು ಸಂಸ್ಥಾನಕ್ಕೆ ಎಷ್ಟು ಸಹಾಯ ಮಾಡಬೇಕಾಗಿತ್ತೋ ಅಷ್ಟನ್ನು ಮಾಡಿಲ್ಲ. ಏನೂ ಮಾಡಿಲ್ಲವೆಂದು ನಾನು ಹಿಂದೆಯೂ ಹೇಳಿಲ್ಲ, ಈಗಲೂ ಹೇಳುವುದಿಲ್ಲ. ಸ್ವಲ್ಪ ಮಟ್ಟಿಗೆ ಸಹಾಯ ಮಾಡಿದ್ದಾರೆ. ಪರಿಸ್ಥಿತಿಗನುಗುಣವಾಗಿ, ತೀವ್ರತೆಗನುಗುಣವಾಗಿ ಸರ್ಕಾರದವರು ಪರಿಹಾರ ಕಾರ್ಯಮಾಡುತ್ತಿಲ್ಲ. ಇದು ಶೋಚನೀಯವೆಂದು ಹೇಳಬೇಕಾಗಿದೆ. ಪರಿಸ್ಥಿತಿಯನ್ನು ಇದೇ ರೀತಿ ಬಿಟ್ಟರೆ, ಇನ್ನೂ ಹದಗೆಟ್ಟು ಹೋಗುತ್ತದೆ. ಎಷ್ಟೋ ಜನಗಳೂ ದನಗಳೂ ಸಾಯಬಹುದು. ದನಗಳು ಎಷ್ಟು ಸತ್ತಿವೆ ಎಂಬುದು ಸರ್ಕಾರಕ್ಕೆ ವರದಿಬಂದಿದೆ. ಕೋಲಾರ ಜಿಲ್ಲೆಯಲ್ಲಿ ಬಹಳ ದನಗಳು ಸತ್ತಿವೆಯೆಂದು ತಿಳಿಸಿದ್ದಾರೆ. ಇಷ್ಟಾದರೂ ಕೂಡ ಹುಲ್ಲಿನ ಸರಬರಾಯಿ ಹೆಚ್ಚಾಗಿಲ್ಲ. ಚಿತ್ರದುರ್ಗದಲ್ಲಿಯೂ ಹುಲ್ಲಿನ ಸರಬರಾಯಿ ಎಷ್ಟು ಆಗಬೇಕೋ ಅಷ್ಟು ಆಗುತ್ತಿಲ್ಲ. ಮೈಸೂರು ದೇಶಕ್ಕೆ ಕ್ಷಾಮ ದೊಡ್ಡ ಪೀಡೆಯಾಗಿ ಆವರಿಸಿದೆ. ಇದನ್ನು ತಡೆಯಲು ಏನಾದರೊಂದು ಖಾಯಂ ಯೋಜನೆಯನ್ನು ಮಾಡಬೇಕಾದುದು ಅಗತ್ಯ. ಆದರೂ ಈಗ ಬಂದಿರುವ ಪರಿಸ್ಥಿತಿಯನ್ನು ತಕ್ಷಣ ಎದುರಿಸಬೇಕು. ಇದಕ್ಕೆ ಸಾಕಷ್ಟು ಕಾರ್ಯಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳಬೇಕು. ಹೆಚ್ಚು ಹೆಚ್ಚಾಗಿ ರಿಲೀಫ್ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು. ಆರಾಣೆ, ಎಂಟಾಣೆ ಕೂಲಿ ಕೊಟ್ಟರೆ ಸಾಲದು. ಹನ್ನೆರಡಾಣೆ ಕೊಟ್ಟರೂ ಸಾಲುವುದಿಲ್ಲ. ಈ ದಿನದ ದಿನಸಿ ಬೆಲೆ ಎಷ್ಟಿದೆಯೋ ಅದಕ್ಕನುಗುಣವಾಗಿ, ಸರಿಯಾದ ಕೂಲಿ ಕೊಟ್ಟರೆ ಅಲ್ಲಿನ ಬಡ ಜನರು ಜೀವನ ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಮೊನ್ನೆ ಆಹಾರ ಮಂತ್ರಿಗಳು ಹೇಳಿದ ಹಾಗೆ, ಅಲ್ಲಿಗೆ ಧಾನ್ಯಗಳನ್ನು ಕಳುಹಿಸುತ್ತಿದ್ದಾರೆ. ಆದರೆ ಅವರಿಗೆ ಕೊಳ್ಳುವ ಶಕ್ತಿಯಿಲ್ಲ ಎಂದೂ ಹೇಳಿದರು. ಅವರಿಗೆ ಈ ಕೊಳ್ಳುವ ಶಕ್ತಿ ಬರಬೇಕಾದರೆ ಅವರು ಜೀವನ ನಡೆಸಲು ಎಷ್ಟು ಬೇಕೋ ಅಷ್ಟು ಕೂಲಿಯನ್ನು ಕೊಟ್ಟರೆ

(ಶ್ರೀ ಮುಲ್ಕಾ ಗೋವಿಂದರೆಡ್ಡಿಯವರು.)

ಅನುಕೂಲವಾಗುತ್ತದೆ. ಕೇಂದ್ರ ಸರ್ಕಾರದ ಸಹಾಯವನ್ನು ತೆಗೆದುಕೊಳ್ಳಬೇಕು. ಕ್ಷಾಮ ಯಾವಾಗಲಾದರೂ ಬಂದರೆ, ಆ ಕ್ಷಾಮಕ್ಕೀಡಾಗುವ ಜನರಿಗೆ ಸಹಾಯ ನೀಡುವುದು ಸರ್ಕಾರದ ಆದ್ಯ ಕರ್ತವ್ಯ. ಎಷ್ಟೋ ಸ್ಟಾರಿ ಅಲ್ಲಿಗೆ Famine Code ಅನ್ವಯಿಸಿ ಎಂದು ಹೇಳುತ್ತಿದ್ದೇವೆ. ಹಿಂದೆ ಯಾವಾಗಲೋ 50—60 ವರ್ಷಗಳ ಹಿಂದೆ ಕೂಲಿ ಏನು ಕೊಡುತ್ತಿದ್ದರೋ ಅದನ್ನೇ ಈಗಲೂ ಕೊಡುವುದು ನ್ಯಾಯವಲ್ಲ. ಈಗಿನ ಕಾಲಕ್ಕನುಗುಣವಾಗಿ ಸಹಾಯವಾಗುವಂತೆ ಬದಲಾವಣೆಮಾಡಬೇಕು, ಈಗ ಸರಿಯಾದ ಕೂಲಿಕೊಡುತ್ತಿಲ್ಲ. ಎಷ್ಟು ಅಗತ್ಯವೋ ಅಷ್ಟು ಸಹಾಯ ಕೊಡುತ್ತಿಲ್ಲ. ಆದುದರಿಂದ ಎಷ್ಟು ಸಹಾಯ ಕೊಡಬೇಕೋ ಅಷ್ಟನ್ನು ಜಾಗ್ರತೆಯಾಗಿ ಸರ್ಕಾರದವರು ಕೊಡಬೇಕೆಂದು ಸೂಚಿಸಿ ಈ ಖೋತಾ ನಿರ್ಣಯವನ್ನು ಸಭೆಯ ಮುಂದಿಡುತ್ತೇನೆ.

Mr. SPEAKER.—Cut motion moved:

"That the demand be reduced to Re. 1."

4 P. M.

ಶ್ರೀ ಕೆ. ಹನಮಂತಯ್ಯನವರು (ಪ್ರಧಾನ ಮಂತ್ರಿಗಳು).—ಸ್ವಾಮಿ, ಕ್ಷಾಮ ಪರಿಸ್ಥಿತಿ ಬಂದೊದಗಿದೆಯೆಂಬ ವಿಷಯವನ್ನು ಈ ಸಭೆಯವರ ಅವಗಾಹನೆಗೆ ತರುವುದಕ್ಕೋಸ್ಕರವಾಗಿ ಶ್ರೀಮಾನ್ ಮುಲ್ಕಾ ಗೋವಿಂದರೆಡ್ಡಿಯವರು ಈ ಕತ್ತರಿ ಪ್ರಯೋಗದ ನಿರ್ಣಯವನ್ನು ಮಂಡಿಸಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಹಿಂದೆ ನಡೆದಿರುವಂಥ ಚರ್ಚೆಗಳಲ್ಲಿ ಅನೇಕ ಮಾನ್ಯ ಸದಸ್ಯರುಗಳೂ ಈ ಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪಮಾಡಿದ್ದಾರೆ; ಆ ರೀತಿ ಅವರು ಪ್ರಸ್ತಾಪಮಾಡಬೇಕಾಗಿದ್ದರೆ ಅವರು ಕಣ್ಣಾರ ನೋಡಿ ತಿಳಿದುಕೊಂಡಿರತಕ್ಕಂಥ ವಿಷಯಗಳನ್ನೇ ಪ್ರಸ್ತಾಪಮಾಡಿದ್ದಾರೆಂಬ ಭರವಸೆ ನನಗಿದೆ. ನಾನೂ ಮತ್ತು ನನ್ನ ಸಹೋದ್ಯೋಗಿಗಳಾದ ಇತರ ಮಂತ್ರಿಗಳೂ ಕೂಡ ಆ ಪ್ರದೇಶಗಳಿಗೆ ಹೋಗಿ ಜನರಿಗುಂಟಾಗಿರುವಂಥ ತೊಂದರೆಗಳನ್ನು ಕಣ್ಣಾರ ನೋಡಿಕೊಂಡು ಬಂದಿದ್ದೇವೆ. ಹೀಗೆ ಕಣ್ಣಾರ ನೋಡಿಕೊಂಡು ಬಂದಿರತಕ್ಕಂಥ ವಿಷಯಗಳಲ್ಲಿ 'ನನಗೆ ಚೆನ್ನಾಗಿ ಗೊತ್ತು, ಅಥವಾ ನನಗೆ ಹೆಚ್ಚಾಗಿ ಗೊತ್ತು' ಎನ್ನುವ ಪೈಪೋಟಿ ಬೇಕಾಗಿಲ್ಲ. ಹೀಗೆ ವಾದಾಸ್ಪದವಾದ ವಿಷಯಗಳಲ್ಲಿ ಒಂದು ವಿಷಯ ಒಬ್ಬರ ಮನಸ್ಸಿಗೆ ಹೆಚ್ಚಾಗಿದೆಯೆಂದು ಕಂಡುಬಂದರೆ, ಅದೇ ವಿಷಯ ಮತ್ತೊಬ್ಬರ ಮನಸ್ಸಿಗೆ ಕಡಮೆ ಎಂದು ಕಂಡುಬರಬಹುದು. ಆದುದರಿಂದ ಇಂಥ ವಾದದ ಪೈಪೋಟಿ ಬೇಕಿಲ್ಲ; ಇದು ಅನಾವಶ್ಯಕ.

ಆದರೆ ಅಂಥ ಪರಿಸ್ಥಿತಿಯಲ್ಲಿ ಜನರಿಗೂ ಮತ್ತು ದನಕರುಗಳಿಗೂ ಉಂಟಾಗಿರತಕ್ಕ ಕಷ್ಟವನ್ನು ಹೋಗಲಾಡಿಸತಕ್ಕುದರ ಬಗ್ಗೆ ಶ್ರದ್ಧೆಯಿಂದ ಕೆಲಸಮಾಡಬೇಕಾದಂಥ ಕರ್ತವ್ಯ ನಮ್ಮದು. ಈ ಬಗ್ಗೆ ಮೈಸೂರು ಸರ್ಕಾರ ಯಾವ ಯಾವ ಪ್ರಯತ್ನಗಳನ್ನು ಮಾಡಬೇಕೋ ಅವುಗಳನ್ನೆಲ್ಲಾ ಮಾಡಿದ್ದಾರೆ. ಆದುದರಿಂದ ಇಂಡಿಯಾ ಸರ್ಕಾರದವರ ಮೇಲೆ ಒಂದು ಒತ್ತಾಯವನ್ನು ಸರಿಯಾಗಿ ತರಲಿಲ್ಲ ಮತ್ತು ಸಾಕಷ್ಟು ಸಹಾಯವನ್ನು ಈ ಬಗ್ಗೆ ಅವರಿಂದ ಪಡೆಯಲಿಲ್ಲ ಎನ್ನುವ ವಿಷಯ ನಿಜವಲ್ಲ. ಈಗ್ಗೆ ಎರಡು ತಿಂಗಳ ಹಿಂದೆ ಕೂಡ ಪ್ರಧಾನಿ ನೆಹ್ರೂರವರೊಡನೆಯೂ, ಕೇಂದ್ರ ಸರ್ಕಾರದ ಹಣಕಾಸಿನ ಮಂತ್ರಿಗಳೊಡನೆಯೂ ಮತ್ತು ಮಿಲಿಟರಿ ಶಾಖಾ ಮಂತ್ರಿಗಳ ಸಂಗಡವೂ ಈ ಸಂಬಂಧವಾಗಿ ಪತ್ರವ್ಯವಹಾರ ನಡೆಸಿದ್ದೇವೆ. ಆದರೆ ಅವರು ಹೇಳತಕ್ಕ ವಾದದಲ್ಲಿ ಕೂಡ ಒಂದು ನ್ಯಾಯವಿದೆ. ಮೈಸೂರು ವಿಷಯದಲ್ಲಿ, ಇದೊಂದಕ್ಕೇ ಹೆಚ್ಚಿನ ಸೌಲಭ್ಯಗಳನ್ನು ಕೊಡುವುದಕ್ಕಾಗುವುದಿಲ್ಲ, ಇಂಡಿಯಾ ಸರ್ಕಾರ ತನ್ನ ಎಲ್ಲ ಪ್ರದೇಶಗಳನ್ನೂ ಒಂದೇ ಸಮವಾದ ದೃಷ್ಟಿಯಿಂದ ನೋಡಬೇಕೆಂಬ ತತ್ವವನ್ನು ಪ್ರತಿಪಾದಿಸುತ್ತಿದ್ದಾರೆ. ಅದು ನ್ಯಾಯವಾಗಿಯೇ ಇದೆ. ಹೀಗಿರುವಾಗ ಮದ್ರಾಸಿಗೆ ಹೆಚ್ಚಾಗಿ ದುಡ್ಡನ್ನು ಕೊಟ್ಟಿದ್ದಾರೆಂಬುದು ನಿಜವಾದುದಲ್ಲ. ಅವರು ಕೆಲವು ನಿಯಮಗಳನ್ನು ಏರ್ಪಡಿಸಿದ್ದಾರೆ. ಆ ನಿಯಮಗಳ ಪ್ರಕಾರ ಯಾರು ಬೇಕಾದರೂ ಸಹಾಯವನ್ನು ಪಡೆದುಕೊಳ್ಳಬಹುದೆಂದು ಹೇಳಿದ್ದಾರೆ.

ಹಾಗೆ ಅವರು ಮಾಡಿರತಕ್ಕ ನೀತಿನಿಯಮಗಳಿಂದ ದಕ್ಷಿಣ ಇಂಡಿಯಾ ದೇಶದಲ್ಲಿ, ಎಂದರೆ ಮದ್ರಾಸು ಮತ್ತು ಮೈಸೂರು ಪ್ರಾಂತಗಳಲ್ಲಿ, ಉಂಟಾಗಿರತಕ್ಕ ಪರಿಸ್ಥಿತಿಯನ್ನು ತಹಬಂದಿಗೆ ತರಲು ಅನಾನುಕೂಲವಾಗಿದೆ. ಆದುದರಿಂದ ಈಗ ಅವರು ಮಾಡಿರತಕ್ಕ ನಿಯಮಗಳನ್ನು ಬದಲಾವಣೆ ಮಾಡಬೇಕಾಗಿದೆ. ಹಾಗೆ ಬದಲಾವಣೆ ಮಾಡತಕ್ಕದ್ದು ಅಗತ್ಯವಾಗಿದೆ ಎಂಬುದಾಗಿ ನಾವು ಅವರಿಗೆ ತಿಳಿಸೋಣ. ಪ್ರತಿಯೊಂದು ಸಂಸ್ಥಾನದಲ್ಲೂ ಸರ್ಕಾರವೂ, ಶಾಸನ ಸಭೆಗಳೂ ಬಹಳ ಜವಾಬ್ದಾರಿಯುತವಾಗಿ ಸ್ಥಾಪಿಸಲ್ಪಟ್ಟಿರತಕ್ಕಂಥ ಈ ನವೀನ ಕಾಲದಲ್ಲಿ, ಪ್ರತಿಯೊಂದು ವಿಷಯದಲ್ಲೂ ಸಹ ಇಂಡಿಯಾ ಸರ್ಕಾರ ಸಂಸ್ಥಾನಗಳಿಗೆ ಸಹಾಯ ನೀಡಬೇಕೆಂದು ಬೊಬ್ಬೆಯಿಡತಕ್ಕದ್ದೂ ಮತ್ತು ಅವರು ಜಾಸ್ತಿ ಸಹಾಯ ನೀಡಲಿಲ್ಲವೆಂದು ಆಕ್ಷೇಪಣೆಮಾಡತಕ್ಕದ್ದೂ ನಮ್ಮ ಆತ್ಮಗೌರವಕ್ಕೆ ಅನುಗುಣವಾಗಿರುವುದಿಲ್ಲ. ನಾವು ಏನೇ ಹೇಳಲಿ, ಆ ಪ್ರತಿಯೊಂದು ನಮ್ಮ ಆತ್ಮಗೌರವಕ್ಕನುಗುಣವಾಗಿರಬೇಕು. ಆ ಇಂಡಿಯಾ ಸರ್ಕಾರ ಇತರ ಸರ್ಕಾರಗಳಿಗೆ ಒಂದು ದಾತೃವಾಗಿದೆಯೇನು? ಇಲ್ಲ. ಅದು ಅಂಥ ದಾತೃವಾಗಿಲ್ಲ. ಸಂಸ್ಥಾನಗಳ ಸರ್ಕಾರಗಳು ಕೂಡ ಸದಾ ಭಿಕ್ಷಾಪಾತ್ರೆಯನ್ನು ತಮ್ಮ ಕೈಲಿಟ್ಟುಕೊಂಡು ಬೇಡತಕ್ಕಂಥ ಒಂದು ಶೋಚನೀಯ ಪರಿಸ್ಥಿತಿಯಲ್ಲಿಲ್ಲ. ಇಂಡಿಯಾ ಸರ್ಕಾರಕ್ಕೇ ಆಗಲಿ ಅಥವಾ ಸಂಸ್ಥಾನಗಳ ಸರ್ಕಾರಕ್ಕೇ ಆಗಲಿ ಪ್ರಜಾಸೇವೆಮಾಡಲು ಅವರವರ ಮೇಲಿರತಕ್ಕ ಜವಾಬ್ದಾರಿಯನ್ನೂ ಮತ್ತು ಅದಕ್ಕೆ ಬೇಕಾಗುವಂಥ ಅನುಕೂಲತೆಗಳನ್ನೂ ಕಾನ್ಸ್ಟಿಟ್ಯೂಷನ್ ಕಲ್ಪಿಸಿಕೊಟ್ಟಿದೆ. ಇಂಡಿಯಾ ಸರ್ಕಾರದ ಹಣಕಾಸಿನ ಶಾಖಾ ಸಚಿವರು, ಯಾವ ಯಾವ ಬಾಬಿಗೆ ಎಷ್ಟೆಷ್ಟು ಹಣವನ್ನು ವಿನಿಯೋಗಮಾಡಬೇಕು ಮತ್ತು ಎಷ್ಟೆಷ್ಟು ಹಣವನ್ನು ಯಾವ ಯಾವ ಬಾಬಿಗಾಗಿ ಖರ್ಚುಮಾಡಬೇಕು ಎಂಬುದನ್ನು ಅಲ್ಲಿನ ಶಾಸನ ಸಭೆಯ ಅನುಮತಿಯ ಪ್ರಕಾರ ನಿಗದಿಮಾಡಿದ್ದಾರೆ. ಹೀಗೆ ಇವೆಲ್ಲಾ ಅಲ್ಲಿ ಪಾರ್ಲಿಮೆಂಟಿನ ಒಪ್ಪಿಗೆ ಪ್ರಕಾರ ನಡೆಯಬೇಕಾಗಿದೆ. ಹಾಗೆ ಪಾರ್ಲಿಮೆಂಟಿನ ಒಪ್ಪಿಗೆ ಪ್ರಕಾರ ತಯಾರಾಗಿರತಕ್ಕ ಬಡ್ಜೆಟ್ಟಿನಲ್ಲಿ ಈ ಬಾಬುಗಳಿಗೆ ಹೆಚ್ಚಿಗೆ ಹಣವನ್ನು ಒದಗಿಸದೆ ಇರುವುದರಿಂದ, ನಾವು ಅದನ್ನು ಅರಿತುಕೊಳ್ಳದೆ ಒದಗಿಸಬೇಕೆಂದು ಒತ್ತಾಯಪಡಿಸುತ್ತಾ ಹೋದರೆ, ಇದು ಶಾಸನಸಭೆಯಾಗುವುದಿಲ್ಲ, ಒಂದು ಪಬ್ಲಿಕ್ ಮೀಟಿಂಗ್ ಆಗುತ್ತದೆ. ಈ ದೃಷ್ಟಿಯಿಂದ ನಾವು ಕೇಳತಕ್ಕದ್ದು ಶಾಸನಸಮ್ಮತವಾಗಿರಬೇಕು, ಸಂಪ್ರದಾಯಕ್ಕೆ ಸಮ್ಮತವಾಗಿರಬೇಕು, ಎಲ್ಲಕ್ಕಿಂತಲೂ ಮಿಗಿಲಾಗಿ, ಇದು ನಮ್ಮ ಆತ್ಮಗೌರವವನ್ನು ಕಾಪಾಡಿಕೊಳ್ಳತಕ್ಕಂಥಾದಾ

ಗಿರಬೇಕು. ಇಂಥ ಒಂದು ತತ್ವವನ್ನು ನಾವು ಪ್ರತಿಪಾದಿಸಬೇಕು. ಇಂಡಿಯಾ ಸರ್ಕಾರಕ್ಕೆ ಇತರ ಸಂಸ್ಥಾನಗಳ ಮತ್ತು ಪ್ರಾಂತೀಯ ಸರ್ಕಾರಗಳೆಲ್ಲಕ್ಕಿಂತಲೂ ಹೆಚ್ಚಾಗಿ ದ್ರವ್ಯವನ್ನು ಇಟ್ಟುಕೊಂಡಿರತಕ್ಕ ಮತ್ತು ಕೊಡತಕ್ಕಂಥ ಒಂದು ಅನುಕೂಲಪರಿಸ್ಥಿತಿ ಇರುವಾಗ, ಅವರು ತಮ್ಮ ಕೈಲಾದ ಸಹಾಯವನ್ನು ಮಾಡತಕ್ಕದ್ದು ನ್ಯಾಯವಾಗಿಯೇ ಇದೆ. ಆ ರೀತಿ ಅವರೂ ಸಹ ಮಾಡುವುದಕ್ಕೆ ಸಿದ್ಧರಾಗಿದ್ದಾರೆಂದು ನನ್ನ ಭಾವವೆ. ಮದ್ರಾಸ್ ಸರ್ಕಾರಕ್ಕೆ ಅವರು ಈಗ ಏನೇನು ರಿಯಾಯಿತಿಗಳನ್ನು ತೋರಿಸಿದ್ದಾರೋ ಆ ಎಲ್ಲ ರಿಯಾಯಿತಿಗಳನ್ನೂ ಮೈಸೂರು ಸರ್ಕಾರಕ್ಕೂ ತೋರಿಸಲು ಸಿದ್ಧರಾಗಿದ್ದಾರೆ. ಆದರೆ ಅವುಗಳಿಂದ ಏನೂ ಪ್ರಯೋಜನವಾಗುವುದಿಲ್ಲ. ಈ ವಿಚಾರವಾಗಿ ಮೊನ್ನೆ ತಾನೆ ನನಗೆ ಅಲ್ಲಿಂದ ಒಂದು ಕಾಗದ ಬಂದಿದೆ. ಅದನ್ನು ನಾನು ಈಗ ಈ ಸಭೆಯಲ್ಲಿ ಓದಬೇಕಾಗಿಲ್ಲ. ಹಾಗೆ ಮಾಡಿದರೆ ಕಡೆಗೆ ಅದೇ ಆಖೈರು ತೀರ್ಮಾನವಾದೀತು. ಆದರೆ ಅವರು ಮಾಡಿಕೊಂಡಿರತಕ್ಕ ನಿಯಮಗಳನ್ನು ಬದಲಾಯಿಸುವಂತೆ ಪತ್ರ ಬರೆಯಬೇಕೆಂದು ನಾವು ಕೊನೆಯ ತೀರ್ಮಾನಮಾಡಿಕೊಂಡಿದ್ದೇವೆ. ಆ ರೀತಿಯಾಗಿ ಅವರ ನಿಯಮಗಳನ್ನು ಬದಲಾಯಿಸಬೇಕೆಂದೂ, ಅವರ ರಿಯಾಯಿತಿಗಳು ಸಾಲದೆಂದೂ ನಾವು ಪತ್ರವ್ಯವಹಾರ ಮಾಡೋಣ.

ಮಿಲಿಟೆರಿ ವಿಚಾರವಾಗಿ ಒಂದು ಮಾತನ್ನು ಹೇಳಿದರು. ಮದ್ರಾಸಿನವರಿಗೆ ಮಿಲಿಟೆರಿ ಸಹಾಯ ದೊರೆತದ್ದು ನಿಜ. ಮೈಸೂರು ಸರ್ಕಾರದವರೂ ಕೂಡ ಬರೆದಿದ್ದರು. ಆದರೆ ಇವರಿಗೆ ಸಹಾಯ ದೊರೆಕಿಸಲು ಸಾಧ್ಯವಾಗಲಿಲ್ಲವೆಂದು ಅವರು ತಿಳಿಸಿದ್ದಾರೆ. ಆ ರೀತಿ ಕಾಗದಗಳೂ ಸಹ ಬಂದಿವೆ. ಪುನಃ ನಾವು ಬರೆಯೋಣ. ಹಿಂದೆ ಎರಡು ತಿಂಗಳ ಕೆಳಗೇನು ಪರಿಸ್ಥಿತಿಯಿತ್ತೋ ಈಗ ಅದಕ್ಕಿಂತಲೂ ಪರಿಸ್ಥಿತಿ ಇನ್ನೂ ಕಠಿಣವಾಗಿರುತ್ತೆಂಬುದನ್ನು ಸರ್ಕಾರದವರೂ ಮತ್ತು ಈ ಮಾನ್ಯ ಸಭೆಯವರೂ ಮನಗಂಡಿದ್ದಾರೆ. ಈ ಪರಿಸ್ಥಿತಿಯನ್ನು ಕೇಂದ್ರ ಸರ್ಕಾರದವರ ಮುಂದಿಟ್ಟು ಅವರಿಂದ ಏನು ಸಹಾಯಗಳನ್ನು ಪಡೆಯಬೇಕೋ ಅದನ್ನೆಲ್ಲಾ ಪಡೆಯೋಣ. ಮಿಲಿಟೆರಿಯವರಿಂದ ಈ ಬೋರ್ ವೆಲ್ಸ್ ಇತ್ಯಾದಿಗಳೇನೇನು ಕೆಲಸಗಳಾಗಬೇಕಾದರೂ, ಅವನ್ನೂ ಪಡೆಯೋಣ. ತತ್ಸಂಬಂಧವಾದ ಎಲ್ಲ ಕೆಲಸ ಕಾರ್ಯಗಳನ್ನೂ ಸತತವಾಗಿ ಮಾಡುತ್ತೇನೆಂಬ ಭರವಸೆಯನ್ನು ಸರ್ಕಾರದ ಪರವಾಗಿ ಈ ಸಭೆಗೆ ಕೊಡುತ್ತೇನೆ.

ಇದರಲ್ಲಿ ಒಂದು ವಿಷಯ—ಕೇಂದ್ರ ಸರ್ಕಾರದವರು ಈ ಕ್ಷಾಮಪರಿಸ್ಥಿತಿಯನ್ನು ತಹಬಂದಿಗೆ ತರುವುದಕ್ಕಾಗಿ ಅಲ್ಪಸ್ವಲ್ಪ ಸಾಲವನ್ನೂ ಕೊಡಬಹುದು. ಆದರೆ ಅಂಥ ಸಾಲವನ್ನು ಪಡೆಯುವುದಕ್ಕೆ ನಾನು ಹಿಂಜರಿಯುತ್ತೇನೆ. ಈಗಾಗಲೇ ಅನೇಕ ಬಾಬುಗಳಲ್ಲಿ ಮೈಸೂರು ಸರ್ಕಾರದವರು ಇಂಡಿಯಾ ಸರ್ಕಾರದಿಂದ ಸಾಲವನ್ನು ಪಡೆದಿದ್ದಾರೆ. ಹೀಗೆ ಸಾಲದ ಹೊರೆಯನ್ನು ಮೈಸೂರು ಸಂಸ್ಥಾನದ ಮೇಲೆ ಪ್ರತಿಯೊಂದು ಕಾರ್ಯಕ್ಕೂ ನಾನು ಹೇರುತ್ತಾ ಹೋದರೆ ಮುಂದೆ ಬರತಕ್ಕ ಸರ್ಕಾರಗಳಿಗೂ ಮತ್ತು ಮುಂದಿನ ಪೀಳಿಗೆಗೂ ನಾನು ಅನ್ಯಾಯಮಾಡಿದಂತಾಗುತ್ತದೆ. ಎದುರುಪಕ್ಷದವರು ಈಗಾಗಲೇ ಯಾವ ರೀತಿ ಹಿಂದಿದ್ದ ಮಂತ್ರಿಮಂಡಲವನ್ನು ಸಮರ್ಪಕವಾದ ರೀತಿಯಲ್ಲಿ ಕೆಲಸಮಾಡಲಿಲ್ಲವೆಂದು ಟೀಕೆಮಾಡುತ್ತಿದ್ದಾರೋ, ಇದೇ ರೀತಿ ಟೀಕೆಗಳು ಮುಂದಕ್ಕೂ ಬರಬಹುದು. ಆ ಆಕ್ಷೇಪಣೆ ಸರಿಯೋ, ಸರಿಯಲ್ಲವೊ............

ಜನಾಬ್ ಜೆ. ಮಹಮದ್ ಇಮಾಂರವರು.—ಆಕ್ಷೇಪಣೆ ಅಲ್ಲ, ಟೀಕೆ.

ಶ್ರೀ ಕೆ. ಹನುಮಂತಯ್ಯನವರು.—I accept the correction Sir. ಆ ಟೀಕೆ ಸರಿಯೆ, ಸರಿಯಲ್ಲವೆ ಎಂಬುದಕ್ಕೆ ಹಿಂದೆಯೇ ನಾನು ಉತ್ತರ ಕೊಟ್ಟಿದ್ದೇನೆ. ಆದ್ದರಿಂದ ತಿರುಗಿ ನಾನು ಹೇಳಬೇಕಾದುದು ಅನಾವಶ್ಯಕ. ಆದರೆ ಎದುರು ಪಕ್ಷದವರು ಮಾಡುವ ಟೀಕೆಯನ್ನು ನಾನು ಯಾವಾಗಲೂ ಮನಸ್ಸಿಗೆ ಅಂಟಿಸಿಕೊಂಡು ತದನುಸಾರವಾಗಿ ನಡೆಯುವ ಮನೋವೃತ್ತಿಯಿರುವ ಮನುಷ್ಯ. ಕ್ಷಾಮ ಬಂದಿದೆಯೆಂದು ಹೇಳಿಬೇಕಾದಷ್ಟು ಸಾಲ ತೆಗೆದುಕೊಂಡು ಖರ್ಚುಮಾಡಿದರೆ ಮುಂದೆ ಬರತಕ್ಕಂಥ ಮಂತ್ರಿಮಂಡಲಿಗಳು ಅಥವಾ ಮುಂದಿನ ವರ್ಷಗಳ ಆಯವ್ಯಯ ಪಟ್ಟಿಗಳು ತಲೆಕೆಳಗಾಗುತ್ತವೆ. ಈ ದಿವಸ ಕೋಲಾರ ಡಿಸ್ಟ್ರಿಕ್ಟಿನಲ್ಲಿ ನಾವು ಈ ರೀತಿ ಒಂದು ಉದಾರ ಮನೋಭಾವನೆಯಿಂದ ರಿಲೀಫ್ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಕೈಹಾಕಿ ಎಷ್ಟು ನಾವು ಖರ್ಚುಮಾಡಬೇಕೆಂದು ಮನಸ್ಸುಮಾಡಿದ್ದೇವೋ, ಎಷ್ಟು ನಮಗೆ ಶಕ್ತಿಯಿದೆಯೆಂದು ತಿಳಿದುಕೊಂಡಿದ್ದೆವೋ ಅದರ ಎಲ್ಲೆ ಮೀರಿ ಹೋಗಿದ್ದೇವೆ.

ಶ್ರೀ ಬಿ. ವಿ. ನಾರಾಯಣರೆಡ್ಡಿಯವರು.—ಅದಕ್ಕೇ ಯಾರೂ ಸತ್ತಿಲ್ಲ.

ಶ್ರೀ ಕೆ. ಹನುಮಂತಯ್ಯನವರು.—ಆ ನನ್ನ ಮಿತ್ರರಿಗೆ ಅದೂ ಇಷ್ಟವಿದೆಯೆಂದು ಕಾಣುತ್ತದೆ. ಈ ರೀತಿ ಕ್ಷಾಮ ಪರಿಸ್ಥಿತಿಯಲ್ಲಾಗಲಿ, ಕಷ್ಟಪರಿಸ್ಥಿತಿಯಲ್ಲಾಗಲಿ, “ಹಾಸಿಗೆ ಇದ್ದಷ್ಟು ಕಾಲುಚಾಚಿಕೊಳ್ಳಬೇಕು’ ಎಂಬ ಗಾದೆಗನುಸಾರವಾಗಿ ನಾವು ನಡೆಯಬೇಕು. ನಮ್ಮ ಕ್ಷಾಮನಿವಾರಣಾ ನಿಧಿ ಎಂದು ಏನಿದೆಯೋ ಅದು ಸುಮಾರು 67 ಲಕ್ಷ ಚಿಲ್ಲರೆ ಇದೆ, ಸುಮಾರು 68 ಲಕ್ಷ ಎಂದು ಇಟ್ಟುಕೊಳ್ಳಬಹುದು. ಆ ನಿಧಿಯಿಂದ ಈಗಾಗಲೇ ಸುಮಾರು 25 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಸಂಸ್ಥಾನದ 1/3 ಭಾಗಕ್ಕೂ ಕಡಮೆಯಾಗಿರುವ ಪ್ರದೇಶಕ್ಕೆ ಈಗಾಗಲೇ ಈ ಕ್ಷಾಮದ ನಿಧಿಯಿಂದ 1/3 ಭಾಗಕ್ಕಿಂತಲೂ ಹೆಚ್ಚು ಖರ್ಚುಮಾಡುತ್ತಿರುವ ಪ್ರಮೇಯ ಉಂಟಾಗಿರುವುದು ಸರ್ಕಾರದ ಮನಸ್ಸಿಗೆ ಕಳವಳವನ್ನುಂಟುಮಾಡಿದೆ. ಈ ರೀತಿಯಾಗಿ ನಾವು ರಿಸರ್ವ್ ಫಂಡಿನಿಂದ ವೆಚ್ಚಮಾಡಿದರೆ ಖರ್ಚಾಗುವುದನ್ನು ಬರುವ ವರ್ಷಗಳಲ್ಲಿ ಪುನಃ ಕೂಡಿಸಬೇಕೆಂಬ ವಿಷಯವನ್ನು ಕೂಡ ತಾವು ಮನಸ್ಸಿಗೆ ತಂದುಕೊಳ್ಳಬೇಕು. ಮುಂದಿನ ವರ್ಷದ ಆಯವ್ಯಯಪಟ್ಟಿಯಲ್ಲಿ ಯಾವಯಾವ ನಿಧಿಯಿಂದ ಎಷ್ಟೆಷ್ಟು ಖರ್ಚುಮಾಡುತ್ತೇವೋ ಆ ನಿಧಿಗೆ ಸಾಧ್ಯವಾದಷ್ಟು ಹಾಗೆ ತೆಗೆದುಕೊಂಡ ಮೊತ್ತವನ್ನು ಪುನಃ ತುಂಬಿಸುತ್ತೇವೆ; ಈ ಜವಾಬ್ದಾರಿ ಕೂಡ ಈ ಸಭೆಯಮೇಲಿದೆ. ಹೀಗಿರುವಾಗ ಮನಸ್ಸಿಗೆ ಎಷ್ಟು ಹೊಳೆಯುತ್ತದೆಯೋ ಅಷ್ಟನ್ನು ಖರ್ಚುಮಾಡುವುದು ಕಷ್ಟವಾಗುತ್ತದೆ ಎಂಬುದನ್ನು ತಾವು ಮನಸ್ಸಿಗೆ ತಂದುಕೊಳ್ಳಬೇಕು. ಈ ವಿಚಾರದಲ್ಲಿ ಸರ್ಕಾರ ಮಾಡತಕ್ಕ ಸಹಾಯ ಸಾಲುವುದಿಲ್ಲ. ಮೈಸೂರು ಸಂಸ್ಥಾನದಲ್ಲಿ ಇನ್ನೂ ಕೊಂಚ ವಾರಗಳು ಅಥವಾ ಇನ್ನೂ ಕೊಂಚಕಾಲ ಹೆಚ್ಚಾಗಿಯೇ ಮಳೆ ಬಾರದೇ ಹೋದರೆ ಎಷ್ಟು ಕಷ್ಟಪರಿಸ್ಥಿತಿ ಉಂಟಾಗುತ್ತದೆ ಎಂದು ನಾವು ಊಹಿಸಿಕೊಳ್ಳಬಹುದು. ಬಹಳ ಕಷ್ಟವೇನಾದರೂ ನಮ್ಮ ದುರದೃಷ್ಟವಶಾತ್ ಉಂಟಾದರೆ ನಾವು ಏನೊಂದು ಕ್ಷಾಮನಿಧಿ ಇಟ್ಟುಕೊಂಡಿದ್ದೇವೋ ಅದನ್ನೆಲ್ಲಾ ಖರ್ಚುಮಾಡಿದರೂ ಕೂಡ ಸಾಲುವುದಿಲ್ಲ. ಮಿಕ್ಕ ಹಣ ಖರ್ಚುಮಾಡಿದರೂ

(ಶ್ರೀ ಬಿ. ವಿ. ನಾರಾಯಣರೆಡ್ಡಿಯವರು)

ಸಾಲದೆ ಇರಬಹುದು. ನಾನು ಸ್ವಲ್ಪ ಸಂಪ್ರದಾಯ ಶರಣನಾದ ಮನುಷ್ಯ, ನಂದನ ಸಂವತ್ಸರ ಬಹಳ ಕಷ್ಟವಾದ ಸಂವತ್ಸರ ಎಂದು ಹಿರಿಯರು ಹೇಳುತ್ತಾರೆ, ಆದ್ದರಿಂದ ನಂದನ ಸಂವತ್ಸರದಲ್ಲಿ ಕಷ್ಟಪ್ರಾಪ್ತಿಯಾಗಬಹುದು ಎಂಬ ಶಂಕೆ ನನ್ನ ಮನಸ್ಸಿನಲ್ಲಿ ಸದಾ ನೋವನ್ನುಂಟುಮಾಡುತ್ತಲೇ ಇದೆ. ಆದ್ದರಿಂದ ಈ ದಿವಸ ಸರ್ಕಾರವನ್ನು ಟೀಕೆಮಾಡುವುದಕ್ಕೆ ಈ ಕಷ್ಟ ಪರಿಸ್ಥಿತಿಯನ್ನು ಉಪಯೋಗಿಸಿಕೊಳ್ಳುವ ಮನೋವೃತ್ತಿ ಸಭೆಯ ಒಂದು ಮರ್ಯಾದೆಗಾಗಲಿ, ದೇಶದ ಒಂದು ಅಂತಸ್ತಿಗಾಗಲಿ ಅನುಗುಣವಾಗುವುದಿಲ್ಲ ಎಂಬುದನ್ನು ವಿಶದೀಕರಿಸುತ್ತೇನೆ. ಆದ್ದರಿಂದ ಸರ್ಕಾರದ ಸಹಾಯದ ಜೊತೆಗೆ ನಾವುಗಳೆಲ್ಲರೂ ಸಹಕರಿಸಿ ಕ್ಷಾಮ ಪರಿಸ್ಥಿತಿಗೆ ಏನೇನು ನಿವಾರಣೋಪಾಯಗಳನ್ನು ಕಂಡುಹಿಡಿಯಬೇಕೋ ಕಾರ್ಯರೂಪಕ್ಕೆ ತರಬೇಕೋ ಅವುಗಳನ್ನು ತರುವುದರಲ್ಲಿ ನಿರತರಾಗೋಣ, ಮನಸ್ಸಿನಲ್ಲಿ ಉದ್ವೇಗವಿದ್ದರೆ ಆ ಉದ್ವೇಗವನ್ನು ಆ ಕಷ್ಟದ ಪರಿಹಾರೋಪಾಯ ಕಂಡುಹಿಡಿದು ಅನುಷ್ಠಾನಕ್ಕೆ ತರುವುದರಲ್ಲಿ ಉಪಯೋಗಿಸೋಣ. ನಮ್ಮನ್ನು ಟೀಕೆ ಮಾಡಿದರೆ ಅದರಿಂದ ಸರ್ಕಾರ ಏನೂ ಬೆದರುವುದಿಲ್ಲ, ಅದರಿಂದ ಒಂದು ಸಹಾಯಕೂಡ ಆಗುವುದಿಲ್ಲ.

Sri Mulka GOVINDA REDDY.—Sir, on a point of clarification. The Leader of the House seems to think that we are making suggestions just for the sake of criticising the Government, but we are apart from such criticism. What we offer is constructive criticism whenever we feel that the Government has not done its work properly, but not at all with a view to criticise the Government for the sake fo criticism.

Sri K. HANUMANTHAIYA.—That is presumed Sir. I am merely answering.

Mr. SPEAKER.—That is in reply to Sir B. V. Narayana Reddy.

ಶ್ರೀ ಬಿ. ವಿ. ನಾರಾಯಣರೆಡ್ಡಿಯವರು.—ಹೆದರಿಸಬೇಕು ಎಂದು ಯಾರೂ ಹೇಳಲಿಲ್ಲ. ಬಹುಮತವಿರುವಾಗ ಹೆದರುವುದೇನು ? ಬೆದರುವುದೇನು ?

ಶ್ರೀ ಕೆ. ಹನುಮಂತಯ್ಯನವರು.—ಆದ್ದರಿಂದ ನಾನು ಈ ಸಭೆಯಮುಂದೆ, ದೇಶದ ಮುಂದೆ ಕೆಲವು ಕಾರ್ಯಕ್ರಮಗಳನ್ನು ಈ ದಿವಸ ಇಡಬೇಕೆಂದು ಉದ್ದೇಶವುಳ್ಳವನಾಗಿದ್ದೇನೆ. ಇಂತಹ ಕಷ್ಟಪರಿಸ್ಥಿತಿ ಬಂದಾಗ ನಿಧಿಗಳನ್ನು ಕೂಡಿಸಿ ಜನಗಳಿಗೆ ಸಹಾಯ ಮಾಡುವುದು ನಮಗೆ ಆದಿಯಿಂದಿರುವ ಸಂಪ್ರದಾಯ. ಆದ್ದರಿಂದ ಚೀಫ್‌ಮಿನಿಸ್ಟರ್ಸ್' ರಿಲೀಫ್ ಫಂಡ್ ಎಂದು ಹೇಳಿ ಒಂದು ಪರಿಹಾರ ನಿಧಿಯನ್ನು ಕೂಡಿಸುವ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಮಂತ್ರಿಮಂಡಲದವರು ನಿರ್ಧರಿಸಿದ್ದಾರೆ. ಅದೇ ರೀತಿಯಲ್ಲಿ ಪ್ರತಿಯೊಂದು ಜಿಲ್ಲೆಯಲ್ಲೂ ಕ್ಷಾಮ ನಿವಾರಣಾ ಸಹಾಯ ಸಮಿತಿಗಳನ್ನು ಏರ್ಪಡಿಸಬೇಕೆಂದು ಕೂಡ ಸರ್ಕಾರದ ನಿರ್ಧಾರವಾಗಿದೆ. ಪ್ರತಿ ಜಿಲ್ಲೆಯಲ್ಲೂ ಆಯಾ ಜಿಲ್ಲಾ ಡೆಪ್ಯುಟಿ ಕಮಿಷನರುಗಳು, ಆಯಾ ಜಿಲ್ಲೆಯಲ್ಲಿರುವ ಶಾಸನಸಭಾ ಸದಸ್ಯರುಗಳು ಮತ್ತು ಇತರ ಮಹನೀಯರುಗಳು ಎಲ್ಲರೂ ಸೇರಿ ಒಂದೊಂದು ಕ್ಷಾಮನಿವಾರಣಾ ಸಹಾಯ ಸಮಿತಿಯನ್ನು ಮಾಡಲಿ. ಆ ರೀತಿಯಾಗಿ ಪ್ರತಿಯೊಂದು ಜಿಲ್ಲೆಯಲ್ಲೂ ಹಣ, ಹುಲ್ಲು, ಧಾನ್ಯ ಶೇಖರಣೆಯಾಗಿ ಯಾರು ಯಾರು ಕಷ್ಟಕ್ಕೆ ತುತ್ತಾಗಿದ್ದಾರೋ ಅವರಿಗೆ ಅವನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡೋಣ. ಚೀಫ್ ಮಿನಿಸ್ಟರ್ಸ್' ರಿಲೀಫ್ ಫಂಡ್ ಎಂದು ನಾನು ಏನು ಹೇಳಿದೆನೋ ಅದಕ್ಕೆ ಸಂಸ್ಥಾನದಲ್ಲಿರತಕ್ಕಂಥ ಉದಾರಮನಸ್ಕರಾದ ದಾನಿಗಳು ಕೈಲಾದಷ್ಟು ದಾನ ಮಾಡಬೇಕು ಎನ್ನುವ ಬೇಡಿಕೆಯನ್ನು ಈ ಸಭೆಯ ಮುಂದೆಯೂ ದೇಶದ ಮುಂದೆಯೂ ಈ ಮೂಲಕ ನಾನು ಇಡುತ್ತಿದ್ದೇನೆ. ಹಾಗೆಯೇ ಒದಗುವ ಧಾನ್ಯವನ್ನು ಕ್ಷಾಮಪರಿಸ್ಥಿತಿಯನ್ನು ಹತೋಟಿಗೆ ತರುವುದಕ್ಕೆ ಉಪಯೋಗಿಸೋಣ. ಇಷ್ಟೇ ಅಲ್ಲದೆ ಸರ್ಕಾರದವರು ಪಬ್ಲಿಕ್‌ವರ್ಕ್ಸ್ ಇಲಾಖೆ ಮತ್ತು ಇತರ ಕೆಲಸಕಾರ್ಯಗಳನ್ನು ಮಾಡತಕ್ಕಂಥ ಇಲಾಖೆಗಳು ಏನಿವೆಯೋ ಅವುಗಳಲ್ಲಿ ಬಡ್ಜೆಟ್ಟಿಗನುಸಾರವಾಗಿ ಇರತಕ್ಕಂಥ ಮೊಬಲಗನ್ನು ಕೂಡ ಆಯಾ ಪ್ರದೇಶಗಳಲ್ಲಿ ಖರ್ಚುಮಾಡತಕ್ಕಂಥ ವ್ಯವಸ್ಥೆಯನ್ನು ಕೂಡ ಮಾಡೋಣ. ಇಷ್ಟನ್ನು ಹೇಳಿ, ಕ್ಷಾಮಪರಿಸ್ಥಿತಿಯ ಬಿಸಿ ನಮ್ಮಗಳೆಲ್ಲರ ಮನಸ್ಸನ್ನೂ ತಟ್ಟಿದೆ. ಆದಕ್ಕೆ ನಿವಾರಣೋಪಾಯಗಳನ್ನು ಕಂಡುಹಿಡಿದು ಅನುಷ್ಠಾನಕ್ಕೆ ತರತಕ್ಕ ಪವಿತ್ರ ಕಾರ್ಯದಲ್ಲಿ ಎಲ್ಲರೂ ಶ್ರದ್ಧೆಯಿಂದ ತೊಡಗೋಣ ಎಂಬ ಪ್ರಾರ್ಥನೆಯನ್ನುಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri Mulka GOVINDA REDDY.—Sir I press the cut motion.

Mr SPEAKER.—The question is :

"That the demand be reduced to Re. 1."

The motion was negatived.

Permanent relief measures in Kolar District

Sri G. NARAYANA GOWDA (Mulbagal-Srinivasapur).—Sir, I move

"The demand under the head '54. Famine Relief' for Rs. 16,00,000 be reduced by Rs. 100 (to suggest permanent relief measures in Kolar District)."

ಸ್ವಾಮಿ, ನಮ್ಮ ಜಿಲ್ಲೆಯಲ್ಲಿ ಕ್ಷಾಮ ಆಗಾಗ್ಗೆ ತಲೆದೋರಿ ಅದರಿಂದ ಆ ಜಿಲ್ಲೆಯ ಜನಗಳಿಗೆ ಆಗುತ್ತಿರುವ ತೊಂದರೆಯನ್ನು ನಮ್ಮ ದೇಶವೇ ನೋಡುತ್ತಾ ಇದೆ. ಆ ವಿಷಯದಲ್ಲಿ ನಾನು ದೀರ್ಘವಾಗಿ ಮಾತನಾಡಬೇಕಾದ್ದಿಲ್ಲ. ಏಕೆಂದರೆ ಈಗತಾನೆ ಮಾತನಾಡಿದ ಮಾನ್ಯ ಮುಖ್ಯಮಂತ್ರಿಗಳೂ ಸಹಿತ ಈ ಕ್ಷಾಮದ ವಿಷಯದಲ್ಲಿ ತಮ್ಮ ಅನೇಕ ಸಲಹೆಗಳನ್ನು ಈ ಸಭೆಯಮುಂದೆ ಇಟ್ಟಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಈ ಕ್ಷಾಮ ಈ ವರ್ಷ ಹೆಚ್ಚಿನ ರೀತಿಯಲ್ಲಿ ಉದ್ಭವಿಸಿ ಆ ಜಿಲ್ಲೆಯ ಜನಗಳಿಗೆ ಎಷ್ಟು ಕಷ್ಟಗಳನ್ನು ಕೊಟ್ಟಿತು ಎಂಬುದನ್ನು ಸರ್ಕಾರ ಮನಗಂಡು, ತಕ್ಷಣ ಪರಿಹಾರ ಕಾರ್ಯಕ್ರಮಗಳನ್ನು ಕೈಕೊಂಡು ಜನಗಳಿಗೆ ಆ ಕಷ್ಟ

ವನ್ನು ಹೋಗಲಾಡಿಸುವುದಕ್ಕೆ ಶ್ರಮಪಟ್ಟಿದ್ದಾರೆ. ಅದಕ್ಕಾಗಿ ಆ ಜಿಲ್ಲೆಯ ಪರವಾಗಿ ನಾನು ಅವರನ್ನು ವಿನಯದಿಂದ ವಂದಿಸುತ್ತೇನೆ. ಈ ಕ್ಷಾಮ ಆಗಾಗ್ಗೆ ತಲೆದೋರುತ್ತಲೇ ಇರುತ್ತದೆ. ಏಕೆಂದರೆ ಆ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಮಳೆ ಬಹಳ ಕಡಮೆ ಬೀಳುತ್ತದೆಯೆಂಬುದು ಎಲ್ಲರಿಗೂ ತಿಳಿದ ವಿಷಯ. ತಾತ್ಕಾಲಿಕವಾಗಿ ನಾವು ಯಾವುದಾದರೂ ನಿವಾರಣೋಪಾಯಗಳನ್ನು ಮಾಡುತ್ತಾ ಬಂದು ಎಷ್ಟು ದಿನ ತಾನೆ ತಡೆಗಟ್ಟುವುದಕ್ಕೆ ಸಾಧ್ಯವಾಗಬಹುದು ಎಂಬುದನ್ನೂ ಈ ಸಭೆ ನೋಡಬೇಕಾಗಿದೆ. ಆ ಉದ್ದೇಶದಿಂದಲೇ ನಾನು ಈ ಖೋತಾ ನಿರ್ಣಯವನ್ನು ಸಭೆಯಮುಂದೆ ತಂದು ಶಾಶ್ವತವಾದ ಅಥವಾ ಖಾಯಂ ಆದ ನಿವಾರಣೋಪಾಯಗಳನ್ನು ಈ ಜಿಲ್ಲೆಗೆ ಸರ್ಕಾರದವರು ಮಾಡಿಕೊಟ್ಟರೆ ಅದರಿಂದ ಬಹಳ ಉತ್ತಮವಾದೀತು ಎಂಬ ಅಂಶವನ್ನು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ನಮ್ಮ ಜಿಲ್ಲೆಗೆ 4 ವರ್ಷಗಳಿಂದ ಸಬ್‌ಸಿಡಿ ಕೊಟ್ಟು ಅನೇಕ ಜನ ರೈತರು ಬಾವಿಗಳನ್ನು ತೋಡಿಕೊಳ್ಳಲು ಒಂದು ಸಹಾಯವನ್ನು ಮಾಡಿದ್ದೀರಿ. ಅದೇ ರೀತಿ ಈ ಸಬ್‌ಸಿಡಿಯನ್ನು ಮುಂದುವರಿಸಬೇಕು. ಮುಂದುವರಿಸಿ ರೈತನಿಗೆ ಹೆಚ್ಚಿನ ಒಂದು ಉತ್ತೇಜನ ಕೊಟ್ಟು ಈ ಬಾವಿಗಳನ್ನು ತೋಡಿಕೊಳ್ಳಲು ಸಹಾಯಮಾಡಿದರೆ ಅವನು ಅದರಿಂದ ತನ್ನ ಕಷ್ಟವನ್ನು ಸ್ವಲ್ಪವಾದರೂ ಹೋಗಲಾಡಿಸಿಕೊಳ್ಳಲು ಕಾರಣವಾಗುತ್ತದೆ. ಇದೇ ರೀತಿ ಈ ಬಾವಿಗಳಿಗೆ ನಮ್ಮ ಸರ್ಕಾರದವರು ವಿದ್ಯುಚ್ಛಕ್ತಿಯನ್ನು ಹೆಚ್ಚು ಹೆಚ್ಚು ಒದಗಿಸಿಕೊಡಲು ತಕ್ಷಣ ಪ್ರಯತ್ನಪಡಬೇಕೆಂದೂ ಸಹಿತ ಮನವಿಮಾಡಿಕೊಳ್ಳುತ್ತೇನೆ. ಏಕೆಂದರೆ ವಿದ್ಯುಚ್ಛಕ್ತಿಯ ಸಹಾಯವಿಲ್ಲದೆ ಈ ಬಾವಿಗಳಿಂದ ನೀರು ಎತ್ತುವುದು ಕಷ್ಟವಾಗುತ್ತದೆ.

ಕಡೆಯದಾಗಿ ನಮ್ಮ ಜಿಲ್ಲೆಯಲ್ಲಿ ಬೋರ್‌ವೆಲ್ಸ್ ಮಾಡಿಸಿ ಕೊಡಬೇಕೆಂದು ಅನೇಕಸಾರಿ ಜಿಲ್ಲೆಯ ಮುಖಂಡರು ಸರ್ಕಾರದವರನ್ನು ಕೇಳಿಕೊಂಡಿದ್ದೇವೆ. ಅದನ್ನು ಈಗಲೂ ನಾನು ಒತ್ತಾಯಪಡಿಸುತ್ತೇನೆ. ಏಕೆಂದರೆ, ಈ ಸಂದರ್ಭದಲ್ಲಿ ನಾನು ಒಂದು ವಿಷಯವನ್ನು ತಮ್ಮಮುಂದೆ ಇಟ್ಟರೆ ಬಹುಶಃ ಅದರಿಂದ ತಮಗೆ ಈ ಬೋರ್‌ವೆಲ್ಸ್ ನಮ್ಮ ಜಿಲ್ಲೆಯಲ್ಲಿ ಜಯಪ್ರದವಾಗಿ ಆಗುತ್ತಿದೆ ಎಂಬುದಕ್ಕೆ ಒಂದು ನಿದರ್ಶನವಾಗಬಹುದು. ಆರ್ಕಾಟ್ ಡಿಸ್ಟ್ರಿಕ್ಟಿನಲ್ಲಿ ಹೋದ ವರ್ಷ 2 ಬೋರ್‌ವೆಲ್‌ಗಳನ್ನು 4—5 ಸಾವಿರ ರೂಪಾಯಿಗಳೊಳಗೆ ಮಾಡಿಸಿರುತ್ತಾರೆ. ಒಂದೊಂದು ಬೋರ್‌ವೆಲ್ ಸುಮಾರು 60 ರಿಂದ 90 ಎಕರೆವರೆಗೂ ನೀರು ಸರಬರಾಯಿಮಾಡುತ್ತಾ ಇದೆ ಎಂದು ನನಗೆ ಖಚಿತವಾಗಿ ತಿಳಿದಿದೆ. ನಮ್ಮ ಜಿಲ್ಲೆಯಲ್ಲೂ ಬೋರ್‌ವೆಲ್ ಮಾಡುವುದಕ್ಕೆ ಪರೀಕ್ಷಿಸಿ ಒಂದುವೇಳೆ ಜಯಪ್ರದವಾಗುವ ಹಾಗಿದ್ದರೆ ನಮ್ಮ ಜಿಲ್ಲೆಗೆ ಅದರಿಂದ ಬಹಳ ಸಹಾಯವಾಗುತ್ತದೆ. ಅದಕ್ಕೆ ಸರ್ಕಾರದವರು ತಕ್ಷಣ ಪ್ರಯೋಗ ನಡೆಸಬೇಕೆಂದು ಅವರಲ್ಲಿ ಮನವಿಮಾಡಿಕೊಳ್ಳುತ್ತೇನೆ. ಹಾಗೆ ಮಾಡಿ ಖಾಯಂ ಆದ ನಿವಾರಣೋಪಾಯಗಳನ್ನು ನಮ್ಮ ಜಿಲ್ಲೆಗೆ ಮಾಡಿಕೊಟ್ಟ ಹೊರತು ನಮಗೆ ಆಗಾಗ್ಗೆ ತಲೆದೋರುವ ಕ್ಷಾಮದ ಪರಿಸ್ಥಿತಿ ಬಗೆ ಹರಿಯುವುದಿಲ್ಲ. ಅದಕ್ಕೋಸ್ಕರ ಶಾಶ್ವತವಾದ ನಿವಾರಣೋಪಾಯಗಳನ್ನು ಮಾಡಿಕೊಡಬೇಕೆಂದು ನಮ್ಮ ಸರ್ಕಾರದವರನ್ನು ಮತ್ತೊಮ್ಮೆ ನಾನು ಕೇಳಿಕೊಳ್ಳುತ್ತೇನೆ.

Mr. SPEAKER.—Cut motion moved.

"That the demand be reduced by Rs. 100."

ಶ್ರೀ ಕಡಿದಾಳ್ ಮಂಜಪ್ಪನವರು.—(ರೆವಿನ್ಯೂ ಮತ್ತು ಮರಾಮತ್ ಶಾಖೆಗಳ ಮಂತ್ರಿಗಳು.) ಅಧ್ಯಕ್ಷರೇ, ಸ್ವಾಮಿ, ಖಾಯಂ ಆಗಿ ಕ್ಷಾಮ ಬರದಂತೆ ತಡೆಗಟ್ಟುವುದಕ್ಕೆ ಕೆಲವು ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂಬ ಸೂಚನೆ ಈ ನಿರ್ಣಯದಲ್ಲಿ ಅಡಕವಾಗಿದೆ. ಈ ನಿರ್ಣಯದಲ್ಲಿರುವ ಸೂಚನೆಯ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ. ಕಳೆದ 4 ವರ್ಷಗಳಿಂದಲೂ ಕೂಡ ಕೋಲಾರ ಜಿಲ್ಲೆಯಲ್ಲಿ ಪಬ್ಲಿಕ್ ವರ್ಕ್ಸ್ ಇಲಾಖೆಯವರಿಗೆ ಸಂಬಂಧಪಟ್ಟ ಬಹಳ ಕೆಲಸಕಾರ್ಯಗಳು ನಡೆದಿವೆ. ಯಾವ ಡಿಸ್ಟ್ರಿಕ್ಟ್‌ನಲ್ಲೂ ಕೂಡ ಕೋಲಾರ ಜಿಲ್ಲೆಯಲ್ಲಿ ನಡೆದಿರುವಷ್ಟು ಕೆಲಸಕಾರ್ಯ ನಡೆದಿಲ್ಲ ಎಂದರೆ ಅತಿಶಯೋಕ್ತಿಯಾಗಲಾರದು. ಅಲ್ಲಿ ಆಗಿರತಕ್ಕ ಕೆರೆಗಳ ಜೀರ್ಣೋದ್ಧಾರ ಕಾರ್ಯ ಇನ್ನಾವ ಜಿಲ್ಲೆಯಲ್ಲೂ ಆಗಿಲ್ಲ. ಮೈಸೂರು ದೇಶದಲ್ಲಿರುವ ಎಲ್ಲಾ ಭಾಗಗಳನ್ನು ಗಮನಕ್ಕೆ ತೆಗೆದುಕೊಂಡು ಮಾತನಾಡುವುದಾದರೆ, ಬಹುಶಃ ಕೋಲಾರ ಜಿಲ್ಲೆಗೇ ಹೆಚ್ಚು ಇರಿಗೇಷನ್ ಪಂಪುಗಳನ್ನು ಕೊಟ್ಟಿದ್ದಾರೆ ಎಂದು ನಾನು ಭಾವಿಸಿದ್ದೇನೆ. ಇದು ಹಿಂದಿನ ವರ್ಷಗಳಲ್ಲಿ. ಈಗ ಸುಮಾರು 2½ ತಿಂಗಳ ಅಂದಾಜಿನಲ್ಲಿ ನಾವು ರಿಲೀಫ್ ಕಾಮಗಾರಿಗೆ 9½ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಖಾಯಂಆಗಿ ಸಹಾಯವಾಗತಕ್ಕ ಕಾರ್ಯಕ್ಕೆ ನಾವು ವಿಶೇಷವಾಗಿ ಖರ್ಚುಮಾಡಿದ್ದೇವೆ. ಅಲ್ಲಲ್ಲಿ ಕೆರೆಗಳಲ್ಲಿದ್ದ ಮಣ್ಣನ್ನು ತೆಗೆಯುವುದಕ್ಕೂ ಸ್ವಲ್ಪ ಬಾವಿಗಳನ್ನು ಆಳವನ್ನಾಗಿ ಮಾಡುವುದಕ್ಕೂ ತಕ್ಕಷ್ಟು ಹಣವನ್ನು ಖರ್ಚುಮಾಡಿದ್ದೇವೆ. ಕೆಲವು ಕಡೆಗಳಲ್ಲಿ ರಸ್ತೆ ಕಾಮಗಾರಿಗೂ ಕೂಡ ಖರ್ಚುಮಾಡಿದ್ದೇವೆ. ಆದರೆ ಒಂದಂಶವನ್ನು ಮಾತ್ರ ಶ್ರೀಮಾನ್ ನಾರಾಯಣಗೌಡರು ಗಮನಕ್ಕೆ ತೆಗೆದುಕೊಳ್ಳಬೇಕು. ಬೆಟ್ಟ ಅಗೆದು ಆಳ ತೋಡುವುದಕ್ಕೆ ಆಗುವುದಿಲ್ಲ. ಆ ಕೆಲಸ ಮಾಡುವುದರಿಂದ ಜನರಿಗೆ ಪ್ರಯೋಜನವಾದರೆ ಮಾಡುವುದಕ್ಕೆ ಸಾಧ್ಯವಾದಷ್ಟೂ ಪ್ರಯತ್ನಮಾಡುತ್ತೇವೆ.

ಆದರೆ 5 ಎಕರೆಗಳ ಸಾಗುವಳಿಗಾಗಿ 50 ಸಾವಿರ ರೂಪಾಯಿಗಳನ್ನು ಖರ್ಚುಮಾಡುವುದು ಒಳ್ಳೆಯ ತತ್ವವಲ್ಲವೆಂಬುದನ್ನು ನಾನು ಅರಿಕೆಮಾಡಿಕೊಳ್ಳುತ್ತೇನೆ.

4-30 P.M.

ಶ್ರೀ ಜಿ. ನಾರಾಯಣಗೌಡರು.—ಐದು ಎಕರೆಯಲ್ಲ. 60ರಿಂದ 90 ಎಕರೆಗಳವರೆಗೂ ಒಂದು ಬೋರ್‌ವೆಲ್ಲು irrigate ಮಾಡಬಲ್ಲದೆಂದು ತಿಳಿದಿದ್ದೇನೆ. ಬೇಕಾದರೆ ನೀವು ಆರ್ಕಾಟ್ ಡಿಸ್ಟ್ರಿಕ್ಟಿಗೆ ಬರೆದು ತಿಳಿದುಕೊಳ್ಳಬಹುದು. ಮದ್ರಾಸಿನ ಕಡೆ ಒಂದೊಂದು ಬಾವಿಯ ಸಹಾಯದಿಂದ 4,500-5,000 ಗ್ಯಾಲನ್ ನೀರು ಸಪ್ಲೈ ಆಗುತ್ತಿದೆಯೆಂದು ಗೊತ್ತಾಗಿದೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಬೋರ್‌ವೆಲ್ ಸ್ಕೀಮು ಅಷ್ಟು ಯಶಸ್ವಿಯಾಗಿ ನಡೆಯುವುದಿಲ್ಲವೆಂದು ತಿಳಿದವರು ಹೇಳುತ್ತಾರೆ. ಮೈಸೂರು ಸಂಸ್ಥಾನದಲ್ಲಿ ಎಲ್ಲಿ ಹಾಗೆ ಯಥೇಚ್ಛವಾಗಿ ನೀರು ಸಿಕ್ಕುತ್ತದೆ, ಎಲ್ಲಿ ಬೋರ್‌ವೆಲ್ ಸರಿಯಾಗಿ ಕೆಲಸಮಾಡುತ್ತದೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಎಲ್ಲಿ ನೀರು ಹೆಚ್ಚಿಗೆ ಸಿಕ್ಕುತ್ತದೆಂಬ ಭರವಸೆಯಿದೆಯೋ ಅಲ್ಲಿ ಇಂಥ ಬಾವಿಗಳನ್ನು ತೆಗೆಸುವುದಕ್ಕೆ ಪ್ರಯತ್ನಪಡುತ್ತೇವೆ.

(ಶ್ರೀ ಜಿ. ನಾರಾಯಣಗೌಡರು.)

ಈ ಸಂದರ್ಭದಲ್ಲಿ ಇನ್ನೊಂದು ಅಂಶವನ್ನು ತಿಳಿಸಲಿಚ್ಛಿಸುತ್ತೇನೆ. ಸಾರ್ವಜನಿಕರು ಸರ್ಕಾರದಿಂದ ಹೇಗೆ ಈ ರೀತಿ ಸಹಾಯವನ್ನು ಅಪೇಕ್ಷಿಸುತ್ತಾರೋ ಹಾಗೆಯೇ ಅವರೂ ತಮ್ಮ ಪಾಲಿನ ಕೆಲಸವನ್ನು ಸರಿಯಾಗಿ ಮಾಡಬೇಕು. ಕೋಲಾರ ಡಿಸ್ಟ್ರಿಕ್ಟಿನಲ್ಲಿ ಸಬ್ಸಿಡಿ ಕೊಟ್ಟು ಅನೇಕ ಕಡೆ ಇರಿಗೇಷನ್ ಬಾವಿಗಳನ್ನು ತೋಡಿಸಿದ್ದೇವೆ. ಆದರೆ ಇಂದು ಅಲ್ಲೇನು ಮಾಡುತ್ತಿದ್ದಾರೆ! ಬಾವಿಗಳಿರತಕ್ಕ ಈ ಪ್ರದೇಶಗಳಲ್ಲಿ ಹೊಗೆ ಸೊಪ್ಪು ಆಲೂಗೆಡ್ಡೆ ಮುಂತಾದ ವ್ಯಾಪಾರದ ಬೆಳೆಗಳನ್ನು ಹಾಕುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಆದ್ದರಿಂದ ಈ ವಿಷಯದಲ್ಲಿ ಸಾರ್ವಜನಿಕರೂ ಸಹ ದೇಶಾಭಿಮಾನದಿಂದ ವರ್ತಿಸಬೇಕೆಂದು ಹೇಳುತ್ತೇನೆ.

ಶ್ರೀ ಬಿ. ವಿ. ನಾರಾಯಣರೆಡ್ಡಿಯವರು (ಬಾಗೇಪಲ್ಲಿ ಗುಡಿಬಂಡೆ).—ಬೋರ್‌ವೆಲ್‌ಗಳನ್ನು ಖಾಸಗಿ ಸಂಸ್ಥೆಗಳಿಗೂ ಕೊಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ದುಡ್ಡು ಕಟ್ಟಬೇಕು.

ಆದ್ದರಿಂದ ಸಾಧ್ಯವಿರುವ ಮಟ್ಟಿಗೂ ಖಾಯಂ ಫಲದಾಯಕವಾದ ಕೆಲಸ ಕಾರ್ಯಗಳನ್ನು ನಡೆಸುವುದಕ್ಕೆ ಪ್ರಯತ್ನಪಡುತ್ತೇವೆಂದು ನಾನು ಭರವಸೆ ಕೊಡಬಲ್ಲೆ. ಈ ಭರವಸೆಯ ಮೇಲೆ ಮಾನ್ಯ ಸದಸ್ಯರು ತಮ್ಮ ಖೋತಾ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

Mr. G. NARAYANA GOWDA.—I beg leave to in withdraw my cut motion.

The cut motion was, by leave, withdrawn.

Extending Famine Relief works to Turuvekere, Chicknaikanhalli and Tiptur Taluks.

ಶ್ರೀ ಬಿ. ಹುಚ್ಚೇಗೌಡರು (ತುರುವೇಕೆರೆ).—Sir I move.

"That the demand under the head '54. famine relief" for Rs. 16,00,000 be reduced by Rs. 100 (to raise a debate on the urgent necessity of extending famine relief works to Turuvekere, Chicknaikanhalli and Tiptur Taluks")

ಸ್ವಾಮಿ, ನಮ್ಮ ತುಮಕೂರು ಡಿಸ್ಟ್ರಿಕ್ಟೂ ಸಹ ಕ್ಷಾಮದ ಬಾಧೆಗೆ ಸಿಕ್ಕಿ ಪರಿತಪಿಸುತ್ತಿದೆಯೆಂದು, ಈ ಸಭೆಯಲ್ಲಾಗಲೇ ಈ ವಿಷಯವನ್ನು ತಿಳಿಯಪಡಿಸಿದ್ದೇನೆ. ಆದರೆ ಮಧುಗಿರಿ ಸಬ್‌ಡಿವಿಜನ್‌ನಲ್ಲಿ ನಾಲ್ಕು ತಾಲ್ಲೂಕುಗಳು, ತುಮಕೂರು ತಾಲ್ಲೂಕು, ಗುಬ್ಬಿಯಲ್ಲಿ ಕೊಂಚೆ ಕೊಂಚೆ ಭಾಗ ಇವಿಷ್ಟಕ್ಕೆ ಮಾತ್ರ ಸ್ವಲ್ಪ ಮಟ್ಟಿಗೆ ರಿಲೀಫ್ ಕಾಮಗಾರಿಗಳನ್ನು ಏರ್ಪಡಿಸಲಾಗಿದೆ. ತಿಪಟೂರು ಸಬ್‌ಡಿವಿಜನ್, ಚಿಕ್ಕನಾಯ್ಕನಹಳ್ಳಿ, ತುರುವೇಕೆರೆ ಇವುಗಳೂ ಹಾಗೆಯೇ ಕ್ಷಾಮಪೀಡಿತವಾಗಿದ್ದರೂ ಅಲ್ಲಿಗೆ ಕ್ಷಾಮನಿವಾರಣೆಗಾಗಿ ಏನೊಂದು ಸಹಾಯವನ್ನಾಗಲಿ, ಏನಾದರೂ ರಿಹೇರಿ ಕೆಲಸಗಳನ್ನು ಕೈಕೊಳ್ಳುವುದಾಗಲಿ ಮಾಡಿಲ್ಲ. ಅವರಲ್ಲೂ ನಮ್ಮ ತುರುವೇಕೆರೆ ತಾಲ್ಲೂಕು ನೋಡುವುದಾದರೆ, ಅಲ್ಲಿನ ಕೆಲವು ಕೆರೆಗಳಲ್ಲಿ ನೀರೆಂಬುದೇ ಇಲ್ಲ. ಮಲ್ಲಘಟ್ಟದ ಕೆರೆ ತುಂಬಿ 8 ವರ್ಷವಾಯಿತು; ತಿಪಟೂರಿನ ನೊಣವಿನ ಕೆರೆಯಲ್ಲಿ ಕುಡಿಯುವುದಕ್ಕೂ ನೀರಿಲ್ಲ; ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಅನೇಕ ಕೆರೆಗಳು ಬತ್ತಿಹೋಗಿವೆ. ಟೆಂಪೊರರಿ ಬಾವಿಗಳೆಂದು ಸರ್ಕಾರದವರು ಕೆಲವು ಕಡೆ ತೆಗೆಯಿಸುವ ಏರ್ಪಾಡು ಮಾಡಿದ್ದಾರೆ. ಅವುಗಳನ್ನೂ ಕೂಡ ಹಳ್ಳಗಳನ್ನು ಹುಡುಕಿಕೊಂಡು ಹೋಗಿ ಅಲ್ಲಿ ಎರಡು ಮೂರು ಆಳುದ್ದ ತೋಡಿಬಿಟ್ಟು ಬಿಟ್ಟಿದ್ದಾರೆ. ಅವು ಈಗಾಗಲೇ ಬಿದ್ದು ಮುಚ್ಚಿಹೋಗುವ ಸ್ಥಿತಿಗೆ ಬಂದಿವೆ. ಖಾಯಂ ಬಾವಿಗಳ ವಿಷಯದಲ್ಲೂ ಸಹ ಅವಕ್ಕೆ ಸರಿಯಾದ ಕಲ್ಲುಕಟ್ಟಡ ಕಟ್ಟಿಸದೆ ಹೋಗಿ ಬೀಳುವಂತಾಗಿವೆ. ಈ ಎಲ್ಲಾ ಕಷ್ಟಗಳಿಗಿಂತಲೂ ಹೆಚ್ಚಾಗಿ ಅಲ್ಲಿನ ದನಗಳ ಮೇವಿನ ಕಷ್ಟವನ್ನು ಹೇಳಿ ತೀರದು. ಒಂದು ವ್ಯಾಗನ್ ಹುಲ್ಲು ಕಳುಹಿಸಿದರೆ ಅಲ್ಲಿ ಬಂದು ನಿಂತಿರತಕ್ಕ ಗಾಡಿಗಳಲ್ಲಿ ಅರ್ಧಕ್ಕೆ ಸಾಕಾಗುವುದಿಲ್ಲ! ಅಷ್ಟು ಗಾಡಿಗಳು ಹುಲ್ಲಿಗಾಗಿ ಬಂದು ನಿಂತಿರುತ್ತವೆ. ಚಿಕ್ಕನಾಯ್ಕನಹಳ್ಳಿ, ತುರುವೇಕೆರೆ, ಎಲ್ಲಾ ಕಡೆಗೂ ಹುಲ್ಲು ಗಾಡಿಗಳಲ್ಲಿ ನಿತ್ಯವೂ ಹೋಗಬೇಕು. ಈಚೆಗೆ ಈ ವ್ಯಾಗನ್ ಬರುವುದೂ ನಿಂತುಹೋಗಿದೆ. ಇದುವರೆಗೂ ಅಲ್ಲಿನ ಜನರಿಗೆ ಅಷ್ಟೇನೂ ಗಾಬರಿಯಿರಲಿಲ್ಲ. ಆದರೆ ಇತ್ತೀಚೆಗೆ ಮಳೆ ಯಾವಾಗ ಬರಲಿಲ್ಲವೋ, ಹುಲ್ಲಿಗಾಗಿ ದೇಶ ದೇಶ ತಿರುಗುತ್ತಿದ್ದಾರೆ. ಹುಲ್ಲು ಸಿಕ್ಕದೆ ಈಚಲು ಗರಿಗಳನ್ನು ತಂದು ಹಾಕುತ್ತಿದ್ದಾರೆ. ಪ್ರಾಣಾಧಾರಕ್ಕೇನೋ ದನಗಳು ತಿನ್ನಬಹುದು, ಆದರೆ ಹೀಗೆ 2-3 ತಿಂಗಳು ತಿಂದರೆ ಅವು ಉಳಿಯುತ್ತವೆಯೇ? ಈಗಾಗಲೇ ಅನೇಕ ದನಗಳನ್ನು ಬೇರೆ ಕಡೆಗಳಿಗೆ ಕಳುಹಿಸಿಬಿಟ್ಟಿದ್ದಾರೆ. ಕೇವಲ ಬೇಸಾಯದ ಎತ್ತುಗಳನ್ನು ಉಳಿಸಿಕೊಂಡಿದ್ದಾರೆ ಅಷ್ಟೆ. ಈಚೆಗೆ ಆ ಕಡೆ ಬರುತ್ತಿದ್ದ ಒಂದು ವ್ಯಾಗನ್ನು ಕೂಡ ನಿಂತು ಹೋಗಿ, ಈಗ ಈ ಎತ್ತುಗಳನ್ನು ಸಾಕುವುದಕ್ಕೂ ಗತಿಯಿಲ್ಲದಂತಾಗಿದೆ; ಅವಕ್ಕೂ ಹುಲ್ಲಿಲ್ಲ; ಸೊಪ್ಪು ಸದೆ ತಿನ್ನಿಸುತ್ತಿದ್ದಾರೆ. ಅಲ್ಲಿನ ಕೆರೆಗಳಿಗೆ ಖಾಯಂ ಆಗಿ ನೀರಿನ ಆಧಾರವಿರುವಂತೆ ಮಾಡಬೇಕೆಂದು ನಾವು ಸುಮಾರು 20-30 ವರ್ಷಗಳಿಂದಲೂ ಹೇಮಾವತಿ ನದಿಗೆ ಗೊರೂರಿನ ಹತ್ತಿರ ಅಣೆಕಟ್ಟು ಕಟ್ಟಿ, ಅಲ್ಲಿನ ನೀರನ್ನು ಈ ತಾಲ್ಲೂಕಿನ ಕೆರೆಗಳಿಗೆ ಒದಗಿಸಬೇಕೆಂದು ಹೇಳುತ್ತಲೇ ಬಂದಿದ್ದೇವೆ. ಇಷ್ಟು ದಿವಸಗಳಾದರೂ ಮಾಡಿಲ್ಲ. ಇದರಿಂದ ವರ್ಷೇ ವರ್ಷೇ ಕ್ಷಾಮಕ್ಕೆ ನಮ್ಮ ಡಿಸ್ಟ್ರಿಕ್ಟಿನ ತಾಲ್ಲೂಕುಗಳು ಸಿಕ್ಕುತ್ತಿವೆ. ನಿನ್ನೆ ಮೊನ್ನೆ ಒಂದು ಪ್ರಶ್ನೆಗೆ ಉತ್ತರ ಹೇಳುತ್ತಾ, ನಮ್ಮ ತಾಲ್ಲೂಕಿನಲ್ಲಿ 15 ಇಂಚುಗಳಷ್ಟು ಮಾತ್ರ ಮಳೆಯಾಗಿದೆಯೆಂದು ಹೇಳಿದ್ದಾರೆ. ಇಷ್ಟಾದರೂ ನಮ್ಮ ಕಡೆಗೇನೂ ಪರಿಹಾರ ನೀಡಿಲ್ಲ. ನಾವು ಗಲಾಟೆ ಮಾಡಲಿಲ್ಲ, ಆದ್ದರಿಂದ ಕೊಡಲಿಲ್ಲವೆಂದು ಹೇಳಬಹುದು. ಗಲಾಟೆ ಮಾಡದಿರುವುದು ನಮ್ಮ ತಪ್ಪಿರಬಹುದು. ನಾವು ಅಷ್ಟು ಗಲಾಟೆ ಮಾಡದಿದ್ದರೂ ಅಲ್ಲಿರುವ ವಾಸ್ತವ ಸ್ಥಿತಿಯನ್ನು ಎಷ್ಟರಮಟ್ಟಿಗೆ ಒತ್ತಾಯವಾಗಿ ಹೇಳಬಹುದೋ ಅಷ್ಟೂ ಹೇಳಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು, ರೆವಿನ್ಯೂ ಮಂತ್ರಿಗಳು ಮತ್ತು ಇತರರು ನಮ್ಮ ಕಡೆ ಪ್ರವಾಸ ಬಂದಾಗ ಅಲ್ಲಿನ ಸ್ಥಿತಿಗತಿಗಳನ್ನು ಅರಿಕೆ ಮಾಡಿಕೊಂಡಿದ್ದೇವೆ. ಆದ್ದರಿಂದ ನಾನು ಹೆಚ್ಚಾಗಿ ಹೇಳಬೇಕಾಗಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ನಮ್ಮ ಡಿಸ್ಟ್ರಿಕ್ಟಿನಲ್ಲಿ ಮುಕ್ಕಾಲು ಭಾಗ ಕುಣಿಗಲ್ ತಾಲ್ಲೂಕಿ

ನಲ್ಲಿ ಮಾರ್ಕೋನಹಳ್ಳಿ ಇರುವುದರಿಂದ ಅಲ್ಪ ಸ್ವಲ್ಪ ಪರವಾಗಿಲ್ಲ. ಅದು ಬಿಟ್ಟು ಉಳಿದ ಎಲ್ಲಾ ಕಡೆಗಳಲ್ಲೂ ಒಂದು ಬಾವಿಯಲ್ಲೂ ನೀರಿಲ್ಲ, ಕಪಿಲೆ ಬಾವಿಗಳೆಲ್ಲಾ ಒಣಗಿ ಹೋಗಿವೆ. ಎಲ್ಲಕ್ಕಿಂತ ಹೆಚ್ಚಾಗಿ ದನಗಳ ಗತಿ ಮುಂದೇನು ಎಂದು ಜನ ಪರಿತಪಿಸುತ್ತಿದ್ದಾರೆ. ದನಗಳು ಹೋಗಿಬಿಟ್ಟರೆ ರೈತರ ಗತಿ ಏನು? ಇದು ಮುಖ್ಯವಾದುದು. ಈ ಖೋತಾ ನಿರ್ಣಯವನ್ನು ಕುರಿತು ನಾನು ಮಾತನಾಡಿದ ಉದ್ದೇಶ ಮುಖ್ಯವಾಗಿ ಅತಿ ಜರೂರಾಗಿ ಅಲ್ಲಿನ ಹುಲ್ಲಿನ ಸಮಸ್ಯೆಯನ್ನು ಸರ್ಕಾರದವರು ಪರಿಹರಿಸಬೇಕು ಎಂದು. ಒಂದು ಮಳೆ ಬಂದರೆ ಪಸಲು ಬರುವಂಥ ಗದ್ದೆಗಳೆಲ್ಲಾ ಆಗಲೇ ಹೋದುವು. ಅವು ಹೋದರೂ ರೈತರು ಅಷ್ಟು ಚಿಂತಿಸುತ್ತಿಲ್ಲ. ವ್ಯವಸಾಯಕ್ಕೆ ಆಧಾರವಾದ ಎತ್ತುಗಳನ್ನು ಉಳಿಸಿಕೊಳ್ಳಬೇಕಾದದ್ದು ಅವರಿಗೆ ಮುಖ್ಯ. ಹಸುಗಳನ್ನೂ ಎಮ್ಮೆಗಳನ್ನೂ ಉಳಿಸಿಕೊಳ್ಳಬೇಕೆನ್ನುವ ಕಾಲ ಹೋಯಿತು! ಆದ್ದರಿಂದ ಎಷ್ಟೇ ಕಷ್ಟವಾದರೂ, ರೈಲ್ವೆ ಅನಾನುಕೂಲ ಏನೇ ಇದ್ದರೂ ಆ ಕಷ್ಟವನ್ನು ನಿವಾರಣೆ ಮಾಡಬೇಕು. ಹುಲ್ಲನ್ನು ಸಪ್ಲೈ ಮಾಡುವುದಕ್ಕೆ ನಾಳೆಯಿಂದಲೇ ಏರ್ಪಾಡು ಮಾಡುವುದು ಅಗತ್ಯವೆಂದು ಹೇಳಿ, ನಾನು ಈ ಖೋತಾ ನಿರ್ಣಯವನ್ನು ಸಭೆಯ ಮುಂದಿಡುತ್ತೇನೆ.

Mr. SPEAKER.—Cut motion moved.

"That the demand be reduced by Rs. 100."

ಶ್ರೀ ಕಡಿದಾಳ್ ಮಂಜಪ್ಪನವರು.—ಅಧ್ಯಕ್ಷರೆ, ಸ್ವಾಮಿ, ಮೈಸೂರು ಸಂಸ್ಥಾನದ ಮೂರನೆಯ ಒಂದು ಭಾಗದಷ್ಟು ಪ್ರದೇಶದಲ್ಲಿ ಈ ಹೊತ್ತು ಅಭಾವ ಪರಿಸ್ಥಿತಿ ಉದ್ಭವವಾಗಿದೆ. ಪ್ರಾರಂಭದಲ್ಲಿ ಮೇ ತಿಂಗಳ ಅಂತ್ಯದೊಳಗೆ ಮಳೆಚೆನ್ನಾಗಿ ಬಂದು ಪರಿಸ್ಥಿತಿ ಸುಧಾರಿಸಬಹುದೆಂದು ತಿಳಿದುಕೊಂಡಿದ್ದೆವು. ಆದರೆ ನಮ್ಮ ದೌರ್ಭಾಗ್ಯದಿಂದ ಸಂಸ್ಥಾನದ ಬಹು ಭಾಗದಲ್ಲಿ ಮಳೆಯಾಗದೆ ಪರಿಸ್ಥಿತಿ ಚಿಂತಾಜನಕವಾಗಿದೆ. ಮಲೆನಾಡು ಪ್ರದೇಶದಲ್ಲಿಯೂ ಕೂಡ ಮಳೆ ಬಂದಿಲ್ಲವೆಂದು ನಮಗೆ ಬಂದಿರುವ ವರದಿಯಿಂದ ವ್ಯಕ್ತವಾಗುತ್ತದೆ. ಸಂಸ್ಥಾನದ ಅನೇಕ ಭಾಗಗಳಲ್ಲಿ ಹುಲ್ಲಿನ ಅಭಾವ ಎದ್ದು ಕಾಣುತ್ತಿದೆ. ಮಳೆ ಬಂದಿದ್ದರೆ ಹುಲ್ಲಿಗೆ ಇಷ್ಟು ಅಭಾವವಿರುತ್ತಿರಲಿಲ್ಲ. ಹುಲ್ಲನ್ನು ಆ ಪ್ರದೇಶಗಳಿಗೆ ಸಾಗಿಸಲು ಇರುವ ಒಂದೇ ತೊಂದರೆಯೆಂದರೆ ವಾಹನ ಅಭಾವ, ರೈಲ್ವೆ ಸೌಕರ್ಯದ ಅಭಾವ. ರೈಲ್ವೆ ಇಲಾಖೆಯವರು ಕೆಲವು ಕಾಲ 30 ವ್ಯಾಗನ್‌ಗಳನ್ನು ಕೊಡುತ್ತಿದ್ದರು. ಈಚೆಗೆ ಏನೋ ತೊಂದರೆಯಿಂದ ವ್ಯಾಗನ್‌ಗಳ ಸಂಖ್ಯೆಯನ್ನು ಕಡಮೆಮಾಡಿದರು. ಆದಕಾರಣ ನಾವು ಎಷ್ಟು ಜಾಗ್ರತೆ ಹುಲ್ಲನ್ನು ಸಾಗಿಸಬೇಕೆಂಬ ಆಸೆಯನ್ನಿಟ್ಟುಕೊಂಡಿದ್ದೆವೋ ಅಷ್ಟು ಜಾಗ್ರತೆ ಸಾಗಿಸುವುದಕ್ಕೆ ಸಾಧ್ಯವಾಗಲಿಲ್ಲ. ಪುನಃ ದಿನಕ್ಕೆ 30 ವ್ಯಾಗನ್ನುಗಳಂತೆ ಹುಲ್ಲು ಸಾಗಿಸುವುದಕ್ಕೆ ನಮಗೆ ಕೊಡುವುದಾಗಿ ತಿಳಿಸಿದ್ದಾರೆ. ಇದೂ ಅಲ್ಲದೆ ಶ್ರೀಮಾನ್ ಚೆಂಗಲರಾಯ ರೆಡ್ಡಿಯವರು ನಮಗೆ ಕಾಗದ ಬರೆದಿದ್ದಾರೆ. ರೈಲ್ವೆ ಇಲಾಖೆಯೊಡನೆ ಅವರು ಮಾತನಾಡಿದ್ದಾರೆ, ಹಾಗೂ ಸಾಧ್ಯವಾದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ವ್ಯಾಗನ್ನುಗಳನ್ನೊದಗಿಸುವುದಕ್ಕೆ ಪ್ರಯತ್ನಮಾಡುತ್ತಿರುವುದಾಗಿ ತಿಳಿಸಿದ್ದಾರೆ. ಆದರೆ ಎಷ್ಟು ಒದಗಿಸುವುದಕ್ಕೆ ಸಾಧ್ಯ ಎಂಬುದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ತುಮಕೂರು ಜಿಲ್ಲೆಗೆ ಇದುವರೆಗೆ ಸುಮಾರು 307 ಟನ್ ಬತ್ತದ ಹುಲ್ಲನ್ನು ಒದಗಿಸಿದ್ದೇವೆ. ನಮಗೆ ವಾಹನ ಸೌಕರ್ಯವಿದ್ದರೆ ಎಷ್ಟು ಪ್ರಮಾಣದಲ್ಲಿ ಬೇಕಾದರೂ ಎಷ್ಟು ಅವಶ್ಯಕತೆಯಿದೆಯೋ ಅಷ್ಟನ್ನೂ ಒದಗಿಸುತ್ತೇವೆಂದು ಅರಿಕೆಮಾಡುತ್ತೇನೆ.

ಶ್ರೀ ಬಿ. ಹುಚ್ಚೇಗೌಡರು.—ವಾಹನ ಸೌಕರ್ಯ ಅಡ್ಡ ಬಂದಲ್ಲಿ ದನಗಳು ಸತ್ತುಹೋಗುತ್ತವಲ್ಲ?

ಶ್ರೀ ಕಡಿದಾಳ್ ಮಂಜಪ್ಪನವರು.—ಮಂಡ್ಯದಿಂದ ಹುಲ್ಲನ್ನು ತಲೆ ಹೊರೆಯಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ, ಗಾಡಿಯಲ್ಲಿ ಸಾಗಿಸಲು ಸಾಧ್ಯವಿಲ್ಲ. ಲಾರಿಗಳಲ್ಲಿ ಸಾಗಿಸಲು ಪ್ರಯತ್ನಪಟ್ಟರು; ಆದರೆ ಬಾಡಿಗೆಯೇ ಅದರ ನಾಲ್ಕೈದರಷ್ಟಾಗುತ್ತದೆ.

Sri B. HUTCHE GOWDA.—Are not the Railways yours?

Sir Kadidal MANJAPPA.—It is not of the State Government.

Janab J. MOHAMED IMAM.—As Indians, it is ours; as Mysoreans, it is not ours.

ಶ್ರೀ ಕಡಿದಾಳ್ ಮಂಜಪ್ಪನವರು.—ನಮ್ಮ ಕಷ್ಟವನ್ನು ಗಮನಕ್ಕೆ ತೆಗೆದುಕೊಂಡು ಬೆಂಗಳೂರಿನಲ್ಲಿ ಹ್ಯಾರಿ ಫರ್ಗೂಸನ್ ಕಂಪೆನಿಯವರು ನಾಲ್ಕು ಟ್ರ್ಯಾಕ್ಟರ್ ಟ್ರೇಲರ್‌ಗಳನ್ನು ಅವರ ಸ್ವಂತ ಖರ್ಚಿನ ಮೇಲೆ ಹುಲ್ಲನ್ನು ಸಾಗಿಸುವ ಬಗ್ಗೆ ನಮಗೆ ಕೊಟ್ಟಿದ್ದಾರೆ.

ಜನಾಬ್ ಜೆ. ಇಮಾಂರವರು.—ಹಾಗೆಯೇ ಮುಫತ್ತಾಗಿ ಕೊಟ್ಟಿದ್ದಾರೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಹೌದು. ಇದಕ್ಕಿಂತ ನಾವು ಇನ್ನೇನುಮಾಡುವುದು ಸಾಧ್ಯ ಎಂಬುದನ್ನು ಮಾನ್ಯ ಸದಸ್ಯರು ಸೂಚಿಸಿದರೆ ಅದರಂತೆ ನಡೆಯುತ್ತೇವೆ.

ಶ್ರೀ ಬಿ. ವಿ. ನಾರಾಯಣ ರೆಡ್ಡಿಯವರು.—ಒಂದು ಸಮಿತಿಯನ್ನು ನೇಮಕಮಾಡಿ, ನಾವು ಸಲಹೆ ಕೊಡುತ್ತೇವೆ.

Janab J. MOHAMED IMAM.—Do not feel helpless.

ಶ್ರೀ ಕಡಿದಾಳ್ ಮಂಜಪ್ಪನವರು.—We are not felt helpless. We have faced the situation boldly. We have not been lacking in our attempt to solve this problem. ಈ ವಿಚಾರದಲ್ಲಿ we have lacked in alertness ಎಂದು ಹೇಳುತ್ತಾರೆ. ನಾವು ಏನೇನು ಮಾಡಿದ್ದೇವೆಂಬ ಬಗ್ಗೆ ಒಂದು ಗಂಟೆಯ ಕಾಲ ಅಂಕಿ ಅಂಶಗಳನ್ನು ಕೊಡಬಲ್ಲೆ. ಆದರೆ ಈ ಖೋತಾ ಸೂಚನೆಯ ಸಂಬಂಧವಾಗಿ ಈ ವಿವರಗಳನ್ನೆಲ್ಲಾ ಕೊಡುವ ಪ್ರಮೇಯವಿಲ್ಲ. ನಾವು ಕೈಲಾದಮಟ್ಟಿಗೂ ಹುಲ್ಲನ್ನೊದಗಿಸುವುದಕ್ಕೆ ಪ್ರಯತ್ನಪಡುತ್ತೇವೆ. ಅಲ್ಲದೆ ಮಾನ್ಯ ಸದಸ್ಯರ ಸ್ವಂತ ತಾಲ್ಲೂಕಾದ ತುರುವೇಕೆರೆ ತಾಲ್ಲೂಕಿಗೆ ಆರು ಸಾವಿರ ಚಿಲ್ಲರೆ ರೂಪಾಯಿಗಳಷ್ಟು ಕಂದಾಯ ರಿಯಾಯಿತಿ ಮಾಡಿದ್ದೇವೆ. ತಿಪಟೂರು ತಾಲ್ಲೂಕಿಗೆ ಐದು ಸಾವಿರ ಚಿಲ್ಲರೆ ರಿಯಾಯಿತಿ ಕೊಟ್ಟಿದ್ದೇವೆ. ಚಿಕ್ಕನಾಯಕನಹಳ್ಳಿ ತಾಲ್ಲೂಕಿಗೆ ಸುಮಾರು ಎಂಟೂವರೆ ಸಾವಿರ ರೂಪಾಯಿ ಕಂದಾಯ ರಿಯಾಯಿತಿ ಮಾಡಿದ್ದೇವೆ. ಆಹಾರ ಧಾನ್ಯಗಳನ್ನು ಎಲ್ಲಿ ಸಾಧ್ಯವೋ ಅಲ್ಲಿ ಇಟ್ಟಿದ್ದೇವೆ. ನನಗೆ ಬಂದಿರುವ ವರದಿಯ ಪ್ರಕಾರ ತುಮಕೂರು ಜಿಲೆಯ ಮುಖ್ಯ ಸಮಸ್ಯೆ ನೀರು ಮತ್ತು ಹುಲ್ಲು. ಹುಲ್ಲನ್ನು ಎಷ್ಟು ಸಾಧ್ಯವೋ ಅಷ್ಟನ್ನು ಒದಗಿಸುವುದಕ್ಕೆ ಪ್ರಯತ್ನಪಡುತ್ತೇವೆ.

Sri B. HUTCHE GOWDA.—I beg leave to withdraw my cut motion.

The cut motion was, by leave, withdrawn.

Providing Relief to the distress areas in Mysore District.

Sri M. LINGANNA (Nanjangud).— Sir, I move:

"That the Demand under the head "54. Famine Relief" for Rs. 16,00,000 be reduced by Rs. 100 (to bring to the notice of the Government the necessity of giving immediate relief to the distress areas in Mysore District)."

Sir, I am glad that the Government of Mysore is facing this huge problem with courage, the one problem which they had to face the very moment they stepped into power. I congratulate them on their boldness. My submission is that they should grow still bolder because other parts of the State are also coming into the fold of this disease, if I were to say that word—'famine'. Sir, the other day I had the opportunity of bringing to the notice of the Government that there were certain lapses on the part of the old Ministry in regard to the land revenue remissions in Mysore District. Sir, by this cut motion, I want to bring to the notice of the Hon'ble Minister concerned the gravity of the situation so far as Mysore District is concerned. I do concede the point that the Districts like Kolar, Tumkur and Chitaldrug deserve their attention. But at the same time, I say that Mysore District also deserves their attention equally well. I am receiving letters not merely from Nanjangud Taluk but from taluks like Gundlupet, Chamarajanagar and Yalandur that the crops have completely failed. The jola crop that was sown here and there in several parts of the District have all withered away. Sir, it was also brought to the notice of this House by the Hon'ble Chief Minister of the Mysore Government that the rate of the foodgrains has risen in Mysore District and that is the reason why the poor man has already become unable to purchase foodgrains, and due to lack of rain, fodder that was the main subsistence of the animal kingdom, also has failed this time.

I may mention here that the Gundlupet Taluk, which we consider as part and parcel of the Malnad, is unable to provide the animals sufficient quantity of fodder. So also in some parts of Yalandur. I know full well that the jola grains could not be sown as rains did not come in proper time and in Chamarajanagar Taluk, Chandavadi hobli no grains have been sown and in other parts where we had little hopes of good crops, some hopes of getting certain percentage of crops, there also crops have failed and this situation which is nothing but a continuation of the situation which we had to face some two or three years ago, is going to be a huge problem. Now I must humbly submit to the Minister concerned that immediate relief to this part of Mysore District should be rushed in. Otherwise, the people in this particular area will be hit hard. I do not know so well in regard to the other taluks and perhaps they are also feeling the same difficulty so far as foodgrains and fodder are concerned. Immediate relief should be rushed to these parts also. I am glad the Government have decided that District Committees should be formed. Before these Committees are constituted and before these Committees begin to function, I humbly submit that the Minister concerned will do well to visit these parts and give the necessary aid. The problem that we are facing in Kolar which, I believe, was due to our slackness, has assumed an immense size and it looks so bad that it will not be possible for us to circumvent this particular food problem in Kolar District. If the Mysore District also were to be left to itself and without proper aid being given at proper time, I believe that this problem in this particular area also may go out of our hands. What I submit through this cut motion to the Minister concerned is that as and when this particular problem arises in the State it should be properly tackled at the initial stage. Otherwise, it will grow

to such a size that we will not be able to cope with it and we may have to incur the displeasure of the people. I believe nearly Rs. 15 lakhs have been allocated for this purpose, as I gather from the Press, and I do not know what portion of the amount is being granted to the Mysore District. I am not quarrelling over the amount that is being apportioned to the Mysore District. But what I am anxious about is that the Government should pay its attention towards the Mysore District and its problems so far as the relief work is concerned. With these few words, I commend this cut motion for the consideration of this House.

Mr. SPEAKER.—Cut motion moved:

"That the demand be reduced by Rs 100."

ಶ್ರೀ ಕಡಿದಾಳ್ ಮಂಜಪ್ಪನವರು.—ಅಧ್ಯಕ್ಷರೆ, ಸ್ವಾಮಿ, ಈ ಖೋತಾ ನಿರ್ಣಯವನ್ನು ತಂದಿರತಕ್ಕ ಶ್ರೀ ಎಂ. ಲಿಂಗಣ್ಣನವರು ಕೇವಲ ನನ್ನ ಹಳೆಯ ಸ್ನೇಹಿತರು. ನನ್ನನ್ನು ಪದೇ ಪದೇ ಅವರ ಜಿಲ್ಲೆಗೆ ಅಂದರೆ ಮೈಸೂರು ಡಿಸ್ಟ್ರಿಕ್ಟ್‌ಗೆ ಬರಬೇಕೆಂದು ಆಹ್ವಾನಕೊಡುತ್ತಿದ್ದಾರೆ. ಸಾಧ್ಯವಾದಷ್ಟು ಜಾಗ್ರತೆ ಮೈಸೂರು ಜಿಲ್ಲೆಗೆ ಬರುತ್ತೇನೆಂಬ ಭರವಸೆಯನ್ನೇನೋ ಕೊಡುತ್ತೇನೆ. ಆದರೆ ತಕ್ಷಣಕ್ಕೆ ತಾವು ಕೇಳುವಂಥ ಸಹಾಯ ನೀಡುತ್ತೇನೆಂಬುದನ್ನು ಮಾತ್ರ ನಾನು ಖಚಿತವಾಗಿ ತಿಳಿಸಲಾರೆ. ಕೈಲಾದ ಸಹಾಯಗಳನ್ನು ಮಾಡಬಹುದು. ಮಳೆಯಿಲ್ಲದೆ ಅನೇಕ ಕಡೆ ಬೆಳೆ ಹೋಗಿರತಕ್ಕ ವಿಚಾರ ತಿಳಿದು ಬರುತ್ತಿದೆ. ಶಿವಮೊಗ್ಗ ಜಿಲ್ಲೆಯಲ್ಲೂ ಕೂಡ ಮಳೆಯ ಅಭಾವ ಪೂರಾ ಉಂಟಾಗಿರುತ್ತೆಂದು ನನಗೆ ತಿಳಿಯ ಬಂದಿದೆ. ಶಿವಮೊಗ್ಗ ಜಿಲ್ಲೆಯಲ್ಲೂ ಸಹ ಜನರಿಗೂ ದನಗಳಿಗೂ ಕುಡಿಯುವ ನೀರು ಮೊದಲುಗೊಂಡು ಎಲ್ಲಕ್ಕೂ ಬಹಳ ಕಷ್ಟವುಂಟಾಗಿದೆಯೆಂದೂ ಮತ್ತು ಕುಡಿಯುವ ನೀರನ್ನು 3 ಮೈಲಿ ಫಾಸಲೆಯಿಂದ ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ಗ್ರಾಮದವರು ತರುತ್ತಿದ್ದಾರೆಂದೂ ಮೊನ್ನೆ ತಾನೆ ಅಲ್ಲಿಂದ ಬಂದಿದ್ದವರೊಬ್ಬರು ತಿಳಿಸಿದರು. ಆದ್ದರಿಂದ ಇಂಥ ವಿಷಮ ಪರಿಸ್ಥಿತಿ ಮೈಸೂರೊಂದಕ್ಕೇ ಬಂದಿಲ್ಲ. ಈ ಸಮಸ್ಯೆ ಸಂಸ್ಥಾನದ ನಾನಾ ಭಾಗಗಳಲ್ಲೂ ತಲೆದೋರಿರುತ್ತೆಂಬ ಅಂಶವನ್ನು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳಬೇಕಾಗಿದೆ. ಮೈಸೂರು ಜಿಲ್ಲೆಯ ಪರಿಸ್ಥಿತಿ ಕೂಡ ಅಷ್ಟು ಚೆನ್ನಾಗಿಲ್ಲವೆಂಬುದನ್ನು ನಾನು ತಿಳಿದುಕೊಂಡಿದ್ದೇನೆ. ಇಲ್ಲಿಗೆ 8–10 ದಿವಸಗಳ ಕೆಳಗೆ ಕಾಮಗಾರಿಗಳನ್ನು ಕೈಕೊಳ್ಳತಕ್ಕ ಬಗ್ಗೆ ಕೆಲವು ಮೊಬಲಗುಗಳನ್ನು ಒದಗಿಸಿದ್ದೇವೆ. ಇನ್ನೂ ಸಾಧ್ಯವಾದಷ್ಟನ್ನು ಒದಗಿಸಲು ಪ್ರಯತ್ನಪಡುತ್ತೇವೆ. ಇಷ್ಟು ವಿವರಣೆಯನ್ನು ಕೊಟ್ಟಿರತಕ್ಕ ಕಾರಣ ತಾವು ಈ ನಿರ್ಣಯವನ್ನು ವಾಪಸುತೆಗೆದುಕೊಳ್ಳುತ್ತೀರೆಂದು ನಂಬಿದ್ದೇನೆ.

Sri M. LINGANNA.—In view of the assurance given by the Hon'ble Minister for Revenue and Public Works, I beg to leave to withdraw the cut motion.

The cut motion was, by leave, withdrawn.

Sri B. V. NARAYANA REDDY.—I oppose the demand, Sir.

Mr. SPEAKER.—Yes, there are three minutes more. The Hon'ble Member may go on with his speech.

Sri B. V. NARAYANA REDDY.—The fundamental aspect of democracy is—as they say—"The Government of the people for the people and by the people", I am subject to correction Sir.

Famine ಎನ್ನುವುದಕ್ಕೆ ಅರ್ಥವೇನು? ಅಭಾವ ಎನ್ನುವುದಕ್ಕೆ ಅರ್ಥವೇನು! ಎಂದು ಕೇಳುತ್ತಿದ್ದಾರೆ. ಅನ್ನ ನೀರಿಲ್ಲದೆ ಮನುಷ್ಯರೂ ಹುಲ್ಲೂ ನೀರೂ ಇಲ್ಲದೇ ದನಕರುಗಳೂ, ಸಾಯುವ ಸ್ಥಿತಿ ಬಂದಿದೆ. ಪರಿಸ್ಥಿತಿ ಇಷ್ಟು ತುಟಾರಿಸಿದ್ದಾಗಲೂ, ಇವರು ಇನ್ನೂ ಅವರಿಗೆ ಬರೆಯುತ್ತೇವೆ, ನೋಡುತ್ತೇವೆ, ಎಂದರೆ, ಇವರು ಅವರಿಗೆ ಬರೆದು ಅವರು ಆ ಸಹಾಯಗಳನ್ನು ಕಳುಹಿಸುವ ವೇಳೆಗೆ ಇಲ್ಲಿ ಎಲ್ಲರೂ ಸತ್ತುಹೋಗಿರುತ್ತಾರೆ. ಹಾಗೆ ಜನ ಜಾನುವಾರುಗಳು ಸತ್ತು ಹೋದ ಮೇಲೆ ಆ ಅನುಕೂಲಗಳನ್ನು ಕಲ್ಪಿಸುವುದಕ್ಕೇನು ಈ ಸರ್ಕಾರ ಇರುವುದು? ಹೀಗೆ ಜನ ಜಾನುವಾರುಗಳು ಹೊಟ್ಟೆಗಿಲ್ಲದೆ ಸಾಯುತ್ತಿರುವುದನ್ನು ತಡೆಗಟ್ಟದಿದ್ದ ಮೇಲೆ ಈ ಸರ್ಕಾರ ಇದ್ದರೇನು? ಹೋದರೇನು? ಪಶುಗಳಿಗೇ ಒಂದು ಸರ್ಕಾರ, ಜನಗಳಿಗೇ ಒಂದು ಸರ್ಕಾರ ಎಂದು ಇದೆಯೇನು? ನೀವು ನಮ್ಮ ಬಾಗೇಪಲ್ಲಿ ತಾಲ್ಲೂಕಿಗೆ ಒದಗಿಸಿರತಕ್ಕ ಮೊಬಲಗು ಒಂದು ಪೈಸಾಕ್ಕೆ ಕೂಡ ಆ ತಾಲ್ಲೂಕಿಗೆ ಸಾಲದು. ಅದು ತೀರಾ ಅಲ್ಪ ಮೊಬಲಗಾಗಿದೆ. ಪರಿಸ್ಥಿತಿ ತೀರಾ ಹದಗೆಟ್ಟಿರುವಾಗ, ಈ ದಿವಸ ಆಗುವುದಿಲ್ಲ, ನಾಳೆ ನೋಡೋಣ, ನಾಳೆ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ತಾವು ಹಾಗೆಯೇ ಮಾಡಿ. ಆದರೆ ಈಗ ಸಾಯುತ್ತಿರುವವರಿಗೆ ಮೊದಲು ಔಷಧಿ ಕೊಡಿ. ಆ ಮೇಲೆ ನೀವು ನಾಳೆಯಾದರೂ ತರಿಸಿ ನಾಳಿದ್ದಾದರೂ ತರಿಸಿ. ಹೀಗೆ ಮಳೆ ಬೆಳೆಗಳಿಲ್ಲದೆ ಕ್ಷಾಮಪೀಡಿತ ಪ್ರದೇಶಕ್ಕೆ 30 ಲಕ್ಷ ರೂಪಾಯಿಗಳವರೆಗೂ ಕೊಟ್ಟಿದ್ದೀರಿ; ಆದರೆ ಏತಕ್ಕೂ ಸಾಲದಾಗಿದೆ. ಹೀಗಾಗಿ ನಮ್ಮ ಜಿಲ್ಲೆಯಲ್ಲಿ ಹೊಟ್ಟೆಗಿಲ್ಲದೆ ಅನೇಕ ಗ್ರಾಮಗಳಲ್ಲಿ ಜನರು ಸಾಯುತ್ತಿದ್ದಾರೆ. ದನಕರುಗಳಗೆ ಕೇಳಂತೂ ಹೇಳತೀರದಾಗಿದೆ.

ಶ್ರೀ ಎಚ್. ಆರ್. ನಾಗಪ್ಪಶೆಟ್ಟರು (ಶಿವಮೊಗ್ಗ).—ಹೊಟ್ಟೆಗಿಲ್ಲದೆ ಜನರು ಸಾಯುತ್ತಿದ್ದಾರೆಂದು ಅವರು ಹೇಳುತ್ತಿರುವುದು ಸರಿಯಲ್ಲ, ಸ್ವಾಮಿ; ಆ ರೀತಿ ಯಾರೂ ಸತ್ತಿಲ್ಲ.

ಶ್ರೀ ಬಿ. ವಿ. ನಾರಾಯಣ ರೆಡ್ಡಿಯವರು.—ಅನೇಕ ಜನರು ನಮ್ಮ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಕನಮಕುಟಪಲ್ಲಿ, ನೀರಗಂಟಪಲ್ಲಿ ಇತ್ಯಾದಿ ಹಳ್ಳಿಗಳಲ್ಲಿ ಹೊಟ್ಟೆಗಿಲ್ಲದೆ ಸಾಯುತ್ತಿದ್ದಾರೆ. ಏಕೆ ನಮ್ಮ ತಾಲ್ಲೂಕಿನಲ್ಲಿ ತಿರುಮಲಪ್ಪ ಎಂಬಾತನು ಹೊಟ್ಟೆಗಿಲ್ಲದೇ ಸತ್ತು ಹೋಗಿದ್ದಾನೆ, ತಾ॥ 26—6—52ರಲ್ಲಿ.........

(ಸಭೆಯಲ್ಲಿ ಗದ್ದಲ.)

Mr. SPEAKER.—Order, order.

ಶ್ರೀ ಬಿ. ವಿ. ನಾರಾಯಣ ರೆಡ್ಡಿಯವರು.—ಈ ನಮ್ಮ ಸರ್ಕಾರ ಇರುವುದು ಏತಕ್ಕೆಂದು ನಾನು ಕೇಳುತ್ತೇನೆ. ತಾವು ಒಂದು ಸಮಿತಿಯನ್ನಾದರೂ ಮಾಡಿ, ಸಾಹುಕಾರರುಗಳಲ್ಲಿರತಕ್ಕ ಹಣವನ್ನೆಲ್ಲಾ ತರಿಸಿ, ಈ ಬಡವರನ್ನು ಉದ್ಧಾರಮಾಡಿ. I will be the first man to offer my property. Moreover, this Government and specially our Revenue and Public Works Minister and the Chief Minister "ನಾವು ಹೆದರುವುದಿಲ್ಲ" "ನಾವು ಹೆದರುವುದಿಲ್ಲ" ಎಂದು ಪದೇ ಪದೇ ಹೇಳುತ್ತಿರುತ್ತಾರೆ. ಅದು ನಿಜ. ನಮಗೂ ಗೊತ್ತಿದೆ. ಯಾವಾಗ 75 ಜನರ ಬ್ರೂಟಲ್ ಮೆಜಾರ್ಟಿ ಇದೆಯೋ ಆಗಲೇ ನೀವು ಹೆದರುವುದಿಲ್ಲವೆಂಬುದು ಗೊತ್ತಾಗಿದೆ. ಇಂಥ ಒಂದು ತಮ್ಮ ಮೆಜಾರಿಟಿ ಇರುವುದರಿಂದಲೇ ಜನ ಜಾನುವಾರುಗಳಿಗೆ ಸಹಾಯವಿಲ್ಲದೆ ಅವುಗಳೆಲ್ಲಾ ಸಾಯುವುದಕ್ಕೆ ಪ್ರಾರಂಭವಾಗಿರುವುದು.....

Mr. SPEAKER.—The Hon'ble Member may please resume his seat. I am speaking. I remember that during the morning session the Hon'ble Member said that Government have done nothing. It has been replied. The Hon'ble Chief Minister made that point clear. That is already over.

5 P.M.

It is now Five of the Clock. I will put the demands to the vote.

Sri Kadidal MANJAPPA.—Sir, nobody has died on account of starvation in Kolar District.

Mr. SPEAKER.—

The question is.

"That the respective sums not exceeding the amounts shown in the List of Demands circulated to Members be granted to Government to complete the sums necessary to defray the charges which will come in course of payment during the year ending 31st of March 1953 in respect of Demands Nos, 30, 32, 33 and 34".

The motion was adopted.

(As directed by Mr. Speaker the amounts for Demands which were adopted by the House are reproduced below.)

Demand No. 30—Famine Relief.

54. Famine Relief.

"That a sum not exceeding Rs. 16,00,000 be granted to the Government to complete the sum necessary to defray the charges which will come in course of payment during the year ending 31st day of March 1953, in respect of Famine Relief'."

Demand No. 32—Superannuation Allowances and Pensions.

55. Superannuation Allowances and Pensions.

"That a sum not exceeding Rs. 28,94,000 be granted to the Government to complete the sum necessary to defray the charges which will come in course of payment during the year ending 31st day of March 1953, in respect of 'Superannuation Allowances and Pensions'."

Demand No. 33—Stationery and Printing.

56. Stationery and Printing.

"That a sum not exceeding Rs. 11,17,000 be granted to the Government to complete the sum necessary to defray the charges which will come in course ef payment during the year ending 31st day of March 1953, in respect of 'Stationery and Printing'."

Demand No. 34—Miscellaneous.

57. Miscellaneous.

"That a sum not exceeding Rs. 11,29,000 be granted to the Government to complete the sum necessary to defray the charges which will come in course of payment during the year ending 31st day of March 1953, in respect of 'Miscellaneous'."

Mr. SPEAKER.—The House now stands adjourned and will meet tomorrow at 8-30 A.M.

The House then adjourned at Four Minutes past Five of the Clock to meet again at Thirty Minutes past Eight of the Clock on Friday, 11th July 1952.

WD 2802—GPB—500—24-11-52